## ಅಧ್ಯಾಯ 13

# ಎರಡು ಮೃಗಗಳು

ಪ್ರಕಟನೆ 13ನೇ ಅಧ್ಯಾಯದ ಪ್ರಾಥಮಿಕ ಉದ್ದೇಶವು ಎರಡು ಜೀವಿಗಳನ್ನು ಪರಿಚಯ ಮಾಡುವದಾಗಿದೆ. ಇವರೆಡೂ ಘಟಸರ್ಪದ ಸಂಗಡ ಮೈತ್ರಿ ಹೊಂದಿರುತ್ತವೆ, ಆ ಘಟಸರ್ಪನು ಸೈತಾನನೇ ಎಂಬುದಾಗಿ 12:9ರಲ್ಲಿ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದಾನೆ. 12ನೇ ಅಧ್ಯಾಯವು ಹೇಳಿದ್ದೇನೆಂದರೆ "[ಸ್ತ್ರೀಯ] ಸಂತಾನದವರಲ್ಲಿ ಉಳಿದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧ ಮಾಡುವದು" ಘಟಸರ್ಪನ ಉದ್ದೇಶವಾಗಿತ್ತು ಎಂಬದೆ (12:17). ಆತನು ಇದನ್ನು ಹೇಗೆ ಮಾಡಬೇಕೆಂದು ಯೋಜಿಸಿದನೆಂಬುದನ್ನು 13ನೇ ಅಧ್ಯಾಯವು ವಿವರಿಸುತ್ತದೆ: ಆತನು ತಾನು ತನ್ನ ಉದ್ದೇಶಗಳಿಗಾಗಿ ಬಳಸಿಕೊಳ್ಳಬಹುದಾದ ಮಧ್ಯವರ್ತಿಗಳ ಮೂಲಕವಾಗಿ ಮಾಡುವವನಾಗಿದ್ದನು. 13ನೇ ಅಧ್ಯಾಯದ 1ರಿಂದ 10 ವಚನಗಳು ಆ ಮಧ್ಯವರ್ತಿಗಳೊಳಗೆ ಮೊದಲನೆಯದರ ಕುರಿತು ತಿಳಿಸುತ್ತದೆ: ಸಮುದ್ರದೊಳಗಿಂದ ಬಂದ ಮೃಗ. 11ರಿಂದ 18 ವಚನಗಳು ಎರಡನೆಯ ಮಧ್ಯವರ್ತಿಯ ಕುರಿತು ತಿಳಿಸುತ್ತವೆ: ಭೂಮಿಯಲ್ಲಿರುವ ಮೃಗ.

ಮೃಗಗಳ ಕುರಿತು ವಿವರವಾಗಿ ಅಧ್ಯಯನ ಮಾಡುವದಕ್ಕೆ ಮುನ್ನ, ಸೈತಾನನು ತನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳಲು ಮಧ್ಯವರ್ತಿಗಳನ್ನು ಬಳಸಿಕೊಳ್ಳುತ್ತಾನೆಂಬುದನ್ನು ಒತ್ತಿ ಹೇಳುವದು ಪ್ರಾಮುಖ್ಯವಾಗಿರುತ್ತದೆ. ಆದಿಕಾಂಡ 3ರಲ್ಲಿ ಆತನು ತನ್ನ ಉದ್ದೇಶಗಳನ್ನು ನೆರವೇರಿಸಿಕೊಳ್ಳಲು ಸರ್ಪವನ್ನು ಬಳಸಿಕೊಂಡನು; ಪ್ರಕಟನೆ 13ರಲ್ಲಿ ಆತನು ಮಾನವರ ಮೂಲಕ ಕಾರ್ಯ ಮಾಡುತ್ತಾನೆ. ಯೋಹಾನನ ದಿನಗಳಲ್ಲಿ, ಆತನು ರೋಮನ್ ಅಧಿಕಾರಿಗಳ ಮೂಲಕ ಕ್ರೈಸ್ತರ ಮೇಲೆ ದಾಳಿ ಮಾಡಿದನು; ಇಂದು, ಆತನು ಹಾಗೂ ಆತನ ಪೈಶಾಚಿಕ ಸಹಾಯಕರು ಪ್ರತಿ ದಿನ ಸಂಪರ್ಕಕ್ಕೆ ಬರುವಂತ ಜನರ ಮೂಲಕವಾಗಿ ಕ್ರೈಸ್ತರ ಮೇಲೆ ದಾಳಿ ಮಾಡುತ್ತಾನೆ. ಯೇಸು ತನ್ನ ಶಿಷ್ಯರನ್ನು ಸೇವೆಗೆ ಕಳುಹಿಸಿ ಕೊಟ್ಟ ವೇಳೆ, ಆತನು ಅವರಿಗೆ ದೆವ್ವಗಳ ಬಗ್ಗೆ ಚಿಂತೆ ಮಾಡಿರಿ ಎಂದು ಹೇಳಲಿಲ್ಲ ಆದರೆ "ಜನರ ವಿಷಯದಲ್ಲಿ ಎಚ್ಚರಿಕೆಯಾಗಿರಿ" ಎಂದು ಎಚ್ಚರ ಕೊಟ್ಟನು (ಮತ್ತಾಯ 10:17).

ಹದಿನೆಂಟರೊಳಗೆ ಹದಿನೈದು ವಚನಗಳು ಎರಡು ಜೀವಿಗಳ ವಿನಾಶಕಾರಿ ಹಾಗೂ ಮರಣಾಂತಿಕ ಉದ್ದೇಶದ ಮೇಲೆ ಮುಖ್ಯ ಗಮನವನ್ನು ಹರಿಸುವದದರೊಂದಿಗೆ, ಈ ವಿಭಾಗವು ಭಯಾನಕ ಎಂಬಂತೆ ಕಾಣಿಸಬಹುದು - ಕುಂದಿ ಹೋಗುವಂತೆ ಸಹ ಮಾಡಬಲ್ಲದು. ಆದಿ ಕ್ರೈಸ್ತರಿಗೆ ಸಹಾಯ ಮಾಡುವದಕ್ಕಾಗಿ, ದೇವರು ತನ್ನ ಜನರಿಗೆ ಒಂದು ತಿಳುವಳಿಕೆಯನ್ನು ಕೊಡುವದಕ್ಕೆ ಮತ್ತು ಅವರ ದೃಷ್ಟಿಕೋನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವದಕ್ಕೆ ಪ್ರತಿ ಮೃಗವನ್ನು ಪ್ರಸ್ತುತಪಡಿಸಿದ ನಂತರದಲ್ಲಿ ಒಂದು ಟಿಪ್ಪಣಿಯನ್ನು ಸೇರ್ಪಡೆಗೊಳಿಸುತ್ತಾನೆ (13:9, 10, 18).

ಮೊದಲನೆಯ ಮೃಗದ ಪರಿಚಯ ಮಾಡಿದ ಬಳಿಕ, ವಾಕ್ಯಭಾಗವು ಹೀಗೆ ಹೇಳುತ್ತದೆ,

"ಕಿವಿಯುಳ್ಳವನು ಕೇಳಲಿ" (ವ. 9). ಈ ಪದಗಳು 2 ಮತ್ತು 3 ಅಧ್ಯಾಯಗಳಾದ ಬಳಿಕ ಇದುವರೆಗೆ ಕೇಳಿಸಲ್ಪಟ್ಟಿರಿಲ್ಲ, ಆ ಅಧ್ಯಾಯಗಳಲ್ಲಿ ಯೇಸು ಏಳು ಸಭೆಗೆ ಬರೆದ ಪ್ರತಿಯೊಂದು ಪತ್ರದ ಅಂತ್ಯದಲ್ಲಿ ಒಂದು ಬುದ್ಧಿವಾದವನ್ನು ಕೊಟ್ಟನು. ಇದು ಜಾಗ್ರತೆಯಿಂದ ಕೇಳಿಸಿಕೊಳ್ಳಬೇಕೆಂಬ, ವಿವೇಚಿಸುವವರಾಗಿರಬೇಕು, ಅರ್ಥಮಾಡಿಕೊಳ್ಳಬೇಕು ಎಂಬ ಮನವಿಯಾಗಿರುತ್ತದೆ.

## ಸಮುದ್ರದೊಳಗಿಂದ ಏರಿ ಬಂದ ಮೃಗ (13:1-6)

**[1]ಸಮುದ್ರತೀರದ ಮರಳಿನ ಮೇಲೆ ನಿಂತನು. ಸಮುದ್ರದಿಂದ ಮೃಗವು ಏರಿಬರುವದನ್ನು ಕಂಡೆನು. ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಕೊಂಬುಗಳ ಮೇಲೆ ಹತ್ತು ಮಕುಟಗಳೂ ತಲೆಗಳ ಮೇಲೆ ದೇವದೂಷಣನಾಮಗಳೂ ಇದ್ದವು. ನಾನು ಕಂಡ ಮೃಗವು ಚಿರತೆಯಂತಿತ್ತು; [2]ಅದರ ಕಾಲುಗಳು ಕರಡಿಯ ಕಾಲುಗಳಂತೆಯೂ ಅದರ ಬಾಯಿ ಸಿಂಹದ ಬಾಯಂತೆಯೂ ಇದ್ದವು. ಅದಕ್ಕೆ ಘಟಸರ್ಪನು ಶಕ್ತಿಯನ್ನೂ ಸಿಂಹಾಸನವನ್ನೂ ಮಹಾ ಅಧಿಕಾರವನ್ನೂ ಕೊಟ್ಟನು. [3]ಅದರ ತಲೆಗಳಲ್ಲಿ ಒಂದು ತಲೆ ಗಾಯಹೊಂದಿ ಸಾಯುವ ಹಾಗಿರುವದನ್ನು ಕಂಡೆನು. ಆ ಮರಣಕರವಾದ ಗಾಯವು ವಾಸಿಯಾಯಿತು; ಭೂಲೋಕದವರೆಲ್ಲರು ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು; [4]ಘಟಸರ್ಪನು ಆ ಮೃಗಕ್ಕೆ ಅಧಿಕಾರವನ್ನು ಕೊಟ್ಟವನಾದ್ದರಿಂದ ಅವರು ಆ ಘಟಸರ್ಪನಿಗೆ ನಮಸ್ಕಾರ ಮಾಡುವವರಾದರು. ಇದಲ್ಲದೆ ಆ ಮೃಗಕ್ಕೂ ನಮಸ್ಕಾರ ಮಾಡಿ - ಈ ಮೃಗಕ್ಕೆ ಸಮಾನರು ಯಾರು? ಇದರ ಮೇಲೆ ಯುದ್ಧಮಾಡುವದಕ್ಕೆ ಯಾರು ಶಕ್ತರು? ಅಂದರು. [5]ಬಡಾಯಿ ಮಾತುಗಳನ್ನೂ ದೂಷಣೆಯ ಮಾತುಗಳನ್ನೂ ಆಡುವ ಬಾಯಿ ಅದಕ್ಕೆ ಕೊಡಲ್ಪಟ್ಟಿತು. ಮತ್ತು ನಾಲ್ವತ್ತೆರಡು ತಿಂಗಳ ಪರ್ಯಂತರ ತನ್ನ ಕಾರ್ಯಗಳನ್ನು ನಡಿಸುವ ಅಧಿಕಾರವೂ ಅದಕ್ಕೆ ಕೊಡಲ್ಪಟ್ಟಿತು. [6]ಅದು ಬಾಯಿತೆರೆದು ದೇವರನ್ನು ದೂಷಿಸಿದ್ದಲ್ಲದೆ ಆತನ ನಾಮವನ್ನೂ ಆತನ ನಿವಾಸವನ್ನೂ ಪರಲೋಕ ನಿವಾಸಿಗಳನ್ನೂ ದೂಷಿಸಿತು.**

**ವಚನ 1. ಸಮುದ್ರತೀರದ ಮರಳಿನ ಮೇಲೆ ನಿಂತನು. ಘಟಸರ್ಪನು** ಎಂಬ ಪದವು ಮೂಲವಾಕ್ಯದಲ್ಲಿ ಸಿಕ್ಕುವದಿಲ್ಲ. **ನಿಂತನು** (ἐστάθη, *estathē*) ಎಂಬ ಕ್ರಿಯಾಪದದ ಮುಕ್ತಾಯವು ಅಲ್ಲಿ ಕತೃವು "ಆತನು" ಎಂದಾಗಿರುತ್ತದೆ. ಕೆಲವು ಹಸ್ತಪ್ರತಿಗಳಲ್ಲಿ ಬೇರೆ ಪದ (ἐστάθην, *estathēn*) ಬಳಸಲ್ಪಟ್ಟಿದೆ, ಅದು ಕತೃವನ್ನು "ನಾನು" ಎಂಬದಾಗ ಸೂಚಿಸುತ್ತದೆ (ನೋಡಿರಿ KJV). ಹೇಗೂ, ಪುರಾವೆಗಳು "ಆತನು" ಎಂಬುದಕ್ಕೆ ಒಲವು ತೋರುತ್ತವೆ ಅದು 12ನೇ ಅಧ್ಯಾಯದ ಘಟಸರ್ಪನನ್ನು ಸೂಚಿಸುತ್ತದೆ. ಆದದರಿಂದ ಕೆಲವು ಆಧುನಿಕ ತರ್ಜುಮೆಗಳು ಇದನ್ನು 12ನೇ ಅಧ್ಯಾಯದ ಅಂತ್ಯದಲ್ಲಿ 18ನೇ ವಚನ ಎಂಬದಾಗಿ ಸೇರ್ಪಡೆಗೊಳಿಸಿರುತ್ತವೆ. ಘಟಸರ್ಪವು ಸಮುದ್ರದ ದಡದ ಮೇಲೆ, ತನ್ನ ಮಿತ್ರನಿಗಾಗಿ ಕಾಯುತ್ತಾ – ಬಹುಶಃ ಕರೆಯುತ್ತಾ ಸಹ – ನಿಂತಿರುವ ವೇಳೆ, ಇಲ್ಲಿ ಒಂದು ನಾಟಕೀಯ ಸ್ಪರ್ಶ ಇರಬಹುದಾಗಿದೆ. ಸನ್ನಿವೇಶದಲ್ಲಿ, ಸಮುದ್ರವು ಬಹುಶಃ ಚಡಪಡಿಸುತ್ತಿರುವ ವಿಫುಲವಾದ ಮಾನವ ಜನಾಂಗವನ್ನು ಪ್ರತಿನಿಧಿಸುತ್ತಿರಬಹುದಾಗಿದೆ. (17:1, 15ರೊಂದಿಗೆ ಹೋಲಿಸಿರಿ; ಅಲ್ಲದೆ ಯೆಶಾಯ 60:5ನ್ನು ಸಹ ನೋಡಿರಿ.) ನಾವು ಅದನ್ನು ಗರ್ಜಿಸುತ್ತಿರುವ, ಪ್ರತಿಯೊಂದು ಎಲ್ಲೆಗಳಿಂದಲೂ ರಭಸವಾದ ಗಾಳಿಗಳಿಂದ ಹೊಡೆದುಕೊಳ್ಳುತ್ತಿರುವ, ನೀರನ್ನು ಗಾಳಿಯಲ್ಲಿ ಸಿಂಪಡಿಸುತ್ತಿರುವ ಸಮುದ್ರ" ಎಂಬದಾಗಿ ನಾವು ಅದನ್ನು ಕಾಣತಕ್ಕದ್ದು; ನಾವು "ಮೃಗೀಯ

ಜೀವಿಗಳ ವಿಷಣ್ಣದ ಗೋಳಿನಿಂದ ಕೂಡಿದ ಗರ್ಜನೆ"[1] ಯನ್ನು ಕೇಳಿಸಿಕೊಳ್ಳತಕ್ಕದ್ದು. (ಈ ಬಣ್ಣನೆಯನ್ನು ದಾನಿಯೇಲ 7:2ರಲ್ಲಿರುವ "ಮಹಾ ಸಾಗರ" ಎಂಬುದರೊಂದಿಗೆ ಹೋಲಿಸಿರಿ.)

ಯೋಹಾನನು ನೋಡುತ್ತಿರುವ ವೇಳೆ, ಒಂದು ಭಯಾನಕವಾಗಿರುವ ಮೃಗವು ಅಲ್ಲೋಲಕಲ್ಲೋಲವಾಗಿರುವ ಸಮುದ್ರದೊಳಗಿಂದ ಹೊರಗೆ ಬರುತ್ತದೆ. ಮೊದಲನೆಯದಾಗಿ, ಅದರ ತಲೆಯು ನೊರೆಯೊಳಗಿಂದ ಇಣುಕಿ ನೋಡುತ್ತದೆ, ಬಳಿಕ ಅದರ ದೇಹವು ಕಾಣಿಸುತ್ತದೆ: **ಸಮುದ್ರದಿಂದ ಮೃಗವು ಏರಿಬರುವದನ್ನು ಕಂಡೆನು. ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಕೊಂಬುಗಳ ಮೇಲೆ ಹತ್ತು ಮುಕುಟಗಳೂ ತಲೆಗಳ ಮೇಲೆ ದೇವದೂಷಣ ನಾಮಗಳೂ ಇದ್ದವು. ನಾನು ಕಂಡ ಮೃಗವು ಚಿರತೆಯಂತಿತ್ತು.** ಈ ಮೃಗವು 11ನೇ ಅಧ್ಯಾಯದಲ್ಲಿ ಕ್ಲುಪ್ತವಾಗಿ ಪ್ರಸ್ತಾಪಿಸಲ್ಪಟ್ಟ ಮೃಗವಾಗಿದೆ, ಆ ಅಧೋಲೋಕದಿಂದ ಬಂದ ಎದುರಿಸಲು ಕಷ್ಟವಾದಂಥ ಹಾಗೂ ಇಬ್ಬರು ಸಾಕ್ಷಿಗಳನ್ನು ಕೊಂದಂತಹ ಜೀವಿಯಾಗಿದೆ (11:7). 13ನೇ ಅಧ್ಯಾಯದ ಮೃಗವು ಅನಂತರದಲ್ಲಿ ಪುನಃ ಅಧೋಲೋಕದಿಂದ ಬರುವ ಮೃಗವಾಗಿ ಚಿತ್ರಿಸಲ್ಪಟ್ಟಿದೆ (17:3, 7, 8). ಮೃಗವು ಕೆಲವು ಸಾರಿ ಅಧೋಲೋಕದಿಂದ ಮತ್ತು ಇನ್ನು ಕೆಲವು ಸಾರಿ ಸಮುದ್ರದಿಂದ ಬರುವದಾಗಿ ಚಿತ್ರಿಸಲ್ಪಟ್ಟಿರುವ ವಿಷಯವಾಗಿ ಚಿಂತಿಸಬೇಕಾಗಿಲ್ಲ: (1) "ಅಧೋಲೋಕ" ಎಂಬ ಪದವು ಗ್ರೀಕ್ ಹಳೆಯ ಒಡಂಬಡಿಕೆಯಲ್ಲಿ ಮುಖ್ಯವಾಗಿ ಸಾಗರದ ಆಳಗಳನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ (9:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಅದು ಹಳೆಯ ಒಡಂಬಡಿಕೆಯಲ್ಲಿ ಬಹಳ ಸಾಮಾನ್ಯವಾಗಿ "ಕೂಪ" ಎಂದು ಅನುವಾದಿಸಲ್ಪಟ್ಟಿರುತ್ತದೆ. "ಅಧೋಲೋಕ" ಮತ್ತು "ಸಮುದ್ರ" ಇವುಗಳ ನಡುವೆ ಒಂದು ನಿಕಟವಾದ ಸಂಬಂಧವಿರುತ್ತದೆ. (2) ಪ್ರಕಟನೆ ಪುಸ್ತಕವು ಸಾಂಕೇತಿಕ ಭಾಷೆಯಲ್ಲಿ ಸಮೃದ್ಧವಾಗಿದೆ, ಮತ್ತು ಸಾಂಕೇತಿಕತೆಯು ಅದರ ಸ್ವಭಾವತಃ ದ್ರವವಾಗಿರುತ್ತದೆ.

ಪುಸ್ತಕದ ಉಳಿದ ಭಾಗದಲ್ಲಿ, ಸಮುದ್ರದೊಳಗಿಂದ ಬರುವ ಮೃಗವು ಕೇವಲ "ಮೃಗ" ಎಂದು ಕರೆಯಲ್ಪಟ್ಟಿದ್ದರೆ ಆತನ ಪಾಲುದಾರನಾದ ಭೂಮಿಯ ಮೇಲಿನ ಮೃಗವು, "ಸುಳ್ಳುಪ್ರವಾದಿ" ಎಂದು ಕರೆಯಲ್ಪಟ್ಟಿದ್ದಾನೆ (ನೋಡಿರಿ 16:13; 19:20; 20:10). ಆದದರಿಂದ, ಆ ಬಿರುದುಗಳು ಆಗಾಗ ಬಳಸಲ್ಪಡುವವು.

ಸೈತಾನನು ವಿವಿಧ ರೀತಿಗಳಲ್ಲಿ ಕ್ರೈಸ್ತರನ್ನು ಹೆದರಿಸುವದಕ್ಕೆ ಪ್ರಯತ್ನಿಸುತ್ತಾನೆ. ಒಂದು ರೀತಿಯೆಂದರೆ ಶಕ್ತಿಯನ್ನು ಬಳಸುವ ಮೂಲಕವಾಗಿದೆ. ಮೃಗದ ವಿವರಣೆ ಹಾಗೂ ಆತನ ಮಹಾ ಶಕ್ತಿಯ ಸೂಚನೆಗಳನ್ನು ಕುರಿತ ಆ ವರ್ಣನೆಯ ಕಡೆಗೆ ಇನ್ನೊಮ್ಮೆ ನೋಡುವದಕ್ಕೆ ಭಯಾನಕವಾಗಿರುತ್ತದೆ. ಘಟಸರ್ಪನ ರೀತಿಯಲ್ಲಿಯೇ, ಈತನಿಗೆ **ಏಳು ತಲೆಗಳೂ ಹತ್ತು ಕೊಂಬುಗಳೂ** ಇದ್ದವು, ಮತ್ತು ಅನೇಕ **ಮುಕುಟಗಳೂ** ಇದ್ದವು. ಘಟಸರ್ಪನು ಏಳು ಮುಕುಟಗಳನ್ನು ಹೊಂದಿದ್ದಾನೆ ಯಾಕೆಂದರೆ ಅವುಗಳ ಆತನ ಏಳು ತಲೆಗಳ ಮೇಲೆ ಇರುತ್ತವೆ (12:3); ಮೃಗಕ್ಕೆ **ಹತ್ತು** ಮುಕುಟಗಳಿರುತ್ತವೆ ಯಾಕೆಂದರೆ ಅವುಗಳು ಅದರ ಹತ್ತು ತಲೆಗಳ ಮೇಲೆ ಇರುತ್ತವೆ. ಮುಕುಟಗಳ ಸ್ಥಳವು ಬದಲಾಗುವ ವಿಷಯವಾಗಿ ಯಾವದೇ ಮಹತ್ವದ ಅರ್ಥವು ಇರಬಹುದು ಅಥವಾ ಇಲ್ಲದಿರಬಹುದು. ಕೆಲವರು ಸೈತಾನನ ತಲೆಯ ಮೇಲಿರುವ ಮುಕುಟಗಳನ್ನು ವಾಸ್ತವ ಅಧಿಕಾರಕ್ಕೆ ಒಂದು ಸೂಚನೆಯಾದರೆ, ಮೃಗದ ಹತ್ತು ತಲೆಗಳ ಮೇಲಿರುವ ಮುಕುಟಗಳು ಬೇರೊಂದು ಮೂಲದಿಂದ ಪಡೆದುಕೊಂಡ ಅಧಿಕರವನ್ನು ಸೂಚಿಸುತ್ತದೆ.

ನಂತರದ ಒಂದು ಅಧ್ಯಾಯದಲ್ಲಿ, ಘಟಸರ್ಪನ ರೀತಿಯಲ್ಲಿಯೇ, ಮೃಗವು ಬಣ್ಣದಲ್ಲಿ ಕೆಂಪಾಗಿರುತ್ತದೆಂಬುದನ್ನು ವಾಚಕನು ಕಲಿತುಕೊಳ್ಳುವನು (17:3). ಮಾನವರು ಹೇಗೆ ದೇವರು

ಸ್ವರೂಪದಲ್ಲಿ ನಿರ್ಮಿಸಲ್ಪಟ್ಟಿದ್ದಾರೋ (ಆದಿಕಾಂಡ 1:26), ಹಾಗೆಯೇ ಮೃಗವು ಅದರ ನಿರ್ಮಾಣಿಕನ ಸ್ವರೂಪದಲ್ಲಿ ಮಾಡಲ್ಪಟ್ಟಿರುತ್ತದೆ. ಘಟಸರ್ಪದ ಕುರಿತು ಅಧ್ಯಯನ ಮಾಡುವ ವೇಳೆ, ಅದರ ರಕ್ತ-ಕೆಂಪು ಬಣ್ಣವು ಕೊಲೆಗಡುಕ ಪ್ರವೃತ್ತಿಗಳನ್ನು ಸೂಚಿಸುತ್ತದೆಂಬದಾಗಿ ಅಭಿಪ್ರಾಯವನ್ನು ತಿಳಿಸಲಾಗಿತ್ತು; ಆತನಿಗಿರುವ ಏಳು ತಲೆಗಳು ಕುಟಿಲತೆ ಹಾಗೂ ಕುಯುಕ್ತಿಯನ್ನು ಸೂಚಿಸುವದು; ಆತನ ಹತ್ತು ಕೊಂಬುಗಳು, ಆತನಿಗಿರುವ ಮಹಾ ಶಕ್ತಿಯನ್ನು ಸೂಚಿಸುತ್ತವೆ; ಮತ್ತು ಆತನ ಅನೇಕ ಮುಟುಕಗಳು, ಆತನಿಗಿರುವ ಮಹಾ ಅಧಿಕಾರವನ್ನು ಸೂಚಿಸುತ್ತವೆ (12:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಎಲ್ಲಾ ಗುಣಗಳು ಈಗ ಮೃಗಕ್ಕೆ ವರ್ಗಾಯಿಸಲ್ಪಟ್ಟಿರುತ್ತವೆ. 17ನೇ ಅಧ್ಯಾಯದಲ್ಲಿನ ಮೃಗದ ತಲೆಗಳು ಹಾಗೂ ಕೊಂಬುಗಳಿಗಿರುವ ಹೆಚ್ಚುವರಿ ಸಾಂಕೇತಿ ಮಹತ್ವವನ್ನು ತಿಳಿಸಲಾಗಿರುತ್ತದೆ; ಹೇಗೂ, 13ನೇ ಅಧ್ಯಾಯದಲ್ಲಿ ಮೃಗದ ಸ್ವರೂಪವು ಘಟಸರ್ಪದ ರೀತಿಯಲ್ಲಿರುವದರ ಮೇಲೆ ಮುಖ್ಯ ಒತ್ತು ಕೊಡಲಾಗಿರುತ್ತದೆ.

ಪ್ರಥಮ ಬಾರಿಗೆ ನೋಡಿದಾಗ, ಮೃಗವು ಸ್ವತಃ ದೇವರಿಗಿಂತಲೂ ಬಲಿಷ್ಠವಾಗಿರುವಂತೆ ತೋರುವದು - ಯಾಕೆಂದರೆ ಆತನು ದೇವರನ್ನು ದೂಷಣೆ ಮಾಡಿಯೂ ಯಾವ ಪರಿಣಾಮಗಳನ್ನು ಅನುಭವಿಸದೆ ಇರುವಂತೆ ಕಾಣಿಸುವನು. 1ನೇ ವಚನವು ಆತನ **ತಲೆಗಳ ಮೇಲೆ ದೇವದೂಷಣನಾಮಗಳು** ಇದ್ದವು ಎಂದು ಹೇಳುತ್ತದೆ. ಹಸ್ತಪ್ರತಿಗಳ ಪುರಾವೆಯು ಅದು "ನಾಮಗಳು" (ὀνόματα, *onomata*) ಎಂದಿರಬೇಕೋ ಅಥವಾ "ನಾಮ" (ὄνομα, *onoma*) ಎಂದಿರಬೇಕೋ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ಹೊಂದಿವೆ. NIVಯು "ಮತ್ತು ಪ್ರತಿಯೊಂದು ತಲೆಯ ಮೇಲೆ ದೇವದೂಷಣನಾಮ ಇತ್ತು" ಎಂಬ ಮಾತುಗಳ ಮೂಲಕ ಅರ್ಥವನ್ನು ಸ್ಪಷ್ಟಗೊಳಿಸುವದಕ್ಕೆ ಪ್ರಯತ್ನಿಸುತ್ತದೆ. ಈ "ದೇವದೂಷಣನಾಮಗಳು" ಬಹುಶಃ ರೋಮನ್ ಚಕ್ರವರ್ತಿಗಳು ತಮಗೋಸ್ಕರ ಅನ್ವಯಿಸಿಕೊಂಡಿದ್ದ ದೇವತೆಗಳ ಬಿರುದುಗಳಾಗಿರಬಹುದಾಗಿದೆ.

> ಪ್ರತಿಯೊಬ್ಬ ಚಕ್ರವರ್ತಿಯು *divus* ಅಥವಾ *sebastos* ಎಂದು ಕರೆಯಲ್ಪಡುತ್ತಿದ್ದನು, ಅದರರ್ಥವು "ದೈವಿಕ" ಎಂದಾಗಿದೆ. ಪದೇಪದೇ ಸ್ವತಃ *ದೇವರ* ಅಥವಾ *ದೇವಕುಮಾರನ* ಹೆಸರು ಚಕ್ರವರ್ತಿಗಳಿಗೆ ಕೊಡಲ್ಪಡುತ್ತಿತ್ತು; ಮತ್ತು ನೀರೋ ಚಕ್ರವರ್ತಿಯು ತನ್ನ ನಾಣ್ಯಗಳ ಮೇಲೆ ತನ್ನನ್ನು *ಲೋಕದ ರಕ್ಷಕನು* ಎಂದು ಕರೆದುಕೊಂಡಿದ್ದನು ... ಅಷ್ಟುಮಾತ್ರವಲ್ಲದೆ, ಅನಂತರ ಬಂದ ಚಕ್ರವರ್ತಿಗಳು ತಮಗೆ ಲ್ಯಾಟಿನ್ ಭಾಷೆಯ *dominus*, ಅಥವಾ ಅದರ ಗ್ರೀಕ್ ಸಮಾನವಾದ *kurios* ಎಂಬ ಬಿರುದುಗಳನ್ನು ಇಟ್ಟುಕೊಂಡರು, ಈ ಎರಡೂ ಪದಗಳ ಅರ್ಥವು *ಕರ್ತನು* ಮತ್ತು ಹಳೆಯ ಒಡಂಬಡಿಕೆಯಲ್ಲಿ ಅವುಗಳು ದೇವರ ವಿಶೇಷ ಬಿರುದು ಹಾಗೂ ಹೊಸ ಒಡಂಬಡಿಕೆಯಲ್ಲಿ ಯೇಸು ಕ್ರಿಸ್ತನ ವಿಶೇಷ ಬಿರುದು ಆಗಿರುತ್ತವೆ.[2]

ಅನಂತರ, ಮೃಗದ "ಮೈಮೇಲೆಲ್ಲಾ ದೇವದೂಷಣೆಯ ಹೆಸರುಗಳು *ತುಂಬಿದ್ದವು"* ಎಂದು ಹೇಳಲಾಗುತ್ತದೆ (17:3; ಒತ್ತಿ ಹೇಳಿದ್ದು ನನ್ನದು), ರೋಮನ್ ಸಾಮ್ರಾಜ್ಯದಲ್ಲಿರುವವರು ಚಕ್ರವರ್ತಿಗಳಿಂದ ಬಳಸಲ್ಪಟ್ಟ ದೇವದೂಷಣೆಯ ನಾಮಗಳನ್ನು ಅಂಗೀಕರಿಸಿಕೊಂಡಿದ್ದರೆಂಬುದನ್ನು ಅದು ಸೂಚಿಸುತ್ತದೆ.

**ವಚನ 2. ನಾನು ಕಂಡ ಮೃಗವು ಚಿರತೆಯಂತಿತ್ತು; ಅದರ ಕಾಲುಗಳು ಕರಡಿಯ ಕಾಲುಗಳಂತೆಯೂ ಅದರ ಬಾಯಿ ಸಿಂಹದ ಬಾಯಂತೆಯೂ ಇದ್ದವು.** ಮೃಗದ ವಿವರಣೆಯು ನಮಗೆ "Frankensteinನ ರಾಕ್ಷಸ"ನನ್ನು ಜ್ಞಾಪಿಸುತ್ತದೆ. Mary Shelleyಳ ವೈಜ್ಞಾನಿಕ/ಭಯಾನಕ ಕಾದಂಬರಿಯಾದ *Frankenstein* (1818) ನಲ್ಲಿ, ಡಾ.

Frankensteinನು ಮೃತ ದೇಹಗಳ ತುಂಡುಗಳಿಂದ ತಾನು ನಿರ್ಮಿಸಿದ್ದ ಮನುಷ್ಯ ರೀತಿಯ ಒಂದು ಜೀವಿಗೆ ಜೀವ ತುಂಬಿದನು. ಪ್ರಕಟನೆ 13ನೇ ಅಧ್ಯಾಯದಲ್ಲಿನ ಮೃಗವು ಪ್ರವಾದಿಯಾದ ದಾನಿಯೇಲನ ದರ್ಶನವೊಂದರಲ್ಲಿ ಬಣ್ಣಿಸಲ್ಪಟ್ಟಿರುವ ನಾಲ್ಕು ಮೃಗಗಳನ್ನು ಒಟ್ಟಿಗೆ ಸೇರಿಸಿ ಮಾಡಿದ ಒಂದು ತೇಪೆ ಕೆಲಸವಾಗಿರುತ್ತದೆ (ದಾನಿಯೇಲ 7:2-27). ದಾನಿಯೇಲನು ಆ ದರ್ಶನಕ್ಕೆ ನೀಡಿದ ವಿವರಣೆಯ ಕೆಲವೊಂದು ಮುಖ್ಯ ಪದಗಳು ಇಲ್ಲಿವೆ:

> ... ಆಹಾ, ಚತುರ್ದಿಕ್ಕಿನ ಗಾಳಿಗಳೂ ಮಹಾ ಸಾಗರದ ಮೇಲೆ ರಭಸವಾಗಿ ಬೀಸಿ ಬಡಿಯುತ್ತಿದ್ದವು. ಒಂದಕ್ಕೊಂದು ವಿಲಕ್ಷಣವಾದ ನಾಲ್ಕು ದೊಡ್ಡ ಮೃಗಗಳು ಸಾಗರದೊಳಗಿಂದ ಬಂದವು. ಮೊದಲು ಕಾಣಿಸಿದ ಮೃಗವು *ಸಿಂಹ*ದ ಹಾಗಿತ್ತು ... ಆಹಾ, ಇನ್ನೊಂದು ಮೃಗ, ಎರಡನೇದು; ಅದು ಕರಡಿಯ ಹಾಗಿತ್ತು ... ಅನಂತರ ನಾನು ನೋಡುತ್ತಿರುವಲ್ಲಿ ಇಗೋ, *ಚಿರತೆ*ಯ ಹಾಗಿರುವ ಮತ್ತೊಂದು ಮೃಗವು ಕಾಣಿಸಿತು ... ಆ ಮೃಗಕ್ಕೆ *ನಾಲ್ಕು ತಲೆಗಳಿದ್ದವು*, ಅದಕ್ಕೆ ದೊರೆತನವು ಕೊಡೋಣವಾಯಿತು ... ಸ್ವಲ್ಪ ಹೊತ್ತಿನ ಮೇಲೆ ಆಹಾ, ನಾಲ್ಕನೆಯ ಮೃಗವು ಕಾಣಿಸಿತು; ಅದು ಭಯಂಕರ, ಹೆದರಿಸುವಂಥದು, ಅಧಿಕಬಲವುಳ್ಳದ್ದು; ಅದಕ್ಕೆ ಕಬ್ಬಿಣದ ದೊಡ್ಡ ಹಲ್ಲುಗಳಿದ್ದವು; ಅದು ನುಂಗುತ್ತಾ ಚೂರುಚೂರು ಮಾಡುತ್ತಾ ಮಿಕ್ಕದ್ದನ್ನು ಕಾಲುಗಳಿಂದ ತುಳಿಯುತ್ತಾ ಇತ್ತು; ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವಿಲಕ್ಷಣವಾಗಿತ್ತು; ಅದಕ್ಕೆ *ಹತ್ತು ಕೊಂಬುಗಳಿದ್ದವು* (ದಾನಿಯೇಲ 7:2-7; ಒತ್ತಿ ಹೇಳಿದ್ದು ನನ್ನದು).

ದಾನಿಯೇಲ 7ನೇ ಅಧ್ಯಾಯದಲ್ಲಿರುವ ನಾಲ್ಕು ಮೃಗಗಳಲ್ಲಿನ ಲಕ್ಷಣಗಳು ಚಾಣಕ್ಷ್ಯತನದಿಂದ ಪ್ರಕಟನೆ 13ನೇ ಅಧ್ಯಾಯದಲ್ಲಿನ ಸಮುದ್ರದೊಳಗಿಂದ ಬಂದ ಮೃಗದಲ್ಲಿ ಒಂದುಗೂಡಿಸಲ್ಪಟ್ಟಿರುತ್ತವೆ. ಒಬ್ಬನು ಸುರಕ್ಷಿತವಾಗಿ ಊಹಿಸಿಕೊಳ್ಳಬಹುದೇನೆಂದರೆ ದಾನಿಯೇಲ ಪುಸ್ತಕದಲ್ಲಿನ ಸಿಂಹ ಮೃಗ, ಕರಡಿ ಮೃಗ, ಮತ್ತು ಭಯಂಕರ ಮೃಗ ಇವುಗಳು ಒಂದೊಂದು ತಲೆಯನ್ನು ಹೊಂದಿದ್ದವು. ದಾನಿಯೇಲನ ನಾಲ್ಕು ಮೃಗಗಳು *ಒಟ್ಟಾರೆ* ಏಳು ತಲೆಗಳನ್ನು ಹೊಂದಿದ್ದವು, ಅದು ಯೋಹಾನನ ಒಂದು ಮೃಗಕ್ಕಿದ್ದ ತಲೆಗಳಿಗೆ ಸಮವಾಗಿದೆ.

| ದಾನಿಯೇಲನ ಮೃಗಗಳು (ದಾನಿಯೇಲ 7) | |
|---|---|
| ಸಿಂಹ | *ಒಂದು ತಲೆ*ಯುಳ್ಳದ್ದು |
| ಕರಡಿ | *ಒಂದು ತಲೆ*ಯುಳ್ಳದ್ದು |
| ಚಿರತೆ | *ನಾಲ್ಕು ತಲೆಗಳುಳ್ಳದ್ದು* |
| ಭಯಂಕರ ಮೃಗ | *ಒಂದು ತಲೆ* ಮತ್ತು *ಹತ್ತು ಕೊಂಬುಗಳು* ಉಳ್ಳದ್ದು |
| ಯೋಹಾನನ ಮೃಗ (ಪ್ರಕಟನೆ 13:1, 2) | |
| ಒಂದು ಕರಡಿ-ಚಿರತೆ-ಸಿಂಹ ಮೃಗ | *ಏಳು ತಲೆಗಳು* ಮತ್ತು *ಹತ್ತು ಕೊಂಬುಗಳು* ಉಳ್ಳದ್ದು |

ಒಂದಾಗಿ ಬೆಸೆಯಲ್ಪಟ್ಟಿರುವ ನಾಲ್ಕು ಮೃಗಗಳ ಲಕ್ಷಣಗಳು ಶಕ್ತಿ ಹಾಗೂ ಸಾಮರ್ಥ್ಯವನ್ನು ಪ್ರತಿನಿಧಿಸುತ್ತವೆ. ಸಮುದ್ರದಿಂದ ಬಂದ ಮೃಗವು **ಚಿರತೆ**ಯಷ್ಟು ವೇಗವುಳ್ಳದ್ದು, **ಕರಡಿ**ಯಷ್ಟು ಬಲಿಷ್ಠವಾದದ್ದು, **ಸಿಂಹ**ದಷ್ಟು ಕ್ರೂರವಾದದ್ದು, ಮತ್ತು ಯಾವದೇ

ಕಾಡಿನ **ಮೃಗ**ದಷ್ಟೇ ದುಷ್ಟವಾದದ್ದೂ ಆಗಿತ್ತು. "ಮೃಗ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು θηρίον (*thērion*) ಎಂದಾಗಿದ್ದು, ಅದರರ್ಥವು ಒಂದು ಸಾಕುಪ್ರಾಣಿಯಂತೆ ಮಾಡಲ್ಪಟ್ಟಿರುವ ಪ್ರಾಣಿಗೆ ವಿರುದ್ಧವಾದ "ಕಾಡು ಮೃಗ" ಎಂದಾಗಿರುತ್ತದೆ.

ಸಮುದ್ರದ ಮೃಗವು ಏನಾಗಿತ್ತು ಮತ್ತು ಏನಾಗಿರುತ್ತದೆ ಎಂಬುದನ್ನು ಆಲೋಚಿಸುವ ವೇಳೆ, ಸಮುದ್ರದಿಂದ ಬಂದ ಮೃಗವು "ಕ್ರಿಸ್ತ ವಿರೋಧಿ" ಅಲ್ಲ ಎಂಬುದನ್ನು ಪುನಃ ಒತ್ತಿ ಹೇಳುವದು ಪ್ರಾಮುಖ್ಯವಾಗಿರುತ್ತದೆ. ಮೃಗವು ಯಾರು ಅಥವಾ ಏನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ, ದಾನಿಯೇಲನು ಕಂಡ ಮೃಗಗಳು ಯಾರನ್ನು ಅಥವಾ ಏನನ್ನು ಪ್ರತಿನಿಧಿಸುತ್ತವೆ ಎಂಬುದನ್ನು ನಾವು ಮೊದಲು ಅರ್ಥಮಾಡಿಕೊಳ್ಳತಕ್ಕದ್ದು. ದಾನಿಯೇಲ 7ನೇ ಅಧ್ಯಾಯದಲ್ಲಿನ ನಾಲ್ಕು ಮೃಗಗಳ ದರ್ಶನವು ದಾನಿಯೇಲ 2:31-45 ಮತ್ತು 8:3-25ರಲ್ಲಿನ ದರ್ಶನದೊಂದಿಗೆ ಸಂಬಂಧ ಹೊಂದಿದೆ, ಮತ್ತು ನಾಲ್ಕು ಮೃಗಗಳು ನಾಲ್ಕು ರಾಜ್ಯಗಳನ್ನು ಪ್ರತಿನಿಧಿಸುತ್ತವೆ: ಮೊದಲ ರಾಜ್ಯವು ಬಾಬಿಲೋನ್ ಸಾಮ್ರಾಜ್ಯವಾಗಿತ್ತು (ಕ್ರಿ.ಪೂ. 626-539) (2:37, 38). ಎರಡನೆಯ ರಾಜ್ಯವು ಮೇದ್ಯ-ಪಾರಸಿ ಸಾಮ್ರಾಜ್ಯ (ಕ್ರಿ.ಪೂ. 539-330) (8:20), ಮೂರನೆಯ ರಾಜ್ಯವು ಗ್ರೀಕ್ ಸಾಮ್ರಾಜ್ಯ (ಕ್ರಿ.ಪೂ. 330-63) (8:21). ಹಾಗಾದರೆ, ನಾಲ್ಕನೆಯ ರಾಜ್ಯವು ರೋಮನ್ ಸಾಮ್ರಾಜ್ಯವಾಗಿತ್ತು (ಕ್ರಿ.ಪೂ 63-ಕ್ರಿ.ಶ. 476) - ಸುಮಾರು ಕ್ರಿ.ಶ. 30ರ ಹೊತ್ತಿಗೆ ಸಭೆಯು ಸ್ಥಾಪಿಸಲ್ಪಟ್ಟ ವೇಳೆಯಲ್ಲಿ ಅಸ್ತಿತ್ವದಲ್ಲಿದ್ದ ಸಾಮ್ರಾಜ್ಯ ಇದಾಗಿದೆ. "R. H. Charlesನು ... ಹೇಳಿದ್ದೇನೆಂದರೆ ಆದಿ ಕ್ರೈಸ್ತರು ರೋಮನ್ ಸಾಮ್ರಾಜ್ಯವನ್ನು ದಾನಿಯೇಲನ ಪುಸ್ತಕದಲ್ಲಿರುವ ನಾಲ್ಕನೆಯ ರಾಜ್ಯವೆಂಬದಾಗಿ ಪರಿಗಣಿಸಿದ್ದರು, ಅದಕ್ಕೆ ಲೂಕ 21:20ರಲ್ಲಿನ ಯೇಸುವಿನ ಮಾತುಗಳ ರೀತಿಯನ್ನು ಹಾಗೂ ಬಾರ್ನಬನ [ಪ್ರೇರಿತವಲ್ಲದ] ಪತ್ರಿಕೆಯಲ್ಲಿನ ಒಂದು ಉಲ್ಲೇಖವನ್ನು ಆಧಾರವಾಗಿ ತಿಳಿಸುತ್ತಾನೆ."[3]

ಮೌಖಿಕ ಪ್ರೇರಣೆಯಲ್ಲಿ ನಂಬಿಕೆಯಿಲ್ಲದವರು ದಾನಿಯೇಲನು ಈ ಮುಂಚೆ ಅಸ್ತಿತ್ವದಲ್ಲಿದ್ದ ಸಾಮ್ರಾಜ್ಯವೊಂದರ ಬಗ್ಗೆ ಮುಂತಿಳಿಸಲು ಶಕ್ತನಾಗಿದ್ದಿರಬಹುದು ಎಂಬುದನ್ನು ನಂಬುವದಿಲ್ಲ, ಆದ್ದರಿಂದ ಅವರು ನಾಲ್ಕನೆಯ ರಾಜ್ಯವು ರೋಮನ್ ಸಾಮ್ರಾಜ್ಯ ಎಂಬುದನ್ನು ನಿರಾಕರಿಸುತ್ತಾರೆ. ಬೈಬಲ್ ಬರೆಯಲ್ಪಡುವದಕ್ಕೆ ದೇವರು ಜವಾಬ್ದಾರನು ಎಂಬುದನ್ನು ವಿಶ್ವಾಸಿಸುವವರಿಗೆ ಈ ಸತ್ಯವನ್ನು ಯಾವ ಸಂಕೋಚವಿಲ್ಲದೆ ನಂಬುತ್ತಾರೆ. ದಾನಿಯೇಲ 7ನೇ ಅಧ್ಯಾಯದಲ್ಲಿನ ದರ್ಶನದ ಕುರಿತು ಇಲ್ಲಿ ವಿವರವಾಗಿ ಅಧ್ಯಯನ ಮಾಡುವದಕ್ಕೆ ಸ್ಥಳದ ಅಭಾವವಿರುತ್ತದೆ, ಆದರೆ ಈ ಅಂಶದ ಕುರಿತು ಕೆಲವು ಟಿಪ್ಪಣಿಗಳು ಸಹಾಯವಾಗಬಹುದು: (1) ಸಿಂಹ ಮೃಗದ (ನೆಬೂಕದ್ನೇಚ್ಚರ ಹಾಗೂ ಬಾಬಿಲೋನ ಸಾಮ್ರಾಜ್ಯವನ್ನು ಪ್ರತಿನಿಧಿಸುವ) ಕೆಲವು ವಿವರಗಳಿಗಾಗಿ, ನೋಡಿರಿ ದಾನಿಯೇಲ 4:33-36. (2) ಕರಡಿ ಮೃಗವು (ಮೆದ್ದಯ-ಪಾರಸಿ ಸಾಮ್ರಾಜ್ಯ) "ಒಂದು ಹೆಗಲನ್ನು ಮೇಲಕ್ಕೆ ಎತ್ತಿಕೊಂಡಿತು" (ದಾನಿಯೇಲ 7:5) ಯಾಕೆಂದರೆ ಸಾಮ್ರಾಜ್ಯದ ಒಂದು ಭಾಗವು ಮತ್ತೊಂದಕ್ಕಿಂತ ಪ್ರಬಲವಾಗಿತ್ತು - ಅಂದರೆ, ಪಾರಸಿದ ಭಾಗ. (3) ಚಿರತೆ ಮೃಗವು (ಗ್ರೀಕ್ ಸಾಮ್ರಾಜ್ಯ) ನಾಲ್ಕು ತಲೆಗಳನ್ನು ಹೊಂದಿತ್ತು ಯಾಕೆಂದರೆ ಮಹಾ ಅಲೆಗ್ಸಾಂದ್ರನು ಮರಣಿಸಿದ ಬಳಿಕ ಸಾಮ್ರಾಜ್ಯವು ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಿತು.

ಅಲ್ಲದೆ ದಾನಿಯೇಲನ ಪುಸ್ತಕವು ಅರಸ ಮತ್ತು ಸಾಮ್ರಾಜ್ಯದ ನಡುವೆ ಅಷ್ಟೇನೂ ವ್ಯತ್ಯಾಸವನ್ನು ಮಾಡುವದಿಲ್ಲ. ಉದಾಹರಣೆಗೆ, ದಾನಿಯೇಲು ನಾಲ್ಕು ಲೋಹಗಳಿಂದ ನಿರ್ಮಿತವಾಗಿದ್ದ ಪ್ರತಿಮೆಯ ಕುರಿತು ಮಾತಾಡುವ ವೇಳೆ, ಆತನು ಅರಸನಾದ

ನೆಬೂಕದ್ನೇಚ್ಚರನಿಗೆ ಹೀಗೆ ಹೇಳಿದನು: "ನೀನೇ ಆ ಬಂಗಾರದ ತಲೆ. ನಿನ್ನ ಕಾಲವಾದ ಮೇಲೆ ನಿನಗಿಂತ ಕನಿಷ್ಠವಾದ ಮತ್ತೊಂದು ರಾಜ್ಯವುಂಟಾಗುವದು ..." (ದಾನಿಯೇಲ 2:38, 39). ಆ ವಾಕ್ಯಭಾಗದಲ್ಲಿರುವ "ನೀನೇ" ಎಂಬುದರ ಅರ್ಥವು ವಾಸ್ತವಿಕವಾಗಿ "ನಿನ್ನ ಸಾಮ್ರಾಜ್ಯ" ಎಂದಾಗಿರುತ್ತದೆ - ಅಂದರೆ, ಬಾಬಿಲೋನ ಸಾಮ್ರಾಜ್ಯ. ಹೇಗೂ, ಸಾಮ್ರಾಜ್ಯದ ಕೇಂದ್ರಬಿಂದು ಅರಸನಾಗಿರುತ್ತಾನಾದ್ದರಿಂದ, ದಾನಿಯೇಲನು ವೈಯಕ್ತಿಕವಾಗಿ "ನೀನೇ" ಎಂಬ ಪದವನ್ನು ಬಳಸಲು ಸಂಕೋಚ ಪಡಲಿಲ್ಲ.

ನಾಲ್ಕು ಸಾಮ್ರಾಜ್ಯಗಳ ಪಟ್ಟಿಯನ್ನು ಕ್ಲುಪ್ತವಾಗಿ ಮರಳಿ ನೋಡಿಕೊಂಡು ಬಂದ ಬಳಿಕ, ಅವುಗಳಲ್ಲಿ ಸಾಮಾನ್ಯವಾಗಿದ್ದ ಸಂಗತಿ ಯಾವದು ಎಂದು ನಾವು ಕೇಳಬಹುದು. ಹಲವಾರು ಗುಣಗಳನ್ನು ಇಲ್ಲಿ ಪಟ್ಟಿ ಮಾಡಬಹುದಾಗಿದೆ: ಪ್ರತಿಯೊಂದು ಸಾಮ್ರಾಜ್ಯವು ಬಲಿಷ್ಠವಾಗಿತ್ತು; ಪ್ರತಿಯೊಂದು ಸಾಮ್ರಾಜ್ಯವು ಬೇರೆಯದನ್ನು ಅಧೀನಪಡಿಸಿಕೊಳ್ಳಲು ಜಯಶಾಲಿಯಾಗಿತ್ತು; ಪ್ರತಿಯೊಂದು ಸಾಮ್ರಾಜ್ಯವು ಅಂದು ಪರಿಚಿತವಿದ್ದ ಪ್ರಪಂಚದುದ್ದಕ್ಕೂ ಹರಿಡಿಕೊಂಡಿತ್ತು. ಹೇಗೂ, ಯೋಹಾನನ ವಾಚಕರಿಗೆ ಅತ್ಯಂಥ ಮಹತ್ವಪೂರ್ಣವಾದದ್ದು ಎಂದರೆ, ಆ ಸಾಮ್ರಾಜ್ಯಗಳಲ್ಲಿ *ಎಲ್ಲವೂ ದೇವರ ಜನರನ್ನು ದಬ್ಬಾಳಿಕೆ ಮಾಡಿದವು* ಎಂಬದೆ. ಕೆಲವು ಬೇರೆ ಸಾಮ್ರಾಜ್ಯಗಳಿಗಿಂತ ಅತಿ ಕೆಟ್ಟವುಗಳಾಗಿದ್ದವು, ಆದರೆ ಅವೆಲ್ಲವೂ ಇಸ್ರಾಯೇಲ್ಯರನ್ನು ಗುಲಾಮರಂತೆ ನಡಿಸಿಕೊಂಡವು: ಬಾಬಿಲೋನಿಯರು ಯೆರೂಸಲೇಮನ್ನು ನಾಶಗೊಳಿಸಿದನು ಮತ್ತು ಯೆಹೂದ್ಯರು ಸೆರೆಯಾಳುಗಳನ್ನಾಗಿ ಮಾಡಿಕೊಂಡರು. ಮೇದ್ಯರು ಮತ್ತು ಪಾರಸಿಯರು ಅಧಿಕಾರವನ್ನು ವಹಿಸಿಕೊಂಡ ವೇಳೆ, ಇಸ್ರಾಯೇಲ್ಯರು ಅಧೀನರಾಗಿಯೇ ಉಳಿದರು. ಯೆಹೂದ್ಯರ ಮೇಲಿನ ದಬ್ಬಾಳಿಕೆಯು ಗ್ರೀಕ್ ಸಾಮ್ರಾಜ್ಯದ ವೇಳೆ ಪರಾಕಾಷ್ಠೆಯನ್ನು ತಲುಪಿತ್ತು, ವಿಶೇಷವಾಗಿ ಆ ಸಾಮ್ರಾಜ್ಯದ ಸಿರಿಯಾದ (Seleucids) ಹಾಗೂ Antiochus Epiphanesನ ಅಧೀನದಲ್ಲಿದ್ದ ಭಾಗದಲ್ಲಿ ಅಧಿಕಗೊಂಡಿತ್ತು. ಮೆಕಬ್ಬಿಯರ ದಿನಗಳಲ್ಲಿ ಒಂದು ಕ್ಲುಪ್ತ ಕಾಲದ ವರೆಗೂ ಉಪಶಮನ ಸಿಕ್ಕ ಬಳಿಕ, ಇಸ್ರಾಯೇಲ್ಯರು ಮತ್ತೊಂದಾವರ್ತಿ ಊಳಿಗತನದ ಜನಾಂಗವಾಯಿತು - ಈ ಸಾರಿ ರೋಮನ್ನರು ಅಧೀನದಲ್ಲಿದ್ದರು. ನಾಲ್ಕು ಸಾಮ್ರಾಜ್ಯಗಳಿಗೆ ಕೊಡಬಹುದಾದ ಒಂದು ಒಟ್ಟಾರೆಯಾದ ಸೂಕ್ತ ಹೆಸರು ಎಂದರೆ "ದೇವರ-ವಿರೋಧಿ ರಾಜಕೀಯ ಶಕ್ತಿ" ಎಂದಾಗಿರುತ್ತದೆ.

ದಾನಿಯೇಲನು ಕಂಡ ನಾಲ್ಕು ಮೃಗಗಳು ಒಂದಗೂಡಿಸಲ್ಪಟ್ಟು ರಚಿತವಾಗಿರುವ ಮೃಗದ ಕುರಿತಾಗಿ ಪ್ರಥಮ ಶತಮಾನದ ವಾಚಕರು ಓದಿದ ವೇಳೆ ಏನೆಂದು ಯೋಚಿಸಿರಬಹುದು? Eddie Cloerನು ಹೀಗೆ ಹೇಳಿದನು, "ಯೋಹಾನನ ದಿನದವರ ದೃಷ್ಟಿಯಲ್ಲಾದರೋ, ಆ ಮೃಗವು ಸಭೆಯ ಹಿಂಸಕನಾದ ರೋಮನ್ ಸಾಮ್ರಾಜ್ಯವೇ ಆಗಿತ್ತು ಎಂಬುದರಲ್ಲಿ ಸಂಶಯವೇ ಇಲ್ಲ."[4] James Efirdನು ಹೀಗೆ ಬರೆದನು, "ಈ ಪುಸ್ತಕವು ಮೂಲತಹ ಯಾವ ಜನರಿಗಾಗಿ ಬರೆಯಲ್ಪಟ್ಟಿತೋ ಅವರ ಪ್ರಕಾರವಾಗಿ, ಮೃಗದ ಗುರುತಿನ ವಿಷಯದಲ್ಲಿ ಯಾವ ರಹಸ್ಯವೂ ಇದ್ದಿರಲಿಲ್ಲ. ಅವರ ವಿರುದ್ಧವಾಗಿ ತನ್ನ ಶಕ್ತಿಯನ್ನು ಹರಿಯ ಬಿಡುತ್ತಿದ್ದದ್ದು ರೋಮನ್ ಸರ್ಕಾರವೇ ಆಗಿತ್ತು."[5]

13ನೇ ಅಧ್ಯಾಯದ ಮೃಗವನ್ನು ರೋಮನ್ ಸಾಮ್ರಾಜ್ಯದೊಂದಿಗೆ ಗುರುತಿಸುವದಕ್ಕೆ ಹಲವಾರು ಕಾರಣಗಳಿರುತ್ತವೆ. ಉದಾಹರಣೆಗೆ, 17ನೇ ಅಧ್ಯಾಯದಲ್ಲಿ, ಮೃಗವು "ಮಹಾ ಜಾರಸ್ತ್ರೀ"ಗೆ ವಾಹನವಾಗಿರುತ್ತದೆ (17:3, 7), ಮತ್ತು ಆ ಸ್ತ್ರೀಯು "ಭೂರಾಜರ ಮೇಲೆ ಅಧಿಕಾರ ಹೊಂದಿರುವ ಮಹಾನಗರಿಯೇ" ಎಂದು ಗುರುತಿಸಲ್ಪಟ್ಟಿದ್ದಾಳೆ (17:18) ಮತ್ತು ಆಕೆಯು "ಏಳು ಬೆಟ್ಟಗಳ" ಮೇಲೆ ಕೂತುಕೊಂಡಿರುತ್ತಾಳೆ (17:9) - ಸರಳವಾಗಿ ಹೇಳುವದಾದರೆ, ರೋಮ್

ನಗರವೇ.

ಪುನಃ, ಮೃಗದ ಬಣ್ಣನೆಯು ರೋಮನ್ ಸಾಮ್ರಾಜ್ಯವೆಂದು ಪರಿಚಿತವಿರುವ ಸಾಮ್ರಾಜ್ಯಕ್ಕೆ ಸರಿಹೊಂದುತ್ತದೆ. Albert Baldingerನು ಈ ಸಾರಾಂಶವನ್ನು ಕೊಡುತ್ತಾನೆ:

> ಯೋಹಾನನ ಸಮುದ್ರದಿಂದ ಬಂದ ಮೃಗವು ರೋಮನ್ ಸಾಮ್ರಾಜ್ಯವನ್ನು ಪ್ರತಿನಿಧಿಸುತ್ತದೆ. ಈ ವಾಸ್ತವಾಂಶಗಳನ್ನು ಎದುರಿರುವ ಅಂಕಣದಲ್ಲಿ ಬರೆಯಿರಿ ಮತ್ತು ಲೌಕಿಕ ಇತಿಹಾಸವು ಹೇಗೆ ಪ್ರತಿಯೊಂದು ಹಂತದಲ್ಲಿಯೂ ಪವಿತ್ರ ವಾಕ್ಯದೊಂದಿಗೆ ಸಮಾನಾರ್ಥದಲ್ಲಿರುತ್ತದೆಂಬುದನ್ನು ಕಾಣುವಿರಿ.
>
> ಲೌಕಿಕ ಇತಿಹಾಸವು ಹೇಳುವದೇನೆಂದರೆ ರೋಮ್‌ವು ಲೋಕದ ಹೆಮ್ಮೆಯ ಶ್ರೀಮತಿಯಾಗಿತ್ತು ಎಂಬದೆ: ಮೃಗಕ್ಕೆ "ಸಕಲ ಕುಲ ಪ್ರಜೆ ಭಾಷೆ ಜನಾಂಗಗಳ" ಮೇಲೆ ಅಧಿಕಾರವಿತ್ತು ಎಂದು ಹೇಳುತ್ತಾನೆ. ಆ ಮೃಗವು "ದೇವರ ವಿರುದ್ಧ ದೂಷಣೆಗಳನ್ನು" ನುಡಿದಳು ಎಂದು ಯೋಹಾನನು ತಿಳಿಸುತ್ತಾನೆ: ಲೌಕಿಕ ಇತಿಹಾಸದ ಪ್ರಕಾರವಾಗಿ, ಸರ್ಕಾರದ ಕಾಗದಗಳು "ನಮ್ಮ ಕರ್ತನಾದ ದೇವರು ಪ್ರತಿಷ್ಠಿಸುತ್ತಾನೆ" ಎಂಬ ದೇವದೂಷಣಾತ್ಮಕ ಬಿರುದು ಇಟ್ಟುಕೊಂಡಿದ್ದ ಚಕ್ರವರ್ತಿ Domitianನ ಹೆಸರಿನಲ್ಲಿ ವಿತರಿಸಲ್ಪಡುತ್ತಿದ್ದವು. ಆ ಮೃಗಕ್ಕೆ "ದೇವಜನರ ಮೇಲೆ ಯುದ್ಧಮಾಡಿ ಅವರನ್ನು ಜಯಿಸುವದಕ್ಕೆ ಅಧಿಕಾರ ಕೊಡಲ್ಪಟ್ಟಿತು" ಎಂದು ಯೋಹಾನನು ಹೇಳುತ್ತಾನೆ: ಇತಿಹಾಸವು ನಿರೋ ಚಕ್ರವರ್ತಿಯಿಂದ ಮೊದಲ್ಗೊಂಡು Diocletianನ ಕಾಲದಲ್ಲಿ ಅಂತ್ಯಗೊಳ್ಳುವ ತನಕ ಕ್ರೈಸ್ತರು ಅನುಭವಿಸಿದ ಹತ್ತು ಅತಿ ಘೋರವಾದ ಬಾಧೆಗಳನ್ನು ದಾಖಲಿಸಿರುತ್ತದೆ.[6]

"ಅರಸನು" ಎಂಬುದು "ಸಾಮ್ರಾಜ್ಯ"ಕ್ಕೆ ಸಮಾನ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ನೋಡುವದಾದರೆ, ಮೃಗಕ್ಕೆ Domitian ಚಕ್ರವರ್ತಿ ಎಂದು ಸಹ ಹೆಸರಿಡಬಹುದು, ಆತನು ಪ್ರಥಮ ಶತಮಾನದ ಅಂತ್ಯದ ವೇಳೆಯಲ್ಲಿ ಕ್ರೈಸ್ತರಿಗುಂಟಾದ ಸಮಸ್ಯೆಗಳಿಗೆ ಉಗಮಸ್ಥಾನವಾಗಿದ್ದನು. ಯಾವ ರೀತಿಯಲ್ಲಿದ್ದರೂ ಸರಿಯೇ, ಯೋಹಾನನ ದಿನದಲ್ಲಿ, ಮೃಗವು "ಕ್ರೈಸ್ತ-ವಿರೋಧಿ ರಾಜಕೀಯ ಶಕ್ತಿ" ಆಗಿತ್ತು.

**ಅದಕ್ಕೆ ಘಟಸರ್ಪನು ಶಕ್ತಿಯನ್ನೂ ಸಿಂಹಾಸನವನ್ನೂ ಮಹಾ ಅಧಿಕಾರವನ್ನೂ ಕೊಟ್ಟನು. ಸಿಂಹಾಸನ** ಎಂಬುದರ ಬದಲಾಗಿ KJVಯಲ್ಲಿ "ಆಸನ" ಎಂದಿರುತ್ತದೆ, ಆದರೆ ಇಲ್ಲಿ ಗ್ರೀಕ್ ಪದವು θρóνος (*thronos*) ಎಂಬುದರ ಒಂದು ರೂಪವಾಗಿದೆ. ಪೆರ್ಗಮದಲ್ಲಿದ್ದ "ಸೈತಾನನ ಸಿಂಹಾಸನ" ಎಂಬುದು 2:13ರಲ್ಲಿ ಪ್ರಸ್ತಾಪಿಸಲ್ಪಟ್ಟಿತ್ತು. ಈ ಭಾಷೆಯು ಆ ಪಟ್ಟಣದಲ್ಲಿ ಪ್ರಬಲವಾಗಿದ್ದ ಸೈತಾನನ ಪ್ರಭಾವವನ್ನು ಕುರಿತು ಒತ್ತಿ ಹೇಳುವದಾಗಿತ್ತು. 13:2ರಲ್ಲಿ "ಸಿಂಹಾಸನ" ಎಂಬ ಪದವು ಹೆಚ್ಚು ಸಮಗ್ರವಾದ ರೀತಿಯಲ್ಲಿ ಬಳಸಲ್ಪಟ್ಟಿದ್ದು ಪಾಪಭರಿತ ಲೋಕದ ಮೇಲೆ ಸೈತಾನನು ಸಾಮಾನ್ಯವಾಗಿ ಹೊಂದಿರುವ ಆಳ್ವಿಕೆಯನ್ನು ಸೂಚಿಸುತ್ತದೆ. **ಶಕ್ತಿಯನ್ನೂ ಸಿಂಹಾಸನವನ್ನೂ ಮಹಾ ಆದಿಕಾರವನ್ನೂ** ಎಂಬ ಪದಗಳು ನಿಕಟ ಸಂಬಂಧ ಹೊಂದಿರುತ್ತವೆ. ಈ ಸಂಯೋಜನೆಯು ಘಟಸರ್ಪನು ರೋಮನ್ ಸಾಮ್ರಾಜ್ಯವಾಗಿದ್ದ "ಮೃಗಕ್ಕೆ ಅಧಿಕಾರವನ್ನು ಕೊಟ್ಟನು" (ವ. 4) ಎಂಬುದನ್ನು ಒತ್ತುಕೊಟ್ಟು ಹೇಳುವದಕ್ಕೆ ಬಳಸಲಾಗಿರುತ್ತದೆ.

ಘಟಸರ್ಪನು ತನ್ನ ಮಿಲಿಟರಿ ಕಾರ್ಯಾಚರಣೆಗಾಗಿ ಸೇನೆಯನ್ನು ಸೇರಿಸಿಕೊಳ್ಳಲು ಆರಂಭಿಸಿದ ವೇಳೆ, ಆತನು ಮೊದಲು ಸೇರಿಸಿಕೊಂಡಿದ್ದು ಒಂದು ಬೃಹತ್ ಶಕ್ತಿಯನ್ನು - ಅಂದರೆ, ಬೆದರಿಸುವಿಕೆ. ಸೈತಾನನು ಕ್ರೈಸ್ತರನ್ನು ನಾಶಗೊಳಿಸಲು ಪ್ರಯತ್ನಿಸುವಂಥ ಮೂರು ಮೂಲಭೂತ ರಂಗಗಳಿರುತ್ತವೆ: *ಹೆದರಿಸುವಿಕೆ, ವಂಚನೆ,* ಮತ್ತು *ಶೋಧನೆ.* ಇವುಗಳಲ್ಲಿ

ಮೊದಲನೆಯದ್ದು 13ನೇ ಅಧ್ಯಾಯದಲ್ಲಿ ರೋಮನ್ ಸರ್ಕಾರದೊಳಗೆ ವ್ಯಕ್ತಿಕರಣಗೊಳಿಸಲ್ಪಟ್ಟಿದೆ.

**ವಚನ 3.** ಮೃಗವು ನಿಜವಾದ ಧರ್ಮವನ್ನು ಅನುಕರಣೆ ಮಾಡುತ್ತದೆ. ಉದಾಹರಣೆಗೆ, ಗಾಯಹೊಂದಿ ಗುಣಮುಖವಾಗುವದರ ಕುರಿತಾದ ವಿವರಣೆಯು ಯೇಸುವಿನ ಮರಣ ಹಾಗೂ ಪುನರುತ್ಥಾನದ ಪ್ರತಿಕೃತಿಯಾಗಿರುತ್ತದೆ: **ಅದರ ತಲೆಗಳಲ್ಲಿ ಒಂದು ತಲೆ ಗಾಯಹೊಂದಿ ಸಾಯುವ ಹಾಗಿರುವದನ್ನು ಕಂಡೆನು. ಆ ಮರಣಕರವಾದ ಗಾಯವು ವಾಸಿಯಾಯಿತು**. ಈ ಲಕ್ಷಣವು ವಾಕ್ಯದಲ್ಲಿ ಹಲವಾರು ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (13:12, 14); ಜನರು ಇದನ್ನು ಮೃಗದ ಕುರಿತಾಗಿರುವ ಅತ್ಯಂಥ ಆಶ್ಚರ್ಯಕರವಾದ ಸಂಗತಿಗಳಲ್ಲೊಂದು ಎಂಬದಾಗಿ ಪರಿಗಣಿಸಿದರೆಂದು ಸ್ಪಷ್ಟವಾಗುತ್ತದೆ. ಗ್ರೀಕ್ ವಾಕ್ಯದಲ್ಲಿ, **ಸಾಯುವ ಹಾಗಿರುವದನ್ನು** ಎಂಬ ಪದಗುಚ್ಛವು 5:6 ಮತ್ತು 13:8ರಲ್ಲಿ ಕುರಿಯಾದಾತನಿಗಾದ ಮರಣಾಂತಿಕ ಗಾಯವನ್ನು ಬಣ್ಣಿಸುವದಕ್ಕೆ ಬಳಸಿರುವ ಪದಗುಚ್ಛದ ರೀತಿಯಲ್ಲಿಯೇ ಇರುತ್ತದೆ.

ಬಹುಪಾಲು ವ್ಯಾಖ್ಯಾನಕಾರರು ನಂಬುವದೇನೆಂದರೆ 13:3, ಒಂದಿಲ್ಲಾ ಒಂದು ವಿಧದಲ್ಲಿ, ಪ್ರಥಮ ಶತಮಾನದ ಅಂತ್ಯದ ವೇಳೆಯಲ್ಲಿ ಮೂಢನಂಬಿಕೆಯುಳ್ಳವರ ಮಧ್ಯದಲ್ಲಿ ಹರಿದಾಡುತ್ತಿದ್ದ "Nero redivivus" (ನೀರೋ ಮತ್ತೆ ಜೀವ ಪಡೆದ) ಎಂಬ ಕಟ್ಟುಕತೆಗೆ ಸಂಬಂಧಿಸಿರುತ್ತದೆ ಎಂಬುದೆ. ಕ್ರಿ.ಶ. 68ರಲ್ಲಿ ನಿರೋ ಚಕ್ರವರ್ತಿ ಮರಣಿಸಿದ ಬಳಿಕ, ಆತನ ಶವವನ್ನು ಸರ್ಕಾರಿ ಗೌರವಗಳೊಂದಿಗೆ ಮಣ್ಣು ಮಾಡಲಾಯಿತು, ಆದರೆ ಆತನು ಮರಣಿಸಿದ್ದಾನೆಂಬುದನ್ನು ನಂಬುವದಕ್ಕೆ ಅನೇಕ ಜನರು ನಿರಾಕರಿಸಿದರು. ಆತನು ಪಾರ್ಥಿಯರ ನಡುವೆ ಹೋಗಿದ್ದು ಶೀಘ್ರವೆ ಆತನು ರೋಮನ್ ಸಾಮ್ರಾಜ್ಯವನ್ನು ನಾಶಗೊಳಿಸಲು ಪಾರ್ಥಿಯನ್ನರ ಸೇನೆಯೊಂದಿಗೆ ಹಿಂದಿರುಗಿ ಬರಲಿದ್ದಾನೆ ಎಂಬ ದಂತಕಥೆಯು ಹುಟ್ಟಿಕೊಂಡಿತ್ತು. ಒಂದಿಷ್ಟು ಜನರು ಸತ್ತವರೊಳಗಿಂದ ಆತನು ಎದ್ದು ಬರುವನೆಂದು ನಂಬಿದ್ದರು. ರೋಮನ್ ಇತಿಹಾಸಕಾರರು ಒಟ್ಟು ಮೂವರು ತಮ್ಮನ್ನು ನಿರೋ ಎಂಬುದಾಗಿ ಹೇಳಿಕೊಂಡು ವಂಚಿಸುವದಕ್ಕೆ ಪ್ರಯತ್ನಿಸಿದರೆಂಬುದಾಗಿ ತಿಳಿಸುತ್ತದೆ.[7] ಈ ಕಟ್ಟುಕಥೆಯು ಕೆಲವು ಯೆಹೂದ್ಯರಲ್ಲಿ ಮಿತವಾಗಿ ಜನಪ್ರಿಯತೆಯನ್ನು ಹೊಂದಿತ್ತು, ಯೆರೂಸಲೇಮನ್ನು ನಾಶ ಮಾಡಿದ್ದಕ್ಕಾಗಿ ರೋಮನ್ ಸಾಮ್ರಾಜ್ಯಕ್ಕೆ ನಿರೋ ಒಂದು ದಂಡನೆಯಾಗುವನು ಎಂಬ ಯೋಚನೆಯಲ್ಲಿ ಇವರು ಆದರಣೆಯನ್ನು ಪಡೆದುಕೊಂಡರು. ಎರಡನೆಯ ಶತಮಾನದ ಆರಂಭದಲ್ಲಿ, ಕ್ರೈಸ್ತೇತರ ಭಾಷಣಕಾರನಾದ Dio Chrysostomನು ಈ ಕಟ್ಟುಕತೆಯನ್ನು ಅಪಹಾಸ್ಯ ಮಾಡಿದನು.[8] ಪ್ರಕಟನೆ ಪುಸ್ತಕದ ಚಿತ್ರಣದ ಮೇಲೆ ಈ ಕಟ್ಟುಕಥೆಯ ಪ್ರಭಾವವು ಇತ್ತೋ ಅಥವಾ ಇಲ್ಲವೋ, ಈ ಅನ್ಯಧರ್ಮಿಯರ ಕಟ್ಟುಕತೆಯನ್ನು ಸತ್ಯವೆಂದು ಯೋಹಾನನು ನಂಬಿರುತ್ತಿರಲಿಲ್ಲ.

ಬಹುಶಃ ಸಾಂಕೇತಿಕತೆಯ ಅಂಶವು ನಿರೋ ಅನುಸರಿಸುತ್ತಿದ್ದ ಹಿಂಸಾ ನೀತಿಯನ್ನು ಮತ್ತೊಬ್ಬ ಮುಖ್ಯಸ್ಥನು ಅಥವಾ ಚಕ್ರವರ್ತಿಯು ಮರು ಜಾರಿಗೆ ತರುವನೆಂದಾಗಿತ್ತು, Domitianನ ಆಳ್ವಿಕೆಯ ಅಡಿಯಲ್ಲಿ ಅದನ್ನು ಕಾಣಬಹುದಾಗಿತ್ತು. ಹೀಗೆ ಆದಿ ಕ್ರೈಸ್ತ ಲೇಖಕನಾದ Tertullianನು ಹೀಗೆ ಬರೆದನು, "ನಿಮ್ಮ ಇತಿಹಾಸಗಳನ್ನು ವಿಚಾರಿಸಿರಿ; ಅಲ್ಲಿ ನಿಮಗೆ ಕ್ರೈಸ್ತರ ಮೇಲೆ ಸಾಮ್ರಾಜ್ಯದ ಕತ್ತಿಯನ್ನು ಬೀಸಿದವನು ನಿರೋ ಎಂಬುದನ್ನು ಕಂಡುಕೊಳ್ಳುವಿರಿ ... ಕ್ರೂರತ್ವದಲ್ಲಿ ನಿರೋ ಚಕ್ರವರ್ತಿಯ ಛಾಯೆಯಾಗಿದ್ದ Domitianನು ಸಹ, ಹಿಂಸೆಗೆ ಇಳಿದನು."[9]

ಇನ್ನೊಂದು ಕಡೆಯಲ್ಲಿ, ಈ ವಾಕ್ಯಭಾಗದ ಅರ್ಥವು ರೋಮನ್ ಸಾಮ್ರಾಜ್ಯ ಕೆಲವು

ಸಂದರ್ಭಗಳಲ್ಲಿ ಮರಣದ ಹಾಸಿಗೆಯಲ್ಲಿರುವಂತೆ ಕಂಡಿತು, ಆದರೆ ಮರುಜೀವ ಪಡೆದು ಇನ್ನಷ್ಟು ಬಲಿಷ್ಠವಾಗಿ ಹೊರಹೊಮ್ಮಿತು ಎಂದಷ್ಟೇ ಆಗಿರಬಹುದಾಗಿದೆ. ಮೃಗವು ಹಾನಿ ತಟ್ಟಲಾರದ್ದಾಗಿ ಕಂಡಿತು. 3ನೇ ವಚನವು ಆತನ **ತಲೆಗಳಲ್ಲಿ ಒಂದು ತಲೆ ಸಾಯುವ** ಹಾಗಿತ್ತದೆಂದು ಹೇಳುತ್ತದೆ, ಆದರೆ 12 ಮತ್ತು 14 ವಚನಗಳು ಸ್ವತಃ ಮೃಗವು ಗಾಯ ಹೊಂದಿತ್ತೆಂದು ಹೇಳುತ್ತವೆ. ಗಾಯವು ಒಟ್ಟಾರೆ ಮೃಗಕ್ಕೆ ಅನ್ವಯಿಸಲ್ಪಡಬಹುದಾಗಿದೆ. ಆತನು ಒಂದು "ಕತ್ತಿ"ಯ ಮೂಲಕವಾಗಿ **ಮರಣಕರವಾದ ಗಾಯ**ವನ್ನು ಹೊಂದಿದನಾದರೂ, ಆತನು ಪೂರ್ಣ ಆರೋಗ್ಯಗೊಂಡನು, ಅದು ಜನರೊಳಗೆ ಆಶ್ಚರ್ಯವನ್ನುಂಟು ಮಾಡಿತ್ತು (ವಚನಗಳು 3, 12, 14, 15). **ಭೂಲೋಕದವರೆಲ್ಲರು ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು.**

**ವಚನ 4. ಘಟಸರ್ಪನು ಆ ಮೃಗಕ್ಕೆ ಅಧಿಕಾರವನ್ನು ಕೊಟ್ಟವನಾದ್ದರಿಂದ ಅವರು ಆ ಘಟಸರ್ಪನಿಗೆ ನಮಸ್ಕಾರ ಮಾಡುವವರಾದರು. ಇದಲ್ಲದೆ ಆ ಮೃಗಕ್ಕೂ ನಮಸ್ಕಾರ ಮಾಡಿ - ಈ ಮೃಗಕ್ಕೆ ಸಮಾನರು ಯಾರು? ಇದರ ಮೇಲೆ ಯುದ್ಧಮಾಡುವದಕ್ಕೆ ಯಾರು ಶಕ್ತರು? ಅಂದರು.** ಮೃಗದ ಆರಾಧನೆಯಲ್ಲಿ ಚಕ್ರವರ್ತಿ ಆರಾಧನೆ ಸೇರಿತ್ತು, ವಿಶೇಷವಾಗಿ Domitianನು ತನ್ನನ್ನು ಆರಾಧಿಸುವಂತೆ ಬೇಡಿಕೆಯಿಟ್ಟಿದ್ದನು (ವ. 12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಾವು ಜನಸಮೂಹದ ಆಶ್ಚರ್ಯಗೊಳ್ಳುವಿಕೆ, ಆರಾಧನೆ ಶ್ಲಾಘನೆ, ಮತ್ತು ಅತಿ ಹೊಗಳಿಕೆ - ಇವೆಲ್ಲಾ ಆರಾಧನೆಯ ಘಟಕಗಳು - ಎಂಬುದನ್ನು ಗಮನಿಸಬಹುದು. ಅವರ **ಈ ಮೃಗಕ್ಕೆ ಸಮಾನರು ಯಾರು?** ಎಂಬ ಮಾತುಗಳು "ಶ್ರೇಷ್ಠ ಪ್ರಶ್ನೆಯ ಕರಾಳ ಹಾಸ್ಯಾಸ್ಪದ ಅನುಕರಣೆ ಆಗಿತ್ತು: 'ಯೆಹೋವನೇ, ದೇವರುಗಳಲ್ಲಿ ನಿನ್ನ ಸಮಾನನು ಯಾವನು?' (ವಿಮೋಚನಕಾಂಡ 15:11)."[10]

13:1-8ರಿಂದ ಮೂಡುವ ಭಾವನೆಯು ಏನೆಂದರೆ ಮೃಗವು ತಾನಿಷ್ಟ ಪಟ್ಟದ್ದನ್ನು ಮಾಡಬಲ್ಲನು, ಮತ್ತು ಆತನನ್ನು ಯಾರೂ ನಿಗ್ರಹಿಸುವದಕ್ಕೆ ಸಾಧ್ಯವಿಲ್ಲ ಎಂಬುದೆ. ಆದ್ದರಿಂದ ಜನಸಮೂಹವು **ಇದರ ಮೇಲೆ ಯುದ್ಧಮಾಡುವದಕ್ಕೆ ಯಾರು ಶಕ್ತರು?** ಎಂದು ಆಶ್ಚರ್ಯವಾಗಿ ಹೇಳುತ್ತಾರೆ. 1ರಿಂದ 8 ವಚನಗಳಲ್ಲಿರುವ ಪ್ರತಿಯೊಂದು ಅಂಶದ ಗೋಜು ಬಿಡಿಸಲ್ಪಟ್ಟಿರುತ್ತದೋ ಅಥವಾ ಇಲ್ಲವೋ, ಅಂತ್ಯದ ಫಲಿತವನ್ನು ಕಾಣುವದಂತೂ ಸುಲಭವಾಗಿರುತ್ತದೆ: ಒಟ್ಟಾರೆ ಲೋಕವು ಮೃಗವನ್ನು ಕಂಡು ಅತ್ಯಾಶ್ಚರ್ಯ ಪಟ್ಟಿತು. ಅವರು ಆತನನ್ನು ಆರಾಧಿಸಿದರು ಮತ್ತು ಆತನನ್ನು ಹಿಂಬಾಲಿಸಿದರು. ಬಹುಸಂಖ್ಯಾತರು ಆತನನ್ನು ಅಂಗೀಕರಿಸಿಕೊಂಡಿದ್ದು ಆತನ ಆದೇಶಗಳನ್ನು ವಿರೋಧಿಸಿದ ಕ್ರೈಸ್ತರಿಗೆ ಇನ್ನಷ್ಟು ಕಷ್ಟವನ್ನುಂಟು ಮಾಡಿತ್ತು.

**ವಚನ 5. ಬಡಾಯಿ ಮಾತುಗಳನ್ನೂ ದೂಷಣೆಯ ಮಾತುಗಳನ್ನೂ ಆಡುವ ಬಾಯಿ ಅದಕ್ಕೆ ಕೊಡಲ್ಪಟ್ಟಿತು. ಮತ್ತು ನಾಲ್ವತ್ತೆರಡು ತಿಂಗಳ ಪರ್ಯಂತರ ತನ್ನ ಕಾರ್ಯಗಳನ್ನು ನಡಿಸುವ ಅಧಿಕಾರವೂ ಅದಕ್ಕೆ ಕೊಡಲ್ಪಟ್ಟಿತು.** "ದೂಷಣೆ ಮಾಡು" ಎಂಬುದರ ಅರ್ಥವು "ವಿರುದ್ಧವಾಗಿ ಮಾತಾಡು" ಎಂದಾಗಿರುತ್ತದೆ.

ಇದುವರೆಗೂ ಮುಂದಿಡಲ್ಪಟ್ಟಿರುವ ಸತ್ಯಗಳು ನಿರಾಶೆಯುಂಟು ಮಾಡುವವುಗಳಾಗಿರಬೇಕು - ಆದರೆ ಏನೇ ನಡೆದರೂ ಸರಿಯೇ, ದೇವರು ಈಗಲೂ ಅಧಿಕಾರದಲ್ಲಿದ್ದಾನೆ ಎಂಬುದನ್ನು ಕ್ರೈಸ್ತರಿಗೆ ತಿಳಿಯಪಡಿಸುವಂಥ ಸುಳಿವುಗಳು ವಾಕ್ಯಭಾಗದಲ್ಲಿರುವದನ್ನು ತಪ್ಪಿಸಿಕೊಳ್ಳಕೂಡದು. ಒಂದು ಸುಳಿವು ಈ ಪದಗುಚ್ಛವಾಗಿದೆ ಅವನಿಗೆ **... ಆಡುವ ಬಾಯಿ ಅದಕ್ಕೆ ಕೊಡಲ್ಪಟ್ಟಿತು ... ನಡಿಸುವ ಅಧಿಕಾರವೂ ಅದಕ್ಕೆ ಕೊಡಲ್ಪಟ್ಟಿತು.** ಪ್ರಕಟನೆ ಪುಸ್ತಕದಲ್ಲಿ ಬೇರೊಂದು ಕಡೆಯಲ್ಲಿ, *ದೇವರು* ಅಧಿಕಾರದಲ್ಲಿದ್ದಾನೆ,

*ಕರ್ತನು* ಹಂಚಿಕೊಡುತ್ತಾನೆ - ಮತ್ತು ಮಿತಿಗೊಳಿಸುತ್ತಾನೆ ಎಂಬುದನ್ನು ಸೂಚಿಸುವದಕ್ಕೆ ಈ ಪರಿಭಾಷೆಯು ಬಳಸಲ್ಪಟ್ಟಿರುತ್ತದೆ. "ದೇವರಿಂದ ಹೊರತು ಒಬ್ಬರಿಗೂ ಅಧಿಕಾರವಿರುವದಿಲ್ಲ ..." (ರೋಮಾ 13:1).

ಇನ್ನೊಂದು ಸುಳಿವು ಏನೆಂದರೆ ಕಾಲಾವಧಿ, **ನಾಲ್ವತ್ತೆರಡು ತಿಂಗಳು**. 11ನೇ ಅಧ್ಯಾಯದಿಂದ ಆರಂಭಗೊಂಡು, ಪ್ರಕಟನೆ ಪುಸ್ತಕದಲ್ಲಿ ಈ ಸಾಂಕೇತಿಕ ಕಾಲಾವಧಿಯ ವಿವಿಧ ರೂಪಗಳಿರುತ್ತವೆ; ಈ ಪುಸ್ತಕದಲ್ಲಿ ಕಾಣಿಸುವ ಕಡೇ ಸಂದರ್ಭವೆಂದರೆ ಇಲ್ಲಿ 13:5ರಲ್ಲಿಯೇ ಆಗಿದೆ. ಇದರ ಅರ್ಥವು ಇಷ್ಟೊತ್ತಿಗೆ ಕಂಠಪಾಠವಾಗಿರತಕ್ಕದ್ದು: "ನಾಲ್ವತ್ತೆರಡು ತಿಂಗಳು" ಎಂಬುದು "3½ ವರ್ಷಗಳು" ಎಂದು ಹೇಳುವದಕ್ಕೆ ಬಳಸುವ ಗೂಢ ರೀತಿಯಾಗಿರುತ್ತದೆ. "3½" ಎಂಬುದು ಪರಿಶೋಧನೆಗಳ ಹಾಗೂ ಸಂಕಷ್ಟದ - ನಾಳೆ ಒಂದು ಉತ್ತಮ ದಿನವು ಬರಲಿದೆ ಎಂಬ ನಿರೀಕ್ಷೆಯೊಂದಿಗೆ ಇರುವ - ಕಾಲಾವಧಿಯಾಗಿರುತ್ತದೆ. ಮೃಗದ ಚಟುವಟಿಕೆಗೆಳಿಗೆ ಅನ್ವಯಿಸುವದಾದರೆ, ಸಂಕೇತವು ತೊಂದರೆಯನ್ನುಂಟು ಮಾಡುವಂತೆ ದೇವರು ಮೃಗಕ್ಕೆ ಅನುಮತಿ ಕೊಟ್ಟನು, ಆದರೆ ಹೇಗೆ ಮಾಡಬೇಕೆಂಬುದನ್ನು ಮಿತಿಗೊಳಿಸಿದನು ಹಾಗೂ ಒಂದು ಮಿತಿಯುಳ್ಳ ಕಾಲಾವಧಿ ವರೆಗೆ ಮಾತ್ರವೇ ಅನುಮತಿಸಿದನು ಎಂಬುದನ್ನು ಸಾರುತ್ತದೆ. ರೋಮನ್ ಸಾಮ್ರಾಜ್ಯವು ಶಕ್ತಿಶಾಲಿಯಾಗಿದ್ದಿರಬಹುದು, ಆದರೆ "ಜನಾಂಗಗಳನ್ನು ಆಳುವಾತನು" ದೇವರೇ ಆಗಿದ್ದಾನೆ; ದೇವರೇ "ತನ್ನ ಪರಿಶುದ್ಧ ಸಿಂಹಾಸನದಲ್ಲಿ ಕೂತಿದ್ದಾನೆ" (ಕೀರ್ತನೆ 47:8).

**ವಚನ 6.** ವಾಚಕನು ಈಗ ಮೃಗವು ಯಾರ ವಿರುದ್ಧವಾಗಿ ಮಾತಾಡಿದನೆಂಬುದನ್ನು ತಿಳಿದುಕೊಳ್ಳುವನು: **ಅದು ಬಾಯಿತೆರೆದು ದೇವರನ್ನು ದೂಷಿಸಿದ್ದಲ್ಲದೆ ಆತನ ನಾಮವನ್ನೂ ಆತನ ನಿವಾಸವನ್ನೂ ಪರಲೋಕ ನಿವಾಸಿಗಳನ್ನೂ ದೂಷಿಸಿತು. ಅಂದರೆ** ಎಂಬ ಪದಗುಚ್ಛವು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿದೆ ಯಾಕೆಂದರೆ "ಪರಲೋಕ ನಿವಾಸಿಗಳು" "ಆತನ ನಿವಾಸ"ದ ಜೊತೆಯಲ್ಲಿ ಗುರುತಿಸಲ್ಪಡತಕ್ಕದ್ದೆಂದು ಅವರು ಅರ್ಥಮಾಡಿಕೊಂಡರು. **ಆತನ ನಿವಾಸ** (σκηνήν αὐτοῦ, *skēnēn autou*) ಎಂಬುದು "ಆತನ ವಾಸಸ್ಥಾನ" ಎಂಬದಾಗಿ ಅನುವಾದಿಸಲ್ಪಡಬಹುದು. ಈ ವಚನದಲ್ಲಿರುವ **ನಿವಾಸ** ಎಂಬ ಪದವು σκηνόω (*skēnoō*) ಎಂಬುದರಿಂದ ಬಂದದ್ದಾಗಿದೆ, ಅದು σκηνή (*skēnē*, "ಗುಡಾರ") ಎಂಬುದರ ಮೌಖಿಕ ರೂಪವಾಗಿರುತ್ತದೆ. ಈ ಸಂಬಂಧವು NRSV ತರ್ಜುಮೆಯಲ್ಲಿ ಹೆಚ್ಚು ಸ್ಪಷ್ಟವಾಗಿದ್ದು ಅದು ಹೀಗೆ ಇರುತ್ತದೆ, "... ಆತನ *ನಿವಾಸ*, ಅಂದರೆ ಪರಲೋಕದಲ್ಲಿ *ನಿವಾಸಿಸುವವರು"* (ಒತ್ತಿ ಹೇಳಿದ್ದು ನನ್ನದು). ಹೇಗೂ, ಕೆಲವು ಗ್ರೀಕ್ ಹಸ್ತಪ್ರತಿಗಳು "ಮತ್ತು" (καί, *kai*) ಎಂಬ ಸಂಬಂಧಾವ್ಯಯವನ್ನು ಹೊಂದಿದ್ದು, ದೂಷಣೆ ಮಾಡಲ್ಪಟ್ಟ ಮೂರು ಸಂಗತಿಗಳನ್ನು ಬೇರೆ ಬೇರೆಯಾಗಿಸುತ್ತದೆ (ನೋಡಿರಿ KJV).

ದೇವರು ತನ್ನ ಜನರೊಳಗೆ ವಾಸಿಸುತ್ತಾನಾದ್ದರಿಂದ (1 ಕೊರಿಂಥ 3:16) ಮತ್ತು ಕ್ರೈಸ್ತರು ಪರಲೋಕದಲ್ಲಿ ಪೌರತ್ವವನ್ನು ಹೊಂದಿದ್ದಾರಾದ್ದರಿಂದ (ಫಿಲಿಪ್ಪಿ 3:20), ದೇವರ ವಿರುದ್ಧದ **ದೂಷಣೆಯ ಮಾತುಗಳು** ಬಹುಶಃ ಪ್ರಥಮ ಶತಮಾನದಲ್ಲಿ ಸಭೆಯ ವಿರುದ್ಧ ಹರಡಿಸಲ್ಪಟ್ಟಿದ್ದ ಸುಳ್ಳುಗಳನ್ನು ಸೂಚಿಸುತ್ತಿರಬಹುದಾಗಿದೆ. ಖಂಡಿತವಾಗಿಯೂ, ದೇವರ "ನಿವಾಸ" ಎಂಬುದು ಪರಲೋಕವನ್ನು ಸೂಚಿಸುತ್ತಿದೆ ಎಂಬುದರ ಮತ್ತು "ಪರಲೋಕ ನಿವಾಸಿಗಳು" ಎಂಬವರು ಈಗಾಗಲೇ ಅಲ್ಲಿಗೆ ಹೋಗಿ ಸೇರಿದ್ದ, ಬಹುಶಃ ರಕ್ತಸಾಕ್ಷಿಗಳಾಗಿ ಮರಣಿಸಿದ್ದ ಕ್ರೈಸ್ತರನ್ನು ಸೂಚಿಸುತ್ತಿದೆ ಎಂಬುದರ ಸಾಧ್ಯತೆಯು ಇರುತ್ತದೆ.

# ದೇವಜನರೊಂದಿಗೆ ಯುದ್ಧ (13:7-10)

**[7]ಇದಲ್ಲದೆ ದೇವಜನರ ಮೇಲೆ ಯುದ್ಧಮಾಡಿ ಅವರನ್ನು ಜಯಿಸುವದಕ್ಕೆ ಅದಕ್ಕೆ ಅಧಿಕಾರ ಕೊಡಲ್ಪಟ್ಟಿತು. [8]ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾದಾತನ ಬಳಿಯಲ್ಲಿರುವ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದಿರುವದಿಲ್ಲವೋ ಆ ಭೂನಿವಾಸಿಗಳೆಲ್ಲರೂ ಅದಕ್ಕೆ ನಮಸ್ಕಾರ ಮಾಡುವರು. [9, 10]ಕಿವಿಯುಳ್ಳವನು ಕೇಳಲಿ, ಸೆರೆಹಿಡಿಯುವವನು ತಾನೇ ಸೆರೆಗೆ ಹೋಗುವನು; ಕತ್ತಿಯಿಂದ ಕೊಲ್ಲುವವನು ಕತ್ತಿಯಿಂದಲೇ ಸಾಯಬೇಕು. ಇದರಲ್ಲಿ ದೇವಜನರ ತಾಳ್ಮೆಯೂ ನಂಬಿಕೆಯೂ ತೋರಿಬರುತ್ತವೆ.**

**ವಚನ 7. ಇದಲ್ಲದೆ ದೇವಜನರ ಮೇಲೆ ಯುದ್ಧಮಾಡಿ ಅವರನ್ನು ಜಯಿಸುವದಕ್ಕೆ ಅದಕ್ಕೆ ಅಧಿಕಾರ ಕೊಡಲ್ಪಟ್ಟಿತು.** ಜನಸಮೂಹವು, "[ಮೃಗದ] ಮೇಲೆ ಯುದ್ಧಮಾಡುವದಕ್ಕೆ ಯಾರು ಶಕ್ತರು?" ಎಂದು ಕೇಳಿತು (ವ. 4). ಸ್ಪಷ್ಟವಾಗಿರುವ ಪ್ರಕಾರ, ಯಾರೂ ಶಕ್ತರಾಗಿರಲಿಲ್ಲ - ಖಂಡಿತವಾಗಿಯೂ ತಕ್ಕಷ್ಟು ಬೆಳವಣಿಗೆಯಿಲ್ಲದ ಕ್ರೈಸ್ತರಂತೂ ಶಕ್ತರಿರಲಿಲ್ಲ. ಮೃಗವು ದೇವಜನರ ವಿರುದ್ಧ ಯುದ್ಧ ಮಾಡಿ **ಅವರನ್ನು ಜಯಿಸುವದಕ್ಕೆ** ಶಕ್ತವಾಗಿತ್ತು. **ದೇವಜನರು** ಎಂದರೆ "ಪರಿಶುದ್ಧವಾದವರು" (5:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಜಯಿಸಿದನು** ಎಂಬುದು "ವಿಜಯ" ಎಂಬ ಪದಕ್ಕಾಗಿರುವ νίκη (*nikē*) ಎಂಬುದರ ಕ್ರಿಯಾಪದವಾಗಿದೆ. ಮೃಗವು ಬೆಟ್ಟದಿಂದ ಉರುಳುತ್ತಾ ಬರುತ್ತಿದ್ದ, ತನ್ನ ದಾರಿಗೆ ಅಡ್ಡ ಬರುವದನ್ನೆ ಚಪ್ಪಟೆಗೊಳಿಸುವ ಬೃಹತ್ ಬಂಡೆಯಂತಿತ್ತು. ಆತನು ಅಪರಾಜಿತನಂತೆ ಕಂಡನು. ಇತಿಹಾಸವು ಆದಿ ಕ್ರೈಸ್ತರು ಹಿಂಸೆಗೊಳಗಾದ ಹಲವಾರು ಉದಾಹರಣೆಗಳನ್ನು ದಾಖಲಿಸುತ್ತದೆ.

**ಸಕಲ ಕುಲ ಪ್ರಜೆ ಭಾಷೆ ಜನಾಂಗಗಳ ಮೇಲೆ ಅದಕ್ಕೆ ಅಧಿಕಾರವು ಕೊಡಲ್ಪಟ್ಟಿತು.** ಯಾವಾಗಲೂ ಇರುವ ರೀತಿಯಲ್ಲಿಯೇ, ನಾಲ್ಕು ವಿಧದ ಪಟ್ಟಿಯನ್ನು ಮಾಡಿರುವದು "ಎಲ್ಲರೂ" ಎಂಬ ಅರ್ಥವನ್ನು ಕೊಡುತ್ತದೆ. KJVಯಲ್ಲಿ ಕೇವಲ ಮೂರರ ಪಟ್ಟಿ ಮಾತ್ರವೇ ಇರುತ್ತದೆ, ಆದರೆ ಹಸ್ತಪ್ರತಿ ಪುರಾವೆ, ಮಾತ್ರವಲ್ಲದೆ ಪ್ರಕಟನೆ ಪುಸ್ತಕದ ಉಳಿದ ಭಾಗವು (5:9; 7:9; 11:9; 14:6), ನಾಲ್ಕರ ಪಟ್ಟಿಯ ಪರವಾಗಿ ಒಲವು ತೋರುತ್ತವೆ. ಸೈತಾನನು ಯೇಸುವಿಗೆ ಕೊಡುತ್ತೇನೆಂದು ಹೇಳಿದ ಬಳಸಿ ಬಿಟ್ಟಿ ಅಧಿಕಾರವು (ಮತ್ತಾಯ 4:8, 9), ಮೃಗಕ್ಕೆ ಅನುಗ್ರಹಿಸಲ್ಪಟ್ಟಿತು.

**ವಚನ 8. ಜಗದುತ್ಪತ್ತಿಗೆ ಮೊದಲೇ ಕೊಯ್ಯಲ್ಪಟ್ಟ ಕುರಿಯಾದಾತನ ಬಳಿಯಲ್ಲಿರುವ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದಿರುವದಿಲ್ಲವೋ ಆ ಭೂನಿವಾಸಿಗಳೆಲ್ಲರೂ ಅದಕ್ಕೆ ನಮಸ್ಕಾರ ಮಾಡುವರು. ಜೀವಬಾಧ್ಯರ ಪಟ್ಟಿ** ಎಂಬ ಪದಗುಚ್ಛವು ಸಾರ್ದಿಸಿನಲ್ಲಿರುವ ಸಭೆಗೆ ಬರೆದ ಪತ್ರದಲ್ಲಿ ಸಿಕ್ಕುತ್ತದೆ (3:5); ಅದು ನಂಬಿಗಸ್ತರ ಹೆಸರುಗಳಿರುವ ದಾಖಲೆಯಾಗಿದೆ (ನೋಡಿರಿ 20:15). ಪ್ರಕಟನೆ ಪುಸ್ತಕದಲ್ಲಿ ಜೀವಬಾಧ್ಯರ ಪಟ್ಟಿಯ ಕುರಿತು ಉಲ್ಲೇಖನಗಳು 17:8; 20:12; ಮತ್ತು 21:27ರಲ್ಲಿ ಸಿಕ್ಕುತ್ತವೆ. ಈ ಪದಗುಚ್ಛವು ಬಾಧೆಗೊಳಗಾಗಿದ್ದ ಕ್ರೈಸ್ತರಿಗೆ ದೇವರು ಅವರನ್ನು ಮರೆಯುವದಿಲ್ಲ ಎಂಬ ಭರವಸೆಯನ್ನು ನೀಡಿತ್ತು.

8ನೇ ವಚನದ ಪರಿಭಾಷೆಯು ಪ್ರತಿಯೊಬ್ಬ ಕ್ರೈಸ್ತನನ್ನು ವಿಶೇಷವಾದವನೆಂಬದಾಗಿ ಭಾವಿಸಿಕೊಳ್ಳುವಂತೆ ಮಾಡತಕ್ಕದ್ದು, ಆದರೆ ಒಂದು ಪ್ರಾಮುಖ್ಯವಾದ ಯೋಚನೆಯ ಛಾಪು ಮೂಡಿಸುವದಕ್ಕಾಗಿ ಈ ವಚನವನ್ನು ಬಳಸಬಹುದಾಗಿದೆ. ಭೂಮಿಯ ಮೇಲೆ ಎರಡು

ವರ್ಗಗಳ ಜನರಿದ್ದಾರೆ: ಜೀವಬಾಧ್ಯರ ಪಟ್ಟಿಯಲ್ಲಿ ಹೆಸರುಗಳು ಬರೆಯಲ್ಪಟ್ಟಿರುವವರು ಮತ್ತು ಹೆಸರುಗಳು ಬರೆಯಲ್ಪಡದೆ ಇರುವವರು. ಇದೇ ಎರಡು ವರ್ಗದ ಜನರನ್ನು ಸೂಚಿಸುವ ಇನ್ನೊಂದು ವಿಧವು 13:6, 8ರಲ್ಲಿ ಸಿಕ್ಕಬಹುದಾಗಿದೆ: ಪರಲೋಕನಿವಾಸಿಗಳು ಇದ್ದಾರೆ (ವ. 6), ಮತ್ತು ಭೂನಿವಾಸಿಗಳು ಇದ್ದಾರೆ (ವ. 8). ಲೋಕವು ಬಹುವಾದ ವರ್ಗೀಕರಣಗಳನ್ನು ಹೊಂದಿರುತ್ತದೆ - ರಾಷ್ಟ್ರೀಯ, ಜನಾಂಗೀಯ, ಸಾಮಾಜಿಕ, ಆರ್ಥಿಕ, ಮತ್ತು ಇಂಥವುಗಳು - ಆದರೆ, ಅಂತ್ಯದಲ್ಲಿ, ಪ್ರಾಮುಖ್ಯವಾಗುವ ಒಂದೇ ಅರ್ಹತೆಯೆಂದರೆ ನಮ್ಮ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿವೆಯೋ ಇಲ್ಲವೋ ಎಂಬುದೆ.

ಮೂಲ ವಾಕ್ಯದಲ್ಲಿ, **ಜಗದುತ್ಪತ್ತಿಗೆ ಮೊದಲೇ** ಎಂಬ ಮಾತುಗಳು "ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದಿರುವದಿಲ್ಲವೋ" ಎಂಬುದನ್ನಾಗಲಿ ಅಥವಾ "ಕೊಯ್ಯಲ್ಪಟ್ಟ ಕುರಿಯಾದಾತನು" ಎಂಬುದನ್ನಾಗಲಿ ವಿಶೇಷಣಗೊಳಿಸಬಲ್ಲದು. ಗ್ರೀಕ್ ವಾಕ್ಯದಲ್ಲಿ, ಈ ಪದಗುಚ್ಛವು ವಾಕ್ಯಸಾಲಿನ ಅಂತ್ಯದಲ್ಲಿ, "ಕೊಯ್ಯಲ್ಪಟ್ಟ ಕುರಿಯಾದಾತನು" ಎಂಬುದರ ಬಳಿಕ ಇರುತ್ತದೆ (ನೋಡಿರಿ KJV, NIV). NASB ಅನುವಾದಕರು ಈ ಪದಗುಚ್ಛವನ್ನು "ಬರೆದಿರುವ ... ಎಲ್ಲರೂ" ಎಂಬುದರ ನಂತರ ಸೇರಿಸಿರಬಹುದಾಗಿದೆ ಯಾಕೆಂದರೆ, 17:8ರಲ್ಲಿನ ಒಂದು ಸಂಬಂಧಿಸಿದ ವಾಕ್ಯಭಾಗದಲ್ಲಿ, ಈ ಪದಗುಚ್ಛವು ಜೀವಬಾಧ್ಯರ ಪಟ್ಟಿಯಲ್ಲಿ ಹೆಸರುಗಳು ಬರೆಯಲ್ಪಡದವರನ್ನು ಸೂಚಿಸುತ್ತದೆ. ಹೇಗೂ, ಎರಡೂ ವಾಕ್ಯಭಾಗಗಳನ್ನು ಸಮಾನಾರ್ಥಗೊಳಿಸುವದು ಅವಶ್ಯಕವಾಗಿರುತ್ತದೆ. ಯಾವ ವಿಧದಲ್ಲಿರೂ, ಮನುಷ್ಯನ ವಿಮೋಚನೆಗೋಸ್ಕರ ದೇವರ ಯೋಜನೆಯು ಅನಂತರದಲ್ಲಿ ಬಂದ ಯೋಚನೆಯಲ್ಲ ಎಂಬುದೇ ಇಲ್ಲಿರುವ ಸಂದೇಶವಾಗಿ; ಬದಲಾಗಿ ಅದು "ದೇವರ ಅತ್ಯಂಥ ಅಮೋಘವಾದ ಪೂರ್ವಯೋಚನೆ"[11] ಆಗಿತ್ತು. ಮನುಷ್ಯನು ಭೂಮಿಯ ಮೇಲೆ ಇಡಲ್ಪಡುವದಲ್ಲೆ ಮುನ್ನವೇ ಅದು ದೇವರ ಮನಸ್ಸಿನಲ್ಲಿತ್ತು (ನೋಡಿರಿ ಎಫೆಸ 1:4; 3:10, 11; 1 ಪೇತ್ರ 1:19, 20).

8ನೇ ವಚನವು ದೈವಸಂಕಲ್ಪವನ್ನು - ದೇವರು ಮನುಷ್ಯನನ್ನು ನಿರ್ಮಿಸುವ ಮುನ್ನವೇ, ಕೆಲವೊಬ್ಬ ವ್ಯಕ್ತಿಗಳು ರಕ್ಷಣೆ ಹೊಂದುವರು ಮತ್ತು ಬೇರೆ ಕೆಲವೊಬ್ಬರು ನಾಶವಾಗುವರು ಎಂಬುದನ್ನು ಆತನು ಪೂರ್ವದಲ್ಲೇ ನೇಮಿಸಿದನು ಎಂಬ ಯೋಚನೆ - ಸಾಭಿತುಪಡಿಸಲು ಪ್ರಯತ್ನಿಸುವದಕ್ಕೆ ಬಳಸಲ್ಪಟ್ಟಿರುತ್ತದೆ. ಬೈಬಲ್ ಇವುಗಳನ್ನಂತೂ ಕಲಿಸುತ್ತದೆ ಏನೆಂದರೆ (1) ದೇವರು ತನಗಿಷ್ಟವಾಗುವ ಪ್ರಕಾರ ಯಾರನ್ನು ಬೇಕಾದರೂ ರಕ್ಷಿಸುವ ಅಥವಾ ದಂಡನೆಗೆ ಗುರಿಪಡಿಸುವ ಅಧಿಕಾರವನ್ನು ಹೊಂದಿದ್ದಾನೆ ಮತ್ತು (2) ಇಂಥಿಂಥ ವಿಧದ ವ್ಯಕ್ತಿಯು (ವಿಧೇಯತೆಯುಳ್ಳ ವಿಶ್ವಾಸಿ) ರಕ್ಷಣೆ ಹೊಂದುವನು ಮತ್ತು ಇಂಥಿಂಥ ವ್ಯಕ್ತಿಯು (ಅವಿಶ್ವಾಸಿಯು) ನಾಶವಾಗುವನೆಂದು ಪೂರ್ವದಲ್ಲೇ ನೇಮಿಸಿದನು. ಅದನ್ನು ದಾಟಿ ಹೋಗಿ ತಾವು ರಕ್ಷಣೆ ಹೊಂದುವರೋ ಅಥವಾ ನಾಶವಾಗುವರೋ ಎಂಬುದನ್ನು ನಿರ್ಧರಿಸುವದರಲ್ಲಿ ಮನುಷ್ಯರಿಗೆ ಪಾತ್ರವಿರುವದೇ ಇಲ್ಲ ಎಂದು ಬೋಧಿಸುವದು ಬೈಬಲ್ ಸ್ವತಃ ತನ್ನ ಮಾತುಗಳನ್ನು ವಿರೋಧಿಸಿಕೊಂಡ ಹಾಗಾಗುತ್ತದೆ. ಪ್ರಕಟನೆ ಪುಸ್ತಕವೂ ಸೇರಿದಂತೆ, ಇಡೀ ಬೈಬಲ್ ಕಲಿಸುವದೇನೆಂದರೆ, ಅಂತ್ಯದಲ್ಲಿ, ತಾನು ಯೇಸುವನ್ನು ಹಿಂಬಾಲಿಸುವೆನೋ ಇಲ್ಲವೋ ಎಂಬುದನ್ನು ಪ್ರತಿ ವ್ಯಕ್ತಿಯು ನಿರ್ಧರಿಸಿಕೊಳ್ಳುವನು ಎಂಬದೆ.

**ವಚನಗಳು 9, 10.** ಈ ಹಂತದಲ್ಲಿ, ಯೋಹಾನನು ಒಂದು ಬುದ್ಧಿವಾದವನ್ನು ಸೇರ್ಪಡೆಗೊಳಿಸುತ್ತಾನೆ: **ಕಿವಿಯುಳ್ಳವನು ಕೇಳಲಿ.** ಈ ಭಾಷೆಯು 2 ಮತ್ತು 3 ಅಧ್ಯಾಯಗಳಲ್ಲಿ ಯೇಸುವು ಏಳು ಸಭೆಗಳಿಗೆ ಬರೆದ ಪತ್ರಗಳಲ್ಲಿ ನೀಡಿದ ಬುದ್ಧಿವಾದಕ್ಕೆ ಹೋಲಿಕೆಯನ್ನು ಹೊಂದಿರುತ್ತದೆ (2:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ಸೆರೆಹಿಡಿಯುವವನು ತಾನೇ ಸೆರೆಗೆ ಹೋಗುವನು; ಕತ್ತಿಯಿಂದ ಕೊಲ್ಲುವವನು ಕತ್ತಿಯಿಂದಲೇ ಸಾಯಬೇಕು. ಇದರಲ್ಲಿ ದೇವಜನರ ತಾಳ್ಮೆಯೂ ನಂಬಿಕೆಯೂ ತೋರಿಬರುತ್ತವೆ.** 10ನೇ ವಚನದ ಆರಂಭದ ಭಾಗವು ಯೆರೆಮೀಯ 15:2; 43:11ನ್ನು ಪ್ರತಿಫಲಿಸುತ್ತದೆ, ಅದೇ ವೇಳೆಯಲ್ಲಿ ಕತ್ತಿ ಎಂಬ ಪದವು ಮತ್ತಾಯ 26:52ರಲ್ಲಿ ಪೇತ್ರನಿಗೆ ಯೇಸುವು ನುಡಿದ ಮಾತುಗಳನ್ನು ನಮಗೆ ಜ್ಞಾಪಿಸುತ್ತದೆ: "ನಿನ್ನ ಕತ್ತಿಯನ್ನು ತಿರಿಗಿ ಒರೆಯಲ್ಲಿ ಸೇರಿಸು; ಕತ್ತಿಯನ್ನು ಹಿಡಿದವರೆಲ್ಲರು ಕತ್ತಿಯಿಂದ ಸಾಯುವರು."

ಈ ವಚನವನ್ನು ಅರ್ಥಮಾಡಿಕೊಳ್ಳುವದರಲ್ಲಿ ಇರುವ ಒಂದು ಕ್ಲೀಷ್ಟತೆಯೆಂದರೆ ಪ್ರಾಚೀನ ಹಸ್ತಪ್ರತಿಗಳಲ್ಲಿ ಸ್ವಲ್ಪ ದ್ವಂದ್ವಾರ್ಥತೆಯಿದ್ದು ಅದರು ಬೇರೆ ಬೇರೆ ಅನುವಾದಗಳಿಗೆ ದಾರಿ ಮಾಡುತ್ತದೆ. KJVಯು ಈ ವಚನವನ್ನು ಅದು ಹಿಂಸಕರಿಗೆ ಅನ್ವಯವಾಗುವ ರೀತಿಯಲ್ಲಿ ಅನುವಾದಿಸುತ್ತದೆ. NIVಯು ಈ ವಚನವನ್ನು ಹಿಂಸಿಸಲ್ಪಟ್ಟವರಿಗೆ ಅನ್ವಯಪಡಿಸುತ್ತದೆ. **ಯಾವನಾದರೂ** ಎಂಬುದರ ಬಳಕೆಯನ್ನು ನಾವು ಹೇಗೆ ಅರ್ಥಮಾಡಿಕೊಳ್ಳುತ್ತೇವೆ ಎಂಬುದರ ಆಧಾರದಲ್ಲಿ ಹಲವಾರು ಅರ್ಥನಿರೂಪಣೆಗಳ ಸಾಧ್ಯತೆಯಿರುತ್ತದೆ. ಇನ್ನೊಂದು ಡಕೆಯಲ್ಲಿ, "ಯಾವನಾದರೂ" ಎಂಬುದರ ಎರಡೂ ಉಲ್ಲೇಖನಗಳು ಕ್ರೈಸ್ತರನ್ನು ಸೂಚಿಸಬಹುದಾಗಿದೆ. ಅದು ಸರಿಯಾದ ಅರ್ಥನಿರೂಪಣೆ ಆಗಿದ್ದರೆ, ತಮಗೆ ಭವಿಷ್ಯದಲ್ಲಿ ಕಾಯುತ್ತಿರವದನ್ನು ನೆನಸಿ ಮನಸ್ಸನ್ನು ಗಟ್ಟಿಮಾಡಿಕೊಂಡಿರಬೇಕೆಂದು ಕರ್ತನು ಕ್ರೈಸ್ತರಿಗೆ ಹೇಳುತ್ತಿದ್ದಾನೆ. "ದೇವರ ಶಾಸನದಿಂದ ತಪ್ಪಿಸಿಕೊಳ್ಳುವ ದಾರಿಯೇ ಇಲ್ಲ."[12] ಅಲ್ಲದೆ ತಮಗೆ ಹಿಂಸೆಯುಂಟಾಗುವ ವೇಳೆ ಕತ್ತಿಯನ್ನು ಬಳಸಿ ತಮ್ಮನ್ನು ಕಾಪಾಡಿಕೊಳ್ಳಬಾರದೆಂದು ಸಹ ಅವರಿಗೆ ಅಪ್ಪಣೆ ಕೊಡುತ್ತಿದ್ದಾನೆ. "ಸಮಸ್ಯೆಗಳು ಬಗೆಹರಿಯಬೇಕಾದರೆ ಎದುರಾಳಿಯನ್ನು ಕೊಲ್ಲಬೇಕೆಂಬುದು ಮೃಗವು ಅನುಸರಿಸುವ ದಾರಿಯಾಗಿತ್ತು. ಅದು ನಮ್ಮ ದಾರಿಯಲ್ಲ."[13] ಇನ್ನೊಂದೆಡೆಯಲ್ಲಿ, "ಯಾವನಾದರೂ" ಎಂಬುದರ ಎರಡೂ ಉಲ್ಲೇಖನಗಳು ಅವರ ಹಿಂಸಕರನ್ನು ಸೂಚಿಸಬಹುದಾಗಿದೆ. ಅದು ಸರಿಯೆನ್ನುವದಾದರೆ, ಅವರ ವೈರಿಗಳು ದಂಡಿಸಲ್ಪಡುವರು; ಅವರಿಗೆ ತಕ್ಕ ದಂಡನೆಯನ್ನು ಮಾಡಲಾಗುವದು ಎಂಬ ಭರವಸವನ್ನು ಈ ವಾಕ್ಯಭಾಗವು ಕ್ರೈಸ್ತರಿಗೆ ಕೊಡುವದಾಗಿತ್ತು. ಅಲ್ಲದೆ ಮೊದಲನೆಯ "ಯಾವನಾದರೂ" ಎಂಬುದು ಕ್ರೈಸ್ತರನ್ನು ಸೂಚಿಸಿದರೆ ಎರಡನೆಯ "ಯಾವನಾದರೂ" ಎಂಬುದು ಅವರ ಪೀಡಕರನ್ನು ಸೂಚಿಸುತ್ತಿರಬಹುದಾದ ಸಾಧ್ಯತೆಯೂ ಇರುತ್ತದೆ. ಈ ತಿಳುವಳಿಕೆಯು ಎರಡು ವಿಚಾರಗಳನ್ನು ಒಂದುಗೂಡಿಸುವದಾಗಿದೆ: ಅವರು ಬಾಧೆಯನ್ನನುಭವಿಸುವದಕ್ಕೆ ಸಿದ್ಧರಾಗಿರಬೇಕು, ಆದರೆ ಅಂತ್ಯದಲ್ಲಿ, ಅವರ ಬಾಧೆಗೆ ಜವಾಬ್ದಾರರಾಗಿರುವವರು ತಾವು ಮಾಡಿದ್ದನ್ನೇ ಸ್ವತಃ ಹಿಂದಕ್ಕೆ ಪಡೆಯುವರು ಎಂಬ ಭರವಸೆಯಿರಲಿ ಎಂಬುದಾಗಿ ಯೋಹಾನನ ವಾಚಕರಿಗೆ ಹೇಳಲಾಗುತ್ತಿದೆ.

ಈ ಎಲ್ಲಾ ಅರ್ಥನಿರೂಪಣೆಗಳು ಅದಾದ ತಕ್ಷಣದ ಸನ್ನಿವೇಶದೊಂದಿಗೆ ಮತ್ತು ಪ್ರಕಟನೆ ಪುಸ್ತಕದ ಒಟ್ಟಾರೆ ಉದ್ದೇಶದೊಂದಿಗೆ ಹೊಂದಿಕೆಯಾಗುತ್ತದೆ. ಹೇಗೂ, 10ನೇ ವಚನದಲ್ಲಿನ ಒಂದು ಅಥವಾ ಎರಡೂ ಹೇಳಕೆಗಳನ್ನು ಕ್ರೈಸ್ತರಿಗೆ ಹಿಂಸೆ ನೀಡುತ್ತಿದ್ದವರಿಗೆ ಅನ್ವಯಿಸತಕ್ಕದ್ದೆಂಬ ಸಾಧ್ಯತೆಯು ಅತ್ಯಧಿಕವಾಗಿದೆ: (1) ಯೆರೆಮೀಯನು ಇದೇ ರೀತಿಯ ಮಾತುಗಳನ್ನು ನುಡಿದ ವೇಳೆ, ಅವುಗಳು ದೇವರ ವಿರುದ್ಧ ಬಂಡಾಯವೆದ್ದವರನ್ನು ದೋಷಿಗಳೆಂದು ತೀರ್ಪು ನೀಡಿದ್ದವು. ಹೀಗಿರುವದರಿಂದ Robert Mulhollandನು ಕೇಳುತ್ತಾನೆ, "ಬಂಡಾಯಗಾರರಿಗೆ ಇರುವ ಪದವು ದೇವಜನರಿಗೆ ... ಹೇಗೆ ಅನ್ವಯವಾಗಬಲ್ಲದು?"[14] (2) ಇಲ್ಲಿ **ಕತ್ತಿ** (μάχαιρα, *machaira*) ಎಂಬುದನ್ನು

ಅನುವಾದಿಸಿರುವ ಗ್ರೀಕ್ ಪದವು ರೋಮನ್ ಸೈನ್ಯವು ಬಳಸುತ್ತಿದ್ದ ಹತ್ತಿರದಿಂದ ಯುದ್ಧಮಾಡುವ ಖಡ್ಗವನ್ನು ಸೂಚಿಸುತ್ತದೆ, ಅದು 6ನೇ ಅಧ್ಯಾಯದಲ್ಲಿ ಎರಡನೆಯ ಕುದುರೆ ಸವಾರನಿಗೆ ಕೊಡಲ್ಪಟ್ಟ ಕತ್ತಿಯಾಗಿದೆ (6:4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). (3) ಮುಂದಿನ ಅಧ್ಯಾಯದಲ್ಲಿ, ಅವರ ವೈರಿಗಳು ದಂಡಿಸಲ್ಪಡುವರೆಂಬ ವಾಸ್ತವಾಂಶವು "ದೇವಜನರ ತಾಳ್ಮೆಯು ತೋರಿ ಬರುವದು" ಎಂದು ಕರೆಯಲ್ಪಟ್ಟಿದೆ (14:11, 12). (4) ಈ ಸಂದೇಶವು ವಾಚಕರಿಗೆ ಬಹಳಷ್ಟು ಆದರಣೆಯನ್ನುಂಟು ಮಾಡಿರಬೇಕು. ಈ ಮಾತುಗಳನ್ನು ಯಾವ ವಿಧದಲ್ಲಿ ನೋಡಿದರೂ ಸರಿಯೇ, ಕ್ರೈಸ್ತರು "ಸ್ಥೈರ್ಯವನ್ನು ಮತ್ತು ನಂಬಿಗಸ್ತಿಕೆಯನ್ನು"[15] ಕಾಪಾಡಿಕೊಂಡು ಹೋಗುವಷ್ಟು ಕಾಲ ದುಷ್ಟಶಕ್ತಿಗಳು ಗೆಲ್ಲುವದಕ್ಕೆ ಸಾಧ್ಯವಿಲ್ಲ ಎಂಬ ಸೂಚ್ಯಾರ್ಥವು ಇಲ್ಲಿರುತ್ತದೆ.

10ನೇ ವಚನದ ಮೂಲಭೂತ ಸಂದೇಶವು **ಇದರಲ್ಲಿ ದೇವಜನರ ತಾಳ್ಮೆಯೂ ನಂಬಿಕೆಯೂ ತೋರಿಬರುತ್ತದೆ** ಎಂಬ ಮಾತುಗಳಲ್ಲಿ ಕಂಡು ಬರುತ್ತದೆ. ಈ ವಾಕ್ಯಭಾಗವು ತಮ್ಮ ಜೀವಿತಗಳಲ್ಲಿ ಮತ್ತು ನಂಬಿಕೆಯಲ್ಲಿ ದೃಢವಾಗಿ ಉಳಿದುಕೊಳ್ಳಬೇಕೆಂದು ಕ್ರೈಸ್ತರನ್ನು ಪ್ರೋತ್ಸಾಹಿಸತಕ್ಕದ್ದು. The Simple English™ Bibleನಲ್ಲಿ ಹೀಗಿರುತ್ತದೆ, "ಇದರರ್ಥವೇನೆಂದರೆ ಪರಿಶುದ್ಧ ಜನರು ತಾಳ್ಮೆಯಿಂದ ಸಹಿಸಿಕೊಂಡು ನಂಬಿಗಸ್ತರಾಗಿರಬೇಕು ಎಂಬುದೆ." ಮೃಗವನ್ನು ಹಿಂಬಾಲಿಸುವದಕ್ಕೆ ತಾಳ್ಮೆಯ ಅಗತ್ಯವಿರುವದಿಲ್ಲ, ಆದರೆ ಕ್ರಿಸ್ತನನ್ನು ಹಿಂಬಾಲಿಸುವದಕ್ಕೆ ಅದರ ಅಗತ್ಯವಿದೆ.

## ಭೂಮಿಯೊಳಗಿಂದ ಬರುವ ಮೃಗ (13:11-18)

**11ಮತ್ತೊಂದು ಮೃಗವು ಭೂಮಿಯೊಳಗಿಂದ ಬರುವದನ್ನು ಕಂಡೆನು. ಇದಕ್ಕೆ ಟಗರಿಗಿರುವಂತೆ ಎರಡು ಕೊಂಬುಗಳಿದ್ದವು; ಘಟಸರ್ಪದಂತೆ ಮಾತಾಡಿತು. 12ಈ ಮೃಗವು ಮೊದಲನೆಯ ಮೃಗದ ಅಧಿಕಾರವನ್ನೆಲ್ಲಾ ಅದರ ಸನ್ನಿಧಿಯಲ್ಲೇ ನಡಿಸುತ್ತದೆ. ಇದು ಮರಣಕರವಾದ ಗಾಯ ವಾಸಿಯಾದ ಮೊದಲನೆಯ ಮೃಗಕ್ಕೆ ಭೂಲೋಕವೂ ಭೂನಿವಾಸಿಗಳೂ ನಮಸ್ಕರಿಸುವಂತೆ ಮಾಡುವಂಥದಾಗಿದೆ. 13ಇದು ಮಹತ್ತಾದ ಸೂಚಕಕಾರ್ಯಗಳನ್ನು ನಡಿಸುತ್ತದೆ; ಜನರ ಮುಂದೆ ಬೆಂಕಿಯು ಆಕಾಶದಿಂದ ಭೂಮಿಗೆ ಇಳಿದುಬರುವಂತೆಯಾದರೂ ಮಾಡುವದು. 14ಆ ಮೊದಲನೆಯ ಮೃಗದ ಸನ್ನಿಧಿಯಲ್ಲಿ ಮಹತ್ಕಾರ್ಯಗಳನ್ನು ಮಾಡುವ ಅಧಿಕಾರವಿರುವದರಿಂದ ಭೂನಿವಾಸಿಗಳನ್ನು ಮರುಳುಗೊಳಿಸುತ್ತದೆ; ಅವರಿಗೆ - ಕತ್ತಿಯಿಂದ ಗಾಯಹೊಂದಿ ಸಾಯದೆ ಬದುಕಿದ ಮೃಗದ ಘನಕ್ಕಾಗಿ ವಿಗ್ರಹವನ್ನು ಮಾಡಿಸಿಕೊಳ್ಳಬೇಕೆಂದು ಬೋಧಿಸುತ್ತದೆ. 15ಇದಲ್ಲದೆ ಆ ಮೃಗದ ವಿಗ್ರಹಕ್ಕೆ ಜೀವಕೊಡುವ ಸಾಮರ್ಥ್ಯವು ಇದಕ್ಕೆ ದೊರೆಯಿತು. ಆ ಮೃಗದ ವಿಗ್ರಹವು ಮಾತಾಡುವದು; ತನಗೆ ನಮಸ್ಕರಿಸದವರೆಲ್ಲರಿಗೂ ಮರಣದಂಡನೆ ಆಗುವಂತೆ ಮಾಡುವದು. 16ಈ ಎರಡನೆಯ ಮೃಗವು - ದೊಡ್ಡವರು ಚಿಕ್ಕವರು ಐಶ್ವರ್ಯವಂತರು ಬಡವರು ಸ್ವತಂತ್ರರು ದಾಸರು ಎಲ್ಲರೂ ತಮ್ಮ ತಮ್ಮ ಬಲಗೈಯ ಮೇಲಾಗಲಿ ಹಣೆಯ ಮೇಲಾಗಲಿ ಗುರುತು ಹೊಂದಬೇಕೆಂತಲೂ 17ಆ ಗುರುತು ಯಾರಿಗಿಲ್ಲವೋ ಅವರು ಕ್ರಯ ವಿಕ್ರಯಗಳನ್ನು ನಡಿಸಕೂಡದೆಂತಲೂ ಆಜ್ಞೆಮಾಡುತ್ತದೆ. ಆ ಗುರುತು ಯಾವದಂದರೆ ಮೊದಲನೆಯ ಮೃಗದ ಹೆಸರು ಅಥವಾ ಅದರ ಹೆಸರನ್ನು ಸೂಚಿಸುವ ಅಂಕೆ. 18ಇದರಲ್ಲಿ ಜ್ಞಾನವು ಅಡಕವಾಗಿದೆ. ಬುದ್ಧಿವಂತನು ಆ ಮೃಗದ ಅಂಕೆಯನ್ನು ಎಣಿಸಲಿ; ಅದು ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆಯಾಗಿದೆ; ಅದರ ಅಂಕೆಯು ಆರುನೂರ ಅರುವತ್ತಾರು.**

**ವಚನ 11.** ಯೋಹಾನನು ಹೀಗೆ ಹೇಳುತ್ತಾನೆ, **ಮತ್ತೊಂದು ಮೃಗವು ಭೂಮಿಯೊಳಗಿಂದ ಬರುವದನ್ನು ಕಂಡೆನು**. ಮೃಗವು **ಭೂಮಿಯೊಳಗಿಂದ** ಬಂದಿತು ಎಂಬುದರಲ್ಲಿ ಯಾವದೇ ಮಹತ್ವವಿರುವದಾದರೆ, ಬಹುಶಃ ಅದು ಆತನ ಮೂಲವು ಭೂಮಿಯಿಂದಲೇ ಆಗಿದೆ ಹೊರತು ಪರಲೋಕವಲ್ಲ ಎಂಬುದೆ (ನೋಡಿರಿ ಯೋಹಾನ 3:31; ಯಾಕೋಬ 3:15). ಮೊದಲನೆಯ ಮೃಗವು *ಸಮುದ್ರ*ದೊಳಗಿಂದ ಬಂದರೆ ಎರಡನೆಯ ಮೃಗವು *ಭೂಮಿ*ಯೊಳಗಿಂದ ಬಂದಿತು ಎಂಬುದರಲ್ಲಿ ಬಹುಶಃ ಅಷ್ಟೇನೂ ಮಹತ್ವವಿರುವದಿಲ್ಲ. ದಾನಿಯೇಲನು ಕಂಡ ನಾಲ್ಕು ಮೃಗಗಳ ದರ್ಶನದಲ್ಲಿ, ಮೊದಲು ಅವುಗಳು ಸಮುದ್ರದೊಳಗಿಂದ ಬಂದವು ಎಂಬುದಾಗಿ ಹೇಳಲಾಗುತ್ತದೆ (ದಾನಿಯೇಳ 7:3); ಬಳಿಕ ಅವುಗಳು ಭೂಮಿಯೊಳಗಿಂದ ಎದ್ದವು ಎಂಬುದಾಗಿ ಹೇಳಲಾಗುತ್ತದೆ (ದಾನಿಯೇಲ 7:17); ದಾನಿಯೇಲ ಪುಸ್ತಕದಲ್ಲಿ "ಸಮುದ್ರ" ಮತ್ತು "ಭೂಮಿ" ಎಂಬ ಪದಗಳು ಪರ್ಯಾಯವಾಗಿ ಬಳಸಲ್ಪಟ್ಟಿವೆ.

ಒಂದು ದರ್ಶನದಲ್ಲಿ ಜೀವಿಯೊಂದು ಹೇಗೆ "ಭೂಮಿಯೊಳಗಿಂದ ಬರುವದು" ಎಂಬುದು ಯಾರಿಗೂ ನಿಖರವಾಗಿ ತಿಳಿಯದು. ಬಹುಶಃ ಯೋಹಾನನು ಈ ರೀತಿಯಾದ ಒಂದನ್ನು ಕಂಡಿರಬೇಕು: ಘಟಸರ್ಪನು ಸಮುದ್ರದ ಮೃಗವನ್ನು ಸ್ವಾಗತಿಸುತ್ತಿರುವ ವೇಳೆ, ಹತ್ತಿರ ಭೂಮಿಯು ಕಂಪಿಸುವದಕ್ಕಾರಂಭಿಸಿತು. ಭೂಮಿಯಲ್ಲಿ ಬಿರುಕುಗಳು ಕಾಣಿಸಿಕೊಂಡವು, ಮತ್ತು ಗಾಳಿಯಲ್ಲಿ ಧೂಳು ತುಂಬಿಕೊಂಡಿತು. ಹೊಲವೊಂದರಲ್ಲಿ ಮೇಲ್ಭಾಗವು ಕುಸಿಯುವದು ಹಾಗೂ ಉಬ್ಬುವದು ಸಂಭವಿಸುತ್ತಿತ್ತು. ಏನೋ ಒಂದು ಅದರೊಳಗಿಂದ ಮೇಲ್ಭಾಗಕ್ಕೆ ಬರುವದಕ್ಕಾಗಿ ಹೋರಾಡುತ್ತಿತ್ತು, ಅದು ಯಾವದೋ ಒಂದು ಬಲಿಷ್ಠ ಹಾಗೂ ಶಕ್ತಿಶಾಲಿ ಜೀವಿಯಾಗಿತ್ತು. ಮಣ್ಣಿನೊಳಗಿಂದ ಯಾವ ವಿಧವಾದ ರಾಕ್ಷಸವು ಹೊರಬರುವದು?

ಕೊನೆಗೂ ಜೀವಿಯು ಒಡೆದುಕೊಂಡು ಕಣ್ಣಿಗೆ ಬಿದ್ದಾಗ, ಆತನು ಆಶ್ಚರ್ಯಕರವಾದ ರೀತಿಯಲ್ಲಿ ಕೆಡುಕನ್ನು ಮಾಡದಂಥ, ಮುಗ್ಧನಂತೆ ಕಂಡನು: **ಇದಕ್ಕೆ ಟಗರಿಗಿರುವಂತೆ ಎರಡುಕೊಂಬುಗಳಿದ್ದವು.** ಬೇರೆ ಇನ್ನಾವ ವಿವರಗಳು ಕೊಡಲ್ಪಟ್ಟಿಲ್ಲ, ಆದರೆ ವಾಚಕನು ಬಹುಶಃ ಅದನ್ನು ಒಂದು ಕುರಿಯಂತೆ ಕಾಣುವ ಜೀವಿಯೆಂದು ಭಾವಿಸಿಕೊಳ್ಳುವನು. ಕೊಂಬುಗಳ ಸಾಂಕೇತಿಕ ಅರ್ಥವು ಬಲ, ಆದರೆ ಅದು ಸಹ ಮೃಗಕ್ಕಿದ್ದ ಕೆಡುಕನ್ನುಂಟ ಮಾಡದ ಚರ್ಯೆದ ಕಡೆಯಿಂದ ದೃಷ್ಟಿಯನ್ನು ಬೇರೆ ಕಡೆ ಕದಲಿಸುವಂತೆ ಮಾಡಲಿಲ್ಲ - "ಕುರಿಮರಿಗಿರುವಂತೆ ಕೊಂಬುಗಳು" ಆಗಿದ್ದವು, ಉಣ್ಣೆಯಿಂದ ಆಗಷ್ಟೇ ಹೊರಗೆ ಕಾಣಿಸಿಕೊಳ್ಳಲಾರಂಭಿಸಿದ್ದ ಚಿಕ್ಕ ಮೂಳೆಯ ಉಬ್ಬುಗಳಾಗಿದ್ದವು. ಅಲ್ಲದೆ, ಮೃಗಕ್ಕೆ ಕೇವಲ *ಎರಡು* ಕೊಂಬುಗಳಿದ್ದವು, ಘಟಸರ್ಪದಂತೆ *ಹತ್ತು* ಕೊಂಬುಗಳು (12:3) ಮತ್ತು ಸಮುದ್ರ ಮೃಗಕ್ಕೆ ಇದ್ದಂತೆ *ಹತ್ತು* ಕೊಂಬುಗಳು (13:1) ಇರಲಿಲ್ಲ.

ಹೇಗೂ, ಭೂಮಿಯೊಳಿಗಿಂದ ಬಂದ ಮೃಗವು ತನ್ನ ಬಾಯನ್ನು ತೆರೆದಾಗ, ಆತನ ತೋರಿಕೆಯು ವಂಚಕವಾಗಿತ್ತದೆಂಬುದು ಸ್ಪಷ್ಟವಾಗುತ್ತದೆ: **ಘಟಸರ್ಪದಂತೆ ಮಾತಾಡಿತು.** ಯೇಸುವು ತನ್ನ ಶಿಷ್ಯರಿಗೆ ಕುರಿವೇಷದಲ್ಲಿ ಬರುವ ತೋಳಗಳ ಕುರಿತಾಗಿ ಎಚ್ಚರಿಸಿದ್ದನು (ಮತ್ತಾಯ 7:15); ಯೋಹಾನನು ಈಗ ತನ್ನ ವಾಚಕರನ್ನು ಕುರಿವೇಷದಲ್ಲಿರುವ ಘಟಸರ್ಪನ ಬಗ್ಗೆ ಎಚ್ಚರಿಸುತ್ತಾನೆ. ಆತನು "ಮೃಗದಂತೆ ಮಾತಾಡಿದ"ನಾದ್ದರಿಂದ, ಕೆಲವರು ಕುರಿ-ವೇಷದಾರಿ ಮೃಗವು ಗರ್ಜಿಸಿತು ಎಂಬುದಾಗಿ ಯೋಚಿಸುತ್ತಾರೆ. ಬಹುಶಃ ಆತನು ಬುಸ್ ಎಂದಿರಬೇಕು - "ಪಿಶಾಚನೆಂತಲೂ ಸೈತಾನನೆಂತಲೂ ಹೆಸರುಳ್ಳ ಪುರಾತನ ಸರ್ಪ"ದ ರೀತಿಯಲ್ಲಿ (ಪ್ರಕಟನೆ 12:9). ನಾವು ಹೆಚ್ಚುಕಡಿಮೆ ಒಬ್ಬ ಧಾರ್ಮಿಕ ನಕಲಿ ಕಲಾವಿದನು ನುಡಿಯುತ್ತಿರುವ ಬೆಣ್ಣೆಯಂತಹ, ಮನವೋಲಿಸುವ ಪುಸಲಾವಣೆಯ ಮಾತುಗಳನ್ನು

ಕೇಳಿಸಿಕೊಳ್ಳಬಲ್ಲೆವು.

**ವಚನ 12.** "*ಧಾರ್ಮಿಕ* ನಕಲಿ ಕಲಾವಿದ" ಎಂಬ ಪದವು ಸೂಕ್ತವಾದದ್ದು ಯಾಕೆಂದರೆ ಪ್ರಕಟನೆ ಪುಸ್ತಕದೊಳಗೆ ಬೇರೊಂದು ಕಡೆಯಲ್ಲಿ ಭೂಮಿಯೊಳಗಿಂದ ಬಂದ ಮೃಗವು "ಸುಳ್ಳು ಪ್ರವಾದಿ" ಎಂದು ಕರೆಯಲ್ಪಟ್ಟಿದೆ (16:13; 19:20; 20:10); ಧರ್ಮವೇ ಆತನ ವೈಶಿಷ್ಟ್ಯತೆ. **ಈ ಮೃಗವು ಮೊದಲನೆಯ ಮೃಗದ ಅಧಿಕಾರವನ್ನೆಲ್ಲಾ ಅದರ ಸನ್ನಿಧಿಯಲ್ಲೇ ನಡಿಸುತ್ತದೆ. ಇದು ಮರಣಕರವಾದ ಗಾಯ ವಾಸಿಯಾದ ಮೊದಲನೆಯ ಮೃಗಕ್ಕೆ ಭೂಲೋಕವೂ ಭೂನಿವಾಸಿಗಳೂ ನಮಸ್ಕರಿಸುವಂತೆ ಮಾಡುವಂಥದಾಗಿದೆ.** ಎರಡನೆಯ ಮೃಗದ ಪ್ರಾಥಮಿಕ ಕೆಲಸವು **ಮೊದಲನೆಯ ಮೃಗಕ್ಕೆ** ನಮಸ್ಕರಿಸುವಂತೆ ಮನುಷ್ಯರನ್ನು ಮನವೋಲಿಸುವದಾಗಿತ್ತು. ಮೊದಲನೆಯ ಮೃಗಕ್ಕೆ "ಕ್ರೈಸ್ತ-ವಿರೋಧಿ ರಾಜಕೀಯ ಶಕ್ತಿ" ಎಂದು ಹೆಸರಿಡಲಾಗಿದೆ. ಎರಡನೆಯ ಮೃಗಕ್ಕೆ "ಕ್ರೈಸ್ತ-ವಿರೋಧಿ ಧಾರ್ಮಿಕ ಶಕ್ತಿ" ಎಂದು ಹೆಸರಿಡಬಹುದು.

ಭೂಮಿಯೊಳಗಿಂದ ಬಂದ ಮೃಗವು *ಮೇಲ್ಗಡೆ ತೋರುವ ರೀತಿಯಲ್ಲಿಯೇ ಇರಲಿಲ್ಲ.* ಯಾವದೇ ನಕಲಿ ತಾನು ಯಾವುದರ ಅನುಕರಣೆ ಮಾಡುತ್ತಿದೆಯೋ ಅದರಂತೆ ತದ್ರೂಪವಾಗಿರುವದಾದರೆ ಅದು ಅತ್ಯಂಥ ಮೋಸಕರವಾದದ್ದು. ಹೀಗೆ ಈ ಜೀವಿಗೆ ಹೊರಗಡೆಯಲ್ಲಿ ಕುರಿಮರಿಯಂತೆ ರೂಪವಿತ್ತು. ವಾಸ್ತವಿಕದಲ್ಲಿ, ಆತನು ದೇವವಿರೋಧಿ ಕುರಿಮರಿಯಾಗಿದ್ದನು. ಆತನ ವಿಷಯದಲ್ಲಿ ಕೆಡುಕರಹಿತತೆ ಅಥವಾ ಮುಗ್ಧವಾದದ್ದೆಂಬುದು ಯಾವದೂ ಇರಲಿಲ್ಲ:

1. **ಈ ಮೃಗವು ಮೊದಲನೆಯ ಮೃಗದ ಅಧಿಕಾರವನ್ನೆಲ್ಲಾ ಅದರ ಸನ್ನಿಧಿಯಲ್ಲೇ ನಡಿಸುತ್ತದೆ.** "ಅದರ ಸನ್ನಿಧಿಯಲ್ಲಿ" ಎಂಬುದು ಮೃಗವು ಹೇಳುವದನ್ನು ಮಾಡುವದಕ್ಕೆ ಕಾತುರತೆಯಿಂದಿರುವದನ್ನು ಸೂಚಿಸುತ್ತದೆ. ಒಬ್ಬ ಪ್ರವಾದಿಯು ದೇವರ "ಸನ್ನಿಧಿಯಲ್ಲಿ" ಇರುವ ವೇಳೆ, ಆತನು ಕರ್ತನ ಚಿತ್ತವನ್ನು ಮಾಡುವದಕ್ಕೆ ಸಿದ್ಧನಾಗಿ ನಿಂತಿರುತ್ತಿದ್ದನು. ಮೊದಲನೆಯ ಮೃಗಕ್ಕೆ "ಸಕಲ ಕುಲ ಪ್ರಜೆ ಭಾಷೆ ಜನಾಂಗಗಳ ಮೇಲೆ" (ವ. 7) ಘಟಸರ್ಪನಿಗಿದ್ದ ಅಧಿಕಾರವು ಕೊಡಲ್ಪಟ್ಟಿತ್ತಾದ್ದರಿಂದ (ವಚನಗಳು 2, 4), ಇದೊಂದು ಅತ್ಯಂಥ ಮನಸೆಳೆಯುವ ಅಧಿಕಾರವಾಗಿತ್ತು.

2. ನಿರ್ದಿಷ್ಟವಾಗಿ, ಎರಡನೆಯ ಮೃಗಕ್ಕೆ **ಮರಣಕರವಾದ ಗಾಯ ವಾಸಿಯಾದ ಮೊದಲನೆಯ ಮೃಗಕ್ಕೆ ಭೂಲೋಕವೂ ಭೂನಿವಾಸಿಗಳೂ ನಮಸ್ಕರಿಸುವಂತೆ ಮಾಡುವ** ಅಧಿಕಾರವು ಇತ್ತು. "ಭೂನಿವಾಸಿಗಳು" ಎಂಬುದು ಪ್ರಕಟನೆ ಪುಸ್ತಕದಲ್ಲಿ ಅವಿಶ್ವಾಸಿಗಳು, ಕ್ರೈಸ್ತೇತರರನ್ನು ಸೂಚಿಸುತ್ತದೆ. "ಮರಣಕರವಾದ ಗಾಯ" ಎಂಬುದು ಮೃಗವನ್ನು ಭಿನ್ನಗೊಳಿಸುವ ಗುರುತು ಆಗಿತ್ತು (ವಚನಗಳು 12, 14; ವ. 3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಯೋಹಾನನ ದಿನ ಈ ಮೃಗವು ಯಾರಾಗಿತ್ತು? ಮೊದಲನೆಯ ಮೃಗವನ್ನು ರೋಮನ್ ಸಾಮ್ರಾಜ್ಯವೆಂದು ಗುರುತಿಸುವದು ಸರಿಯೇ ಆಗಿರುವದಾದರೆ (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮೊದಲನೆಯ ಶತಮಾನದ ಕಡೇ ಭಾಗದಲ್ಲಿ, ಚಕ್ರವರ್ತಿಯ ಆರಾಧನೆಯನ್ನು ಜಾರಿಗೆ ತರುವದಕ್ಕೆ ಜವಾಬ್ದಾರವಾಗಿರುವ ಸಂಸ್ಥೆಗಳಿಂದ ಎರಡನೆಯ ಮೃಗವು ಪ್ರತಿನಿಧಿಸಲ್ಪಟ್ಟಿರುತ್ತದೆ. Bruce Metzgerನು ಹೀಗೆ ಬರೆದನು,

> Julius Caesarನಿಂದ ಮೊದಲ್ಗೊಂಡು, ರೋಮನ್ ಚಕ್ರವರ್ತಿಗಳು ದೈವೀಕರಣಗೊಳಿಸಲ್ಪಟ್ಟಿದ್ದರು, ಅಂದರೆ ದೇವರಿಗೆ ಸಲ್ಲತಕ್ಕ ಸ್ಥಾನ ಹಾಗೂ

ಆರಾಧನೆಗಳನ್ನು ಇವರಿಗೆ ಸಲ್ಲಿಸಲಾಗಿತ್ತು, ಆರಂಭದಲ್ಲಿದ್ದವರು ತಮ್ಮ ಮರಣಾನಂತರ ಆರಾಧನೆಗೆ ಪಾತ್ರರಾಗಿದ್ದರು, ಆದರೆ ಅನಂತರದ ಚಕ್ರವರ್ತಿಗಳು ತಮ್ಮ ಜೀವಿತಕಾಲದಲ್ಲೂ ಆರಾಧನೆಯನ್ನು ಹೊಂದಿದ್ದರು ... Domitian ಚಕ್ರವರ್ತಿಯು ತನ್ನನ್ನು ಜನರು "ನಮ್ಮ ಕರ್ತನಾದ ದೇವರು" ಎಂದು ಸಂಬೋಧಿಸುವಂತೆ ಬೇಡಿಕೆ ಇಟ್ಟಿದ್ದನು. ಯೋಹಾನನು ಯಾವ ಪಟ್ಟಣಗಳಿಗೆ ಬರೆದನೋ ಅವುಗಳಲ್ಲಿ ಬಹುಪಾಲು ಪಟ್ಟಣಗಳಲ್ಲಿ, ಈ "ದೇವರುಗಳಿಗೆ" ದೇವಾಲಯಗಳು ನಿರ್ಮಿಸಲ್ಪಟ್ಟಿದ್ದವು - ಇದು ಏಕೈಕ ಸತ್ಯ ದೇವರ ಪರಲೋಕ ನಿವಾಸದ ಒಂದು ಅಪಹಾಸ್ಯದಂತಿತ್ತು.

ಚಕ್ರವರ್ತಿ-ಮತಪಂಥವನ್ನು ಉತ್ತೇಜಿಸುವ ಆಡಳಿತ ನೀತಿಯು ಅಂತಿಮವಾಗಿ ಸ್ವತಃ ಚಕ್ರವರ್ತಿಯಿಂದಲೇ ಬಂದಿತಾದರೂ, ಅದನ್ನು ಕಾರ್ಯರೂಪದಲ್ಲಿ ಜಾರಿಗೆ ತರುವದು ಸ್ಥಳೀಯ ಅಧಿಕಾರಿಗಳ ಕೈಗಳಲ್ಲಿತ್ತು. ಈ ರಾಜಕೀಯ ಕೈಕೆಳಗಿನವರು ಸೂಕ್ತವಾಗಿ ಎರಡನೆಯ ಮೃಗದಿಂದ ಪ್ರತಿನಿಧಿಸಲ್ಪಡಬಲ್ಲರು ...[16]

Ray Summersನು ಒಂದು ನಿರ್ದಿಷ್ಟವಾದ ಸಂಸ್ಥೆಯನ್ನು ಸೂಚಿಸುತ್ತಾನೆ:

[ಭೂಮಿಯೊಳಗಿಂದ ಬಂದ ಮೃಗದ] ಈ ಎಲ್ಲಾ ಗುಣಸ್ವಭಾವಗಳು ಎರಡನೆಯ ಮೃಗವನ್ನು ಸರ್ಕಾರದ ಧರ್ಮವನ್ನು ಜಾರಿಗೆ ತರುವದಕ್ಕಾಗಿ ಸ್ಥಾಪಿಸಲಾಗಿದ್ದ "ಪ್ರಾಂತೀಯ ವಿಭಾಗ" ಅಥವಾ "ಸಮನ್ವಯ" ಎಂಬುದಾಗಿ ಗುರುತಿಸಲ್ಪಡಬಹುದಾಗಿದೆ. ಇದು ಸರ್ಕಾರಿ ಧರ್ಮದ ಅಧಿಕಾರವನ್ನು ವಹಿಸಿಕೊಂಡಿದ್ದ ಅಧೀಕೃತ ವಿಭಾಗ ಆಗಿತ್ತು ಮತ್ತು ಚಕ್ರವರ್ತಿಯ ಪ್ರತಿಮೆಗೆ ಗೌರವವನ್ನು ಸಲ್ಲಿಸುವಂತೆ ಎಲ್ಲರನ್ನೂ ಒತ್ತಾಯಿಸುವ ಕರ್ತವ್ಯವನ್ನು ಹೊಂದಿತ್ತು.[17]

ಸುಳ್ಳು ಪ್ರವಾದಿಗೆ ವಹಿಸಿದ್ದ ಕೆಲಸವು "ಚಕ್ರವರ್ತಿಯ ಆರಾಧನೆಯನ್ನು ಅದರೊಂದಿಗೆ ಸೇರ್ಪಡೆಯಾಗಿದ್ದ ಯಾಜಕತ್ವ, ಗುಡಿಗಳು, ಅದರ ರೋಮಾ ದೇವತೆ ಮತ್ತು ಆಳ್ವಿಕೆ ಮಾಡುತ್ತಿರುವ ಚಕ್ರವರ್ತಿಯ ಪ್ರತಿಮೆಗಳಿಗೆ ಪೂಜಿಸುವದನ್ನು ಉತ್ತೇಜಿಸುವದಾಗಿತ್ತು ಮತ್ತು ಅದರ ಮುಂದೆ ಪ್ರಾರ್ಥಿಸಬೇಕಾಗಿತ್ತು ಮತ್ತು ದೂಪವನ್ನು ಹಾಕಬೇಕಾಗಿತ್ತು ಹಾಗೂ ನಿಯತಕ್ರಮವಾದ ಬಿಡುವುಗಳೊಂದಿಗೆ ಆರಾಧನೆಯನ್ನು ನಡಿಸಬೇಕಾಗಿತ್ತು."[18] ಪ್ರಕಟನೆ ಪುಸ್ತಕವು ಬರೆಯಲ್ಪಟ್ಟು ಎರಡು ದಶಕಗಳಾಗುವದರೊಳಗೆ, Bithyniaದ ದೇಶಾಧಿಪತಿಯಾಗಿದ್ದ Plinyನು ಒಂದು ನಿರ್ದಿಷ್ಟವಾದ ಸಮಸ್ಯೆಯ ಬಗ್ಗೆ ಚಕ್ರವರ್ತಿಯಾದ Trajanನನಿಗೆ ಹೀಗೆ ಬರೆದನು,

ಒಂದು ಅನಾಮದೇಯ ದಸ್ತಾವೇಜು ಅನೇಕ ಹೆಸರುಗಳೊಂದಿಗೆ ಬಂದಿತು. ತಾವು ಕ್ರೈಸ್ತರಲ್ಲ ಅಥವಾ ಎಂದಿಗೂ ಕ್ರೈಸ್ತರೇ ಆಗಿರಲಿಲ್ಲ ಎಂದು ಹೇಳಿದವರನ್ನು, ಮತ್ತು ನನ್ನ ಮುಂದೆಯೇ ದೇವರುಗಳಿಗೆ ವಿಜ್ಞಾಪನೆ ಮಾಡಿದ ಹಾಗೂ ನಿನ್ನ ಪ್ರತಿಮೆಯ ಮುಂದೆ ದ್ರಾಕ್ಷಾರಸ ಮತ್ತು ದೂಪವನ್ನು ಇಟ್ಟಂಥ, ಮತ್ತು ವಿಶೇಷವಾಗಿ ಕ್ರಿಸ್ತನನ್ನು ಶಪಿಸಿದವರನ್ನು ಬಿಟ್ಟು ಕಳುಹಿಸಿದೆನು, ಆ ರೀತಿಯಾಗಿ ಯಾವ ನಿಜವಾದ ಕ್ರೈಸ್ತನು ಶಪಿಸುವದನ್ನು ನಾನು ಕೇಳಿಸಿಕೊಳ್ಳುವದಿಲ್ಲ.[19]

ಒಟ್ಟಿಗೆ ಸೇರಿ, ಪ್ರಕಟನೆ ಪುಸ್ತಕದ ಎರಡು ಮೃಗಗಳು ಯೇಸುವಿನ ಹಿಂಬಾಲಕರ ಮೇಲೆ ನಂಬಲಿಕ್ಕಾಗದಷ್ಟು ಒತ್ತಡವನ್ನು ಹಾಕಿದರು. ಕ್ರೈಸ್ತರನ್ನು ವಿರೋಧಿಸುವದು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗಿರುತ್ತಿತ್ತು, ಆದರೆ ಹಿಂಸೆಯ ಪೂರ್ಣ ಹೊಡೆತವನ್ನು ಅನೇಕರು ಅನುಭವಿಸಿದರು.

ಅರಸನ ಪ್ರತಿಮೆಗೆ ದೂಪವನ್ನು ಸುಡುವದಕ್ಕೆ ನಿರಾಕರಿಸಿದವರನ್ನು ರಾಜಕೀಯವಾಗಿ

ಹಕ್ಕು ತಪ್ಪಿಸಲ್ಪಡುತ್ತಿದ್ದರು, ಸಾಮಾಜಿಕವಾಗಿ ಸಂಬಂಧ ಕಡಿಯಲ್ಪಡುತ್ತಿದ್ದರು ಹಾಗೂ ಆರ್ಥಿಕವಾಗಿ ಬಹಿಷ್ಕರಿಸಲ್ಪಡುತ್ತಿದ್ದರು. ಸಾಮಾಜಿಕ ಮತ್ತು ಆರ್ಥಿಕ ನಿರ್ಬಂಧಗಳು ಅವರ ಉದ್ದೇಶಗಳನ್ನು ನೆರವೇರಿಸುವಲ್ಲಿ ವಿಫಲವಾದರೆ, ಇನ್ನಷ್ಟು ಕಠೋರವಾದ ವಿಧಾನಗಳನ್ನು ಅನುಸರಿಸಲಾಗುತ್ತಿತ್ತು. ಅವರನ್ನು ಸಾಯುವ ತನಕ ಬೆಟ್ಟಗಳಲ್ಲಿ ಅಥವಾ ಸಮುದ್ರದ ದ್ವೀಪಗಳಲ್ಲಿ ಸೆರೆಯಾಳುಗಳಾಗಿ ಇಡಲಾಗುತ್ತಿತ್ತು; ಅವರನ್ನು ಕಾಡು ಮೃಗಗಳಿಗೆ ಎಸೆಯಲಾಗುತ್ತಿತ್ತು, ಶಿಲುಬೆಗೆ ಜಡಿಯುತ್ತಿದ್ದರು, ಪಿಶಾಚ-ಪೀಡಿತ ಮೆದಳುಗಳು ಕಲ್ಪನೆ ಮಾಡಬಹುದಾಗಿದ್ದ ಯಾವದೇ ಅಥವಾ ಸಕಲ ವಿಧಾನಗಳಿಂದ ಅವರನ್ನು ಹಿಂಸಿಸಲಾಗುತ್ತಿತ್ತು. ನಜರೇಯನ ಹಿಂಬಾಲಕರನ್ನು ತುಳಿಯುವದಕ್ಕಾಗಿ, ಸಭೆಯನ್ನು ಸರ್ವನಾಶನಗೊಳಿಸುವದಕ್ಕಾಗಿ ಸಾಮ್ರಾಜ್ಯದ ಸರ್ಕಾರಿ ಮತ್ತು ಧಾರ್ಮಿಕ ಅಧಿಕಾರವು ಸಾಮಾನ್ಯ ಪ್ರಯತ್ನದಲ್ಲಿ ಒಂದಾಗಿದ್ದವು.[20]

ಸಭೆ ಮತ್ತು ಸರ್ಕಾರವು ಪ್ರತ್ಯೇಕವಾಗಿರುವ ದೇಶಗಳಲ್ಲಿ ಬೆಳೆದವರಿಗೆ, ಸೈತಾನನು ಜೊತೆಜೊತೆಯಾಗಿ ಕೆಲಸ ಮಾಡುವಂತೆ ರಾಜಕೀಯ ಶಕ್ತಿ ಹಾಗೂ ಧಾರ್ಮಿಕ ಶಕ್ತಿಗಳನ್ನು ಕೆಲಸಕ್ಕೆ ನೇಮಿಸುವದೆಂಬ ವಿಚಾರವು ವಿಚಿತ್ರವೆಂಬಂತೆ ಕಾಣಿಸಬಹುದು. ಇನ್ನೊಂದು ಕಡೆಯಲ್ಲಿ, ಈ ಕಾರ್ಯತಂತ್ರವು ಕೆಲವರಿಗೆ ಸಹಜವೆಂದೇನೂ ಅನ್ನಿಸುವದಿಲ್ಲ. ಪ್ರಪಂಚದಾದ್ಯಂತ ಅನೇಕ ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಗಳು ಒಂದು ಯಥಾಃಸ್ಥಿತಿಯನ್ನು ಕಾಪಾಡಿಕೊಂಡು ಹೋಗುವದಕ್ಕೆ ಕೈಜೋಡಿಸಿರುತ್ತವೆ.

ಅದನ್ನು ಅರ್ಥಮಾಡಿಕೊಳ್ಳುವದು ಪ್ರಮುಖ್ಯವಾಗಿರುತ್ತದೆ, ರೋಮನ್ ಸಾಮ್ರಾಜ್ಯಕ್ಕೆ ಸಂಬಂಧಪಟ್ಟಂತೆ, ಚಕ್ರವರ್ತಿ ಆರಾಧನೆಗೆ ಚಕ್ರವರ್ತಿಗಳ ತೃಪ್ತಿಯಾಗದ ಅಹಂನ್ನು ಸಂತೃಪ್ತಿಗೊಳಿಸುವದನ್ನು ಮೀರಿದ ಉದ್ದೇಶವೊಂದಿತ್ತು: "ಚಕ್ರವರ್ತಿ ಪಂಥವು ಒಂದು ಆಂತರೀಕ ಒಗ್ಗಟ್ಟಿನ ಬಂಧವನ್ನು ಒದಗಿಸುವದಾಗಿತ್ತು ... ಅದು ಸಾಮ್ರಾಜ್ಯದಲ್ಲಿ ಕೊರತೆಯಾಗಿತ್ತು ಮತ್ತು ಅಗತ್ಯವೂ ಆಗಿತ್ತು."[21] ರೋಮನ್ ಅಧಿಕಾರಿಗಳ ಮನಸ್ಸುಗಳ ಪ್ರಕಾರ, ಅವರು ಅಗತ್ಯವೆಂದು ಕೇಳುವದು ತಾರ್ಕಿಕವಲ್ಲದ್ದೇನೂ ಅನ್ನಿಸುತ್ತಿರಲಿಲ್ಲ ಎಂಬುದನ್ನು ಸಹ ಅರ್ಥಮಾಡಿಕೊಳ್ಳುವದು ಅಷ್ಟೇ ಪ್ರಾಮುಖ್ಯವಾದದ್ದು. ನಾವು ಅವರು ಮಾಡುತ್ತಿದ್ದ ಮನವಿಯನ್ನು ಊಹಿಸಿಕೊಳ್ಳಬಹುದಾಗಿದೆ: "ನಿಮಗೋಸ್ಕರ ರೋಮ್ ಏನು ಮಾಡಿದೆ ಎಂಬುದನ್ನು ನೋಡಿರಿ; ನೀವು ಆನಂದಿಸುತ್ತಿರುವ ಸಮಾಧಾನ ಮತ್ತು ಸಮೃದ್ಧಿಯನ್ನು ನೋಡಿರಿ; ಚಕ್ರವರ್ತಿಗಿಂತಲೂ ಉತ್ತಮವಾದ ಉಪಕಾರಿಯೊಬ್ಬನನ್ನು ನೀವು ಎಂದಾದರೂ ಕಂಡಿದ್ದೀರೋ? ನಿಶ್ಚಯವಾಗಿಯೂ ಒಂದು ಸರಳವಾದ ಕೃತಜ್ಞತಾಭಾವನೆಯೊಂದಿಗೆ ಆತನಿಗೆ ನೀವು ಈ ಔಪಚಾರಿಕ ಆರಾಧನೆಯನ್ನು ಸಲ್ಲಿಸಬಲ್ಲಿರಿ."[22] ಮುಚ್ಚುಮರೆಯಿಲ್ಲದೆ ಹೇಳುವದಾದರೆ, ಪ್ರತಿಮೆಗಳನ್ನು ಆರಾಧಿಸುವದಿಲ್ಲವೆಂದು ಕ್ರೈಸ್ತರು ತೋರಿದ ಮೊಂಡುತನವು ಅಧಿಕಾರದಲ್ಲಿರುವವರನ್ನು ದಿಗ್ಭ್ರಮೆ ಹಿಡಿಸಿತ್ತು.

ಇಂದು ಜನರು, ತಮ್ಮನ್ನು "ಕ್ರೈಸ್ತರು" ಎಂದು ಕರೆದುಕೊಳ್ಳುವವರಲ್ಲಿ ಸಹ ಕೆಲವರು, ಒಂದು ಪ್ರತಿಮೆಯ ಮುಂದೆ ಅಡ್ಡಬೀಳುವದರಲ್ಲಿ ಯಾವ ತಪ್ಪನ್ನು ಕಾಣುವದಿಲ್ಲ; ಆದರೆ ಯೋಹಾನನಿಗಾದರೋ, ಈ ಕೃತ್ಯವು ಅಂತಿಮ ದೇವದೂಷಣೆಯಾಗಿತ್ತು. ಪ್ರಕಟನೆ ಪುಸ್ತಕದಲ್ಲಿ, ಮೃಗಕ್ಕೆ ಹಾಗೂ ಆತನ ಪ್ರತಿಮೆಗೆ ನಮಸ್ಕರಿಸುವದು ಅವಿಶ್ವಾಸಿಗಳ ಲಕ್ಷಣವನ್ನು ನಿರೂಪಿಸುವದಾಗಿತ್ತು (14:9, 11; 16:2; 19:20; 20:4). ಕರ್ತನು ಎಲ್ಲಾ ಮನುಷ್ಯರು "ವಿಗ್ರಹಗಳನ್ನು ಬಿಟ್ಟುಬಿಟ್ಟು ದೇವರ ಕಡೆಗೆ ತಿರುಗಿಕೊಂಡು ಜೀವವುಳ್ಳ ಸತ್ಯದೇವರನ್ನು

ಸೇವಿಸುವವರಾಗಬೇಕು" ಎಂದು ಬಯಸುವನು (1 ಥೆಸಲೋನಿಕ 1:9; ನೋಡಿರಿ ರೋಮಾ 1:21-23, 25; 1 ಯೋಹಾನ 5:21).

**ವಚನ 13.** ಭೂಮಿಯಿಂದ ಮೃಗಕ್ಕೆ ಒತ್ತಾಯಪಡಿಸುವ ಅಧಿಕಾರವಿತ್ತು, ಆದರೆ ಆತನಿಗಿರುವ ಅತಿ ದೊಡ್ಡ ಬಲವು ಆತನ ವಂಚಿಸುವ ಸಾಮರ್ಥ್ಯದಲ್ಲಿಯೇ ಇತ್ತು. **ಇದು ಮಹತ್ತಾದ ಸೂಚಕಕಾರ್ಯಗಳನ್ನು ನಡಿಸುತ್ತದೆ; ಜನರ ಮುಂದೆ ಬೆಂಕಿಯು ಆಕಾಶದಿಂದ ಭೂಮಿಗೆ ಇಳಿದುಬರುವಂತೆಯಾದರೂ ಮಾಡುವದು.** ಮೊಟ್ಟಮೊದಲನೆಯದಾಗಿ, ಎರಡನೆಯ ಮೃಗವು ಒಂದು ನಕಲಿ-ಧರ್ಮವನ್ನು ಉತ್ತೇಜಿಸುತ್ತಿರುವ ಒಬ್ಬ ನಕಲಿ-ಪ್ರವಾದಿಯಾಗಿದ್ದನು.

11ನೇ ಅಧ್ಯಾಯದಲ್ಲಿ, ನಿಜವಾದ ಪ್ರವಾದಿಗಳು ನಿಜವಾದ ಧರ್ಮದ ಉತ್ತೇಜನಕ್ಕಾಗಿ ನಿಜವಾದ ಮಹತ್ಕಾರ್ಯಗಳನ್ನು ಮಾಡಿದರು. ಆ ಮಹತ್ಕಾರ್ಯಗಳು ದೇವರ ಸಹಾಯ ಹಾಗೂ ಸಾಮಾನ್ಯವಾದ ಪ್ರಸನ್ನತೆಗೆ ಸಂಕೇತವಾಗಿದ್ದವು. ಆದದರಿಂದ ಸುಳ್ಳು ಪ್ರವಾದಿಯು ಸುಳ್ಳು ಧರ್ಮದ ಉತ್ತೇಜನಕ್ಕಾಗಿ ಸುಳ್ಳು ಮಹತ್ಕಾರ್ಯಗಳನ್ನು ಮಾಡಿದನೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. 13ನೇ ವಚನವು **ಇದು ಮಹತ್ತಾದ ಸೂಚಕಕಾರ್ಯಗಳನ್ನು ನಡಿಸುತ್ತದೆ** ಎಂದು ಹೇಳುತ್ತದೆ. "ಸೂಚಕಕಾರ್ಯ" (σημεῖον, *sēmeion*) ಎಂಬುದು ಯೋಹಾನನ ಬರಹಗಳಲ್ಲಿ ಅದ್ಭುತಕಾರ್ಯಗಳನ್ನು ಸೂಚಿಸುವದಕ್ಕೆ ಬಳಸಲಾಗಿರುವ ಪದವಾಗಿದೆ.

ಪ್ರಸ್ತಾಪಿಸಲ್ಪಟ್ಟಿರುವ ಒಂದು ನಿರ್ದಿಷ್ಟವಾದ ಸೂಚಕಕಾರ್ಯವೆಂದರೆ ಆ ಜೀವಿಯು **ಬೆಂಕಿಯು ಆಕಾಶದಿಂದ ಭೂಮಿಗೆ ಇಳಿದುಬರುವಂತೆಯಾದರೂ ಮಾಡುವದು**. "ಧಾರ್ಮಿಕ ಅಧಿಕಾರ ಶ್ರೇಣಿಗಳೊಳಗೆ ಒಬ್ಬ ರೋಮನ್ ಗಣ್ಯವ್ಯಕ್ತಿ ಮತ್ತು ಪ್ರಾಂತೀಯ ದೇಶಾಧಿಪತಿಯು ಒಬ್ಬ ಕೈಸರನ ಹೊಸ ಪ್ರತಿಮೆಯನ್ನು ದೇವಾಲಯದಲ್ಲಿ ಪ್ರತಿಷ್ಠೆಪಡಿಸುವದಕ್ಕಾಗಿ ಕೂಡಿ ಬರುವ ವೇಳೆ, ಜನರನ್ನು ಪ್ರಭಾವಿತಗೊಳಿಸುವದಕ್ಕಾಗಿ ಸೂಚಕಕಾರ್ಯಗಳನ್ನೂ ಮಹತ್ಕಾರ್ಯಗಳನ್ನು ನಡಿಸಲಾಗುತ್ತಿತ್ತು."[23] ದೇವರ ಪ್ರವಾದಿಯಾದ ಎಲೀಯನು ಆಕಾಶದಿಂದ ಬೆಂಕಿಯು ಇಳಿದು ಬರುವಂತೆ ಮಾಡಿದ್ದನು (2 ಅರಸು 1:10, 12); ಅದೇ ರೀತಿಯಲ್ಲಿಯೇ ಸುಳ್ಳು ಪ್ರವಾದಿಯು ತಾನು ಆಕಾಶದಿಂದ ಬೆಂಕಿಯು ಇಳಿದು ಬರುವಂತೆ ಮಾಡುವದಕ್ಕೆ ಶಕ್ತನಾಗಿದ್ದನೋ ಎಂಬಂತೆ *ಕಾಣಿಸುವ ಹಾಗೆ* ಮಾಡಿದ್ದನು.

**ವಚನ 14.** ಭೂಮಿಯೊಳಗಿಂದ ಬಂದ ಮೃಗವು **ಭೂನಿವಾಸಿಗಳನ್ನು ಮರಳುಗೊಳಿಸುತ್ತದೆ**. ಈ ಸನ್ನಿವೇಶದಲ್ಲಿ, ಸುಳ್ಳು ಪ್ರವಾದಿಯು ಈ ಭೂಮಿಯಲ್ಲಿಯೇ ಸಂತೃಪ್ತವಾದ ಹೃದಯಗಳನ್ನು ಹೊಂದಿದ್ದ ಭೂನಿವಾಸಿಗಳನ್ನು, ಅವಿಶ್ವಾಸಿಗಳನ್ನು ಮಾತ್ರವೇ ಮರುಳುಗೊಳಿಸಲು ಶಕ್ತವಾಗಿದ್ದನು (ನೋಡಿರಿ 19:20). ಸರಳವಾಗಿ ಹೇಳುವದಾದರೆ, ಆತನು ಸುಲಭವಾಗಿ ಮೋಸಹೋಗಬಲ್ಲವರನ್ನು ಮಾತ್ರವೇ ಮರುಳುಗೊಳಿಸಬಲ್ಲನೆಂಬುದನ್ನು ಈ ವಾಕ್ಯಭಾಗವು ಸೂಚಿಸುತ್ತದೆ. ಹೇಗೂ, ಬೇರೆ ವಾಕ್ಯಭಾಗಗಳು ಮೋಸಹೋಗಬೇಡಿರೆಂದು *ಕ್ರೈಸ್ತರನ್ನು* ಎಚ್ಚರಿಸುತ್ತವೆ; ಅವುಗಳು ಸೂಚಿಸುವದೇನೆಂದರೆ, ಒಬ್ಬ ಕ್ರೈಸ್ತನ ಯೋಚನೆಗಳು ಈ ಭೂಮಿಯ ಮೇಲೆ ನೆಟ್ಟಿರುವದಾದರೆ, ಅವನು ಸಹ ಸೈತಾನನಿಂದ ವಂಚನೆಗೊಳಗಾಗಬಲ್ಲನು ಎಂಬುದೆ. ಪ್ರಕಟನೆ 13:11-18 ವಚನಗಳು ಕ್ರೈಸ್ತರನ್ನು ಸೈತಾನನು ಮೋಸಗೊಳಿಸುವದಕ್ಕೆ ಪ್ರಯತ್ನಿಸುವ ಕೆಲವೊಂದು ದಾರಿಗಳನ್ನು ಪ್ರಕಟಗೊಳಿಸುತ್ತದೆ. ವಾಕ್ಯಭಾಗವು ಹಾಗೆ ಮೋಸಪಡಿಸುವದಕ್ಕೆ ಆತನಿಗಿರುವ ಅಸಾಮರ್ಥ್ಯವನ್ನು ಸಹ ಒತ್ತಿ ಹೇಳುತ್ತದೆ - ಎಲ್ಲಿಯ ವರೆಗೆ ವ್ಯಕ್ತಿಯು ಕರ್ತನ ಮೇಲೆಯೇ ದೃಢವಾಗಿ ನೆಲೆಗೊಂಡಿರುತ್ತಾನೋ ಅವನು ಮೋಸಹೋಗಲಾರನು.

ಅದ್ಭುತಗಳನ್ನು ನಡಿಸುವ ಸಾಮರ್ಥ್ಯವು (ಅಥವಾ, ಕನಿಷ್ಠ, ಅದ್ಭುತಗಳನ್ನು ನಡಿಸುವಂತೆ

ಕಾಣಿಸುವದು) "ಸ್ವತಃ ಒಂದು ದೈವಿಕತೆಯ ಅಥವಾ ದೈವಿಕ ಕಟಾಕ್ಷದ ಒಂದು ಸೂಚನೆ ಆಗಿರುವದಿಲ್ಲ"[24] ಎಂಬುದನ್ನು ತಿಳಿದರೆ ಕೆಲವರು ಆಶ್ಚರ್ಯಗೊಳ್ಳಬಹುದು. ಪರ್ವತದ ಮೇಲಿನ ಪ್ರಸಂಗದಲ್ಲಿ, ಯೇಸುವು ಹೀಗೆ ಹೇಳಿದನು,

> ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ *ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ* ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ - ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು (ಮತ್ತಾಯ 7:21-23; ಒತ್ತಿ ಹೇಳಿದ್ದು ನನ್ನದು).

ಇಲ್ಲಿ ಪ್ರಸ್ತಾಪಿಸಲ್ಪಟ್ಟವರು ನಿಜವಾಗಿಯೂ ಅದ್ಭುತಗಳನ್ನು ಮಾಡಿದರೋ ಅಥವಾ ಮಾಡಿದೆವೆಂದು ಸುಮ್ಮನೆ ಹೇಳಿಕೊಂಡರೋ ಎಂಬುದನ್ನು ಕರ್ತನು ಮಾತ್ರವೇ ಬಲ್ಲನು, ಇಲ್ಲಿ ಮುಖ್ಯವಾದ ಅಂಶವು ಏನೆಂದರೆ ಅದ್ಭುತ-ಮಾಡುವದಕ್ಕಿಂತಲೂ ಮುಂಚಿತವಾಗಿ ದೇವರಿಗೆ ವಿಧೇಯರಾಗುವದು ಯಾವಾಗಲೂ ಮುಖ್ಯವಾಗಿರುತ್ತದೆ. ಪುನಃ, ಯೇಸುವು ಎಚ್ಚರಿಸಿದ್ದೇನೆಂದರೆ, ತಾನು ಹೊರಟು ಹೋದ ಬಳಿಕ "ಸುಳ್ಳು ಕ್ರಿಸ್ತರೂ ಸುಳ್ಳುಪ್ರವಾದಿಗಳೂ" ಏಳುವರು ಎಂಬದೆ. "ಸಾಧ್ಯವಾದರೆ ದೇವರಾದುಕೊಂಡವರನ್ನು ಸಹ ಮೋಸಗೊಳಿಸುವದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು" (ಮತ್ತಾಯ 24:24).

ಬಹು ಕಾಲದ ಹಿಂದೆಯೇ ಇಸ್ರಾಯೇಲ್ಯರಿಗೆ ನಮ್ಮ ಚರ್ಚೆಗೆ ಸಂಬಂಧ ಪಡುವಂತಹ ಒಂದು ಎಚ್ಚರಿಕೆಯು ಕೊಡಲ್ಪಟ್ಟಿತ್ತು. ಧರ್ಮೋಪದೇಶಕಾಂಡ 13ರಲ್ಲಿ, ಒಬ್ಬ ಪ್ರವಾದಿಯು ಎದ್ದು ಜನರಿಗೆ "ಒಂದು ಅದ್ಭುತವನ್ನಾಗಲಿ ಮಹತ್ಕಾರ್ಯವನ್ನಾಗಲಿ" ತೋರಿಸುವ ಸಾಧ್ಯತೆಯ ಕುರಿತು ಮಾತಾಡಿದನು (ಧರ್ಮೋಪದೇಶಕಾಂಡ 13:1). ಹೇಗೂ, ಒಂದು ವೇಳೆ ಪ್ರವಾದಿಯು "ಇತರ ದೇವರುಗಳನ್ನು ಸೂಚನೆಮಾಡಿ ... ಈ ದೇವತೆಗಳನ್ನು ಅವಲಂಬಿಸಿ ಸೇವಿಸೋಣ" ಎಂದು ಹೇಳಿದರೆ (ಧರ್ಮೋಪದೇಶಕಾಂಡ 13:2), ಏನು ಮಾಡಬೇಕೆಂದು ಮೋಶೆಯು ಉಪದೇಶ ನೀಡುತ್ತಾನೆ,

> ಅವನು ಹೇಳಿದಂತೆಯೇ ನಡೆದರೂ ನೀವು ಅವನ ಮಾತಿಗೆ ಕಿವಿಗೊಡಬಾರದು. ನಿಮ್ಮ ದೇವರಾದ ಯೆಹೋವನು - ಇವರು ಸಂಪೂರ್ಣ ಹೃದಯದಿಂದಲೂ ಮನಸ್ಸಿನಿಂದಲೂ ತನ್ನನ್ನೇ ಪ್ರೀತಿಸುವವರು ಹೌದೋ ಅಲ್ಲವೋ ಎಂಬದನ್ನು ತಿಳಿದುಕೊಳ್ಳುವದಕ್ಕೆ ನಿಮ್ಮನ್ನು ಪರೀಕ್ಷಿಸುತ್ತಾನೆ. ಆತನು ಹೇಳುವ ಮಾರ್ಗದಲ್ಲೇ ನೀವು ನಡೆದು ಆತನಲ್ಲಿಯೇ ಭಯಭಕ್ತಿಯುಳ್ಳವರಾಗಿ ಆತನ ಆಜ್ಞೆಗಳನ್ನೇ ಅನುಸರಿಸಿ ಆತನಿಗೇ ವಿಧೇಯರಾಗಿ ಆತನನ್ನೇ ಸೇವಿಸುತ್ತಾ ಹೊಂದಿಕೊಂಡಿರಬೇಕು. ಆ ಪ್ರವಾದಿಗೆ ... ಮರಣ ಶಿಕ್ಷೆಯಾಗಬೇಕು ... ನಿಮ್ಮ ದೇವರಾದ ಯೆಹೋವನಿಗೆ ವಿರೋಧವಾಗಿ ಅವನು ದ್ರೋಹದ ಮಾತುಗಳನ್ನಾಡಿ ನಿಮ್ಮ ದೇವರಾದ ಯೆಹೋವನು ಹೇಳಿದ ಮಾರ್ಗದಿಂದ ನಿಮ್ಮನ್ನು ತಪ್ಪಿಸಬೇಕೆಂದಿದ್ದನಲ್ಲಾ. ಅವನನ್ನು ಕೊಲ್ಲಿಸಿ ಆ ದುಷ್ಟತ್ವವನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು (ಧರ್ಮೋಪದೇಶಕಾಂಡ 13:3-5).

"ದೇವರು ನಿಮ್ಮನ್ನು ಪರೀಕ್ಷಿಸುತ್ತಾನೆ" ಎಂಬ ಮಾತುಗಳು ನಿಜಕ್ಕೂ ನಡುಕ ಹುಟ್ಟಿಸುವಂಥವುಗಳು. ನಮಗೆ ಇಲ್ಲಿ 2 ಥೆಸಲೋನಿಕ 2:10-12 ಜ್ಞಾಪಕಕ್ಕೆ ಬರುತ್ತದೆ, ಅಲ್ಲಿ ನಮಗೆ ದೇವರು "ಸತ್ಯದ ಮೇಲೆ ಪ್ರೀತಿಯನ್ನಿಡದ"ವರಿಗೆ "ಅಸತ್ಯನಡಿಸುವ ಭ್ರಮೆಯನ್ನು ಅವರಲ್ಲಿ ಕಳುಹಿಸಿ ಆ ಸುಳ್ಳನ್ನು ನಂಬುವದಕ್ಕೆ ಅವರನ್ನು ಬಿಡುತ್ತಾನೆ" ಎಂದು ಹೇಳುತ್ತದೆ. ಒಂದು "ಅಸತ್ಯನಡಿಸುವ ಭ್ರಮೆ" ಎಂದರೆ "ಸಕಲವಿಧವಾದ ಮಹತ್ಕಾರ್ಯ ಸೂಚಕಕಾರ್ಯ ಅದ್ಭುತಕಾರ್ಯ ಇವುಗಳಿಂದ" ಬರುವಂಥ ಸುಳ್ಳು ಉಪದೇಶಕರಾಗಿರುವರು (2 ಥೆಸಲೋನಿಕ 2:9). ಎಲ್ಲಾ ಧಾರ್ಮಿಕ ಬೋಧಕರು, ಅದ್ಭುತಗಳನ್ನು ನಡಿಸುವ ಸಾಮರ್ಥ್ಯಗಳಿವೆ ಎಂದು ಹೇಳಿಕೊಳ್ಳುವವರನ್ನು ಸಹ ಪರೀಕ್ಷಿಸಬೇಕು - ಸಂಪೂರ್ಣವಾಗಿ ಪರೀಕ್ಷೆ ಮಾಡಬೇಕು - ಎಂದು ಎಷ್ಟು ಬಲವಾಗಿ ಒತ್ತಿ ಹೇಳಿದರೂ ಸಾಕಾಗುವದಿಲ್ಲ. ಅವರ ಉಪದೇಶಗಳು ಜನರನ್ನು ದೇವರ ಸತ್ಯದಿಂದ ದೂರಕ್ಕೆ ನಡಿಸುವದಾದರೆ, ಅವರು ಎಷ್ಟೇ ಪ್ರಭಾವಿತರು ಅಥವಾ ಮನಸೆಳೆಯುವವರಾಗಿದ್ದರೂ ಸರಿಯೇ, ಅವರನ್ನು - ದೃಢವಾಗಿಯೂ ಅಂತಿಮವಾಗಿಯೂ - ತಿರಸ್ಕರಿಸತಕ್ಕದ್ದು.

ಪ್ರಕಟನೆ 13ನೇ ಅಧ್ಯಾಯದಲ್ಲಿನ ಸುಳ್ಳು ಪ್ರವಾದಿ ನಡಿಸಿದ "ಸೂಚಕಕಾರ್ಯಗಳ" ಹೊರತಾಗಿಯೂ, ನಾವು ಇಲ್ಲಿ "ನಕಲಿ-ಅದ್ಭುತಗಳು" ಮತ್ತು "ಸುಳ್ಳು ಅದ್ಭುತಗಳು" ಎಂಬ ಪದಗಳನ್ನು ಬಳಸಿದ್ದೇವೆ. ಈ ಕೆಳಗಿನ ಪುರಾವೆಯು ತನ್ನಲ್ಲಿ ಇಲ್ಲದ ಶಕ್ತಿಯನ್ನು ಇದೇ ಎಂಬುದಾಗಿ ಸುಳ್ಳು ಪ್ರವಾದಿಯು ಹೇಳಿಕೊಂಡನೆಂಬ ಮುಕ್ತಾಯಕ್ಕೆ ಬರುವಂತೆ ನಮ್ಮನ್ನು ನಡಿಸುತ್ತದೆ:

1. ದೇವರು ತನ್ನ ಸ್ವಂತ ಜನರಿಗೆ ಅದ್ಭುತ ನಡಿಸುವ ಶಕ್ತಿಯನ್ನು ಹೊಂದಿಲ್ಲದೆ ಇರುವಾಗ ಪೈಶಾಚಿಕ ಶಕ್ತಿಗಳಿಗೆ ಇಂಥ ಅದ್ಭುತ ನಡಿಸುವ ಶಕ್ತಿಗಳನ್ನು ಕೊಡುತ್ತಾನೆಂಬುದು ಯೋಚಿಸಲಿಕ್ಕೂ ಆಗದ ವಿಚಾರವಾಗಿದೆ - ಮತ್ತು ಕ್ರೈಸ್ತರ ಅದ್ಭುತ ನಡಿಸುವ ಸಾಮರ್ಥ್ಯಗಳು ಹೊಸ ಒಡಂಬಡಿಕೆಯು ಪೂರ್ತಿಗೊಂಡ ಹೊತ್ತಿನಲ್ಲಿ ಅಂತ್ಯಗೊಂಡಿದ್ದವು - ಅಂದರೆ, ಯೋಹಾನನು ಪ್ರಕಟನೆ ಪುಸ್ತಕವನ್ನು ಬರೆದು ಮುಗಿಸಿದ ಹೊತ್ತಿಗಾಗಲೇ ಅದ್ಭುತ ನಡಿಸುವ ಸಾಮರ್ಥ್ಯಗಳು ನಿಂತು ಹೋಗಿದ್ದವು. ಮೊದಲನೆ ಕೊರಿಂಥ 13ನೇ ಅಧ್ಯಾಯವು "ಸಂಪೂರ್ಣವಾದದ್ದು" ಬಂದಾಗ ಅದ್ಭುತಗಳನ್ನು ನಡಿಸುವ ಸಾಮರ್ಥ್ಯಗಳು ನಿಂತುಹೋಗಲಿದ್ದವು ಎಂಬುದಾಗಿ ಕಲಿಸುತ್ತದೆ (1 ಕೊರಿಂಥ 13:10). ಮೂಲ ಭಾಷೆಯಲ್ಲಿ, "ಸಂಪೂರ್ಣವಾದದ್ದು" ಎಂಬುದು ನಪುಂಸಕವಾಗಿರುತ್ತದೆ, ಮತ್ತು ಸನ್ನಿವೇಶದಲ್ಲಿ, ದೇವರಿಂದ ಬರುವ "ಸಂಪೂರ್ಣ" ಅಥವಾ "ಪರಿಪೂರ್ಣವಾದ" ಪ್ರಕಟನೆಯನ್ನು ಸೂಚಿಸುವಂತೆ ತೋರುತ್ತದೆ (ನೋಡಿರಿ ಯಾಕೋಬ 1:25). ಪ್ರಕಟನೆ ಪುಸ್ತಕವು ಬರೆಯಲ್ಪಟ್ಟ ಅಂತಿಮ ಪುಸ್ತಕವಾಗಿತ್ತಾದ್ದರಿಂದ, ಇದು ಹೊಸ ಒಡಂಬಡಿಕೆಯನ್ನು ಸಂಪೂರ್ಣಗೊಳಿಸಿತ್ತು. ಖಂಡಿತವಾಗಿಯೂ, ಹೊಸ ಒಡಂಬಡಿಕೆಯನ್ನು ಪೂರ್ತಿಗೊಳಿಸುವ ವಿವಿಧ ಪುಸ್ತಕಗಳು ವಿತರಿಸಲ್ಪಟ್ಟು ಬಳಿಕ ಸಂಗ್ರಹಗೊಳ್ಳುವದಕ್ಕೆ ಸ್ವಲ್ಪ ಸಮಯವಂತೂ ಹಿಡಿಯಿತು. ಆದಿ ಸಭೆಯಲ್ಲಿ ಅದ್ಭುತ ಚಟುವಟಿಕೆಯ ಕುರಿತು ತಿಳಿದು ಬಂದಿರುವದರ ಪ್ರಕಾರ ಹೊಸ ಒಡಂಬಡಿಕೆಯು ಪೂರ್ತಿಗೊಂಡಾಗ ಅದ್ಭುತಗಳು ನಿಂತು ಹೋದವು ಎಂಬದೆ.[25]

2. ಸುಳ್ಳು ಪ್ರವಾದಿಗಳು ಖೋಟಾ ಅದ್ಭುತಗಳನ್ನು ಬಳಸಿ ಜನರನ್ನು ಮೋಸಗೊಳಿಸುವರೆಂದು ಮುಂತಿಳಿಸಲಾಗಿತ್ತು. ಪೌಲನು ಬರಲಿರುವ "ಅಧರ್ಮಸ್ವರೂಪನ" ಬರೋಣವು "ಸೈತಾನನ ಮಾಟಕ್ಕನುಗುಣವಾಗಿರುವದು. ಅದು *ಮೋಸಗೊಳಿಸುವ ಸಕಲವಿಧವಾದ ಮಹತ್ಕಾರ್ಯ* ಸೂಚಕಕಾರ್ಯ ಅದ್ಭುತಕಾರ್ಯ ಇವುಗಳಿಂದಲೂ"

ಸಂಭವಿಸುವದು ಎಂದು ಹೇಳಿದನು (2 ಥೆಸಲೋನಿಕ 2:8, 9; ಒತ್ತಿ ಹೇಳಿದ್ದು ನನ್ನದು). NIVಯಲ್ಲಿ "ನಕಲಿ ಅದ್ಭುತಗಳು, ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳು" ಎಂದಿರುತ್ತದೆ.

3. ಇಲ್ಲಿ ಪ್ರಸ್ತಾಪಿಸಲಾಗಿರುವ "ಸೂಚಕಕಾರ್ಯಗಳು" ಆ ದಿನದಲ್ಲಿನ, ಧಾರ್ಮಿಕ ಮತ್ತು ಧಾರ್ಮಿಕವಲ್ಲದ ಎರಡೂ ಗುಂಪಿಗೆ ಸೇರಿದ ಬೂಟಾಟಿಕೆ ಪಂಡಿತರ ಮಾಮೂಲಿ ಕೃತ್ಯಗಳಾಗಿದ್ದವು. ಅವುಗಳಿಗೆ ಜನಸಮೂಹವನ್ನು ಮರುಳುಗೊಳಿಸುವದನ್ನು ಬಿಟ್ಟರೆ ಬೇರೆ ಇನ್ನಾವ ಕಾರ್ಯರೂಪದ ಬೆಲೆಯು ಇರಲಿಲ್ಲ.

4. ಪ್ರಸ್ತಾಪಿಸಲ್ಪಟ್ಟಿರುವ ಪ್ರತಿಯೊಂದು "ಸೂಚಕಕಾರ್ಯ"ವನ್ನು ಸ್ವಾಭಾವಿಕ ದಾರಿಗಳನ್ನು ಬಳಸಿ ಸಾಧಿಸಬಹುದಾಗಿದೆ.[26] ಉದಾಹರಣೆಗೆ, ಆಕಾಶದಿಂದ ಬೆಂಕಿ ಇಳಿದು ಬರುವದನ್ನು ಆಲೋಚಿಸಿಕೊಳ್ಳಿರಿ (ವ. 13). ಬೆಂಕಿಯನ್ನು ಉತ್ಪತ್ತಿ ಮಾಡುವದು ಯಾವಾಗಲೂ ಜನರ ಗುಂಪನ್ನು ಮೆಚ್ಚಿಸುವ ಕೃತ್ಯವಾಗಿರುತ್ತದೆ. ಬಾಳನ ಪ್ರವಾದಿಗಳಿಗೆ ಪರೀಕ್ಷೆಯ ಪರಿಸ್ಥಿತಿಗಳಡಿಯಲ್ಲಿ ಆಕಾಶದಿಂದ ಬೆಂಕಿಯನ್ನು ಇಳಿದು ಬರುವಂತೆ ಮಾಡುವದಕ್ಕೆ ಸಾಧ್ಯವಾಗಲಿಲ್ಲ (1 ಅರಸು 18), ಆದರೆ ಅವರು ತಮ್ಮ ಯಾವದಾದರೂ ದೇವಸ್ಥಾನಗಳಲ್ಲಿ ಒಂದು ಭ್ರಮೆಯನ್ನು ವ್ಯವಸ್ಥೆಗೊಳಿಸುವದಕ್ಕೆ ಅವರಿಗೆ ಸಮಯಾವಕಾಶವು ಕೊಡಲ್ಪಟ್ಟಿದ್ದರೆ ಅವರು ಬೆಂಕಿ ಇಳಿದು ಬರುವ ರೀತಿಯಲ್ಲಿ *ತೋರುವ ಹಾಗೆ* ಅನಾಯಾಸವಾಗಿ ಮಾಡಿರುತ್ತಿದ್ದರು. ಒಂದು "ಅದೃಶ್ಯವಾದ" ತಂತಿ, ಅತ್ಯಂಥ ದಹನಶೀಲ ದ್ರಾವಣ, ಮಂದ ಬೆಳಕಿನ ವ್ಯವಸ್ಥೆ, ಬೆಂಕಿಯನ್ನು ಹೊತ್ತಿರುವದಕ್ಕೆ ವೇದಿಕೆಯಿಂದ ಮರೆಯಾಗಿ ಯಾರಾದರೂ ಇರುವರು, ಮತ್ತು - ಅಷ್ಟೇ ನೋಡಿ! - ಅಲ್ಲೊಂದು "ಅದ್ಭುತ" ಸಿದ್ಧಗೊಳ್ಳುತ್ತಿದೆ ಎಂದಾಗುತ್ತದೆ.

ಜೀವವನ್ನು ಪಡೆದು ಮಾತಾಡಿದ ಪ್ರತಿಮೆಯ ವಿಷಯವೇನು (ವ. 15)? ಗಾರುಡವಾಣಿ - ತುಟಿಗಳನ್ನು ಕದಲಿಸದೆಯೇ ಮಾತಾಡುವ ಸಾಮರ್ಥ್ಯ ಮತ್ತು ಧ್ವನಿಯು ಬೇರೆ ಎಲ್ಲಿಂದಲೋ ಬರುತ್ತಿದೆ ಏನೋ ಎಂಬಂತೆ ಕಾಣಿಸುವ ಹಾಗೆ ಮಾಡುವದು - ಎಂಬುದು ಅತ್ಯಂಥ ದೀರ್ಘಕಾಲದಿಂದಲೂ ಬಳಕೆಯಲ್ಲಿರುವ ಒಂದು ಕುಶಲತೆಯಾಗಿದೆ. ಗಾರುಟವಾಣಿಯ ಕುರಿತ ಅನೇಕ ಪುಸ್ತಕಗಳು ಅದು ಪ್ರಾಚೀನ ಯಾಜಕರು ಪರಿಣಿತಿ ಪಡದೆಕೊಂಡ ಕಲೆಯಾಗಿತ್ತದೆಂಬುದನ್ನು ಸೂಚಿಸುತ್ತವೆ. ಖಂಡಿತವಾಗಿಯೂ, ಮತಾಡುವ-ವಿಗ್ರಹದ ಮೋಶಕ್ಕೆ ಯಾವದೇ ಕುಶಲತೆಯ ಅಗತ್ಯವಿರಲಿಲ್ಲ. ಪ್ರಾಚೀನ ಪೆರ್ಗಮದಲ್ಲಿ ಯಾಜಕನು ತನ್ನನ್ನು ಬಚ್ಚಿಟ್ಟುಕೊಂಡಿರುತ್ತಿದ್ದ ಅಡಿಯಲ್ಲಿನ ಸ್ಥಳವಿರುವಂಥ ಒಂದು ಅನ್ಯಧರ್ಮೀಯ ಯಜ್ಞವೇದಿಯ ಅವಶೇಷಗಳು ಇರುತ್ತವೆ. ಒಂದು ಮಾತಾಡುವ ಕೊಳವೆಯ ಮೂಲಕವಾಗಿ ನುಡಿಯುತ್ತಾ ಯಜ್ಞವೇದಿಯೇ ಮಾತಾಡುತ್ತಿದೆಯೋ ಎಂಬಂತೆ ಕಾಣಿಸುವ ಹಾಗೆ ಮಾಡಲಾಗುತ್ತಿತ್ತು.

ಒಂದು ವಿಗ್ರಹವು ಮಾತಾಡುವಂತೆ ಕಾಣಿಸುವ ಹಾಗೆ ಮಾಡುವದಕ್ಕೆ ಅನೇಕ ದಾರಿಗಳಿರುತ್ತವೆ, ಮತ್ತು ಅದು ಜೀವಗೊಂಡಿರುವಂತೆ ಮಾಡುವದಕ್ಕಂತೂ ಇನ್ನೂ ಅನೇಕಾನೇಕ ದಾರಿಗಳಿರುತ್ತವೆ. ಕೆಲವು ಪ್ರಾಚೀನ ಅನ್ಯಧರ್ಮಿಯ ದೇವಸ್ಥಾನಗಳ ಅವಶೇಷಗಳಲ್ಲಿ ಸಿಕ್ಕಿರುವ ತಂತಿಗಳು ಹಾಗೂ ರಾಟೆಗಳನ್ನು ನೋಡಿದರೆ ಯಾಜಕರು ಕೆಲವು ಸಾರಿ ಸೂತ್ರದ ಬೊಂಬೆ ಪರಿಣಿತನ ವಿಧಾನಗಳನ್ನು (ಜೋಟಣೆಗಳುಳ್ಳ ಚಿತ್ರಗಳ ತಂತಿಗಳಿಂದ ಆಟವಾಡಿಸುವ ಬೊಂಬೆಯಾಟಗಾರ) ಬಳಕೆ ಮಾಡಿದರೆಂಬುದನ್ನು ಸೂಚಿಸುತ್ತದೆ.

ಈ ವಿಧವಾದ ತಂತ್ರಗಳಿಂದಾಗಿ ಜನರು ಪ್ರಭಾವಿತರಾಗುತ್ತಿದ್ದರೆಂಬುದನ್ನು

ಯಾವನಾದರೂ ಸಂಶಯಿಸುವದಾದರೆ, ಮಂತ್ರವಾದಿಯಾದ ಸೀಮೋನನ ಗುರತೋಲೆಯನ್ನು ಒಮ್ಮೆ ಪರೀಕ್ಷಿಸಿರಿ: "ತಾನು ಏನೋ ಒಬ್ಬ ಮಹಾತ್ಮನೆಂದು ಹೇಳಿಕೊಂಡು ಮಂತ್ರತಂತ್ರಗಳನ್ನು ನಡಿಸಿ ಸಮಾರ್ಯದ ಜನರಲ್ಲಿ ಬೆರಗನ್ನು ಹುಟ್ಟಿಸುತ್ತಿದ್ದನು. ಚಿಕ್ಕವರು ಮೊದಲುಗೊಂಡು ದೊಡ್ಡವರ ಪರ್ಯಂತರ ಎಲ್ಲರೂ - ಇವನು ಮಹಾ ಶಕ್ತಿ ಎನಿಸಿಕೊಂಡಿರುವ ದೇವರ ಶಕ್ತಿಯೇ ಎಂದು ಹೇಳುತ್ತಾ ಅವನಿಗೆ ಲಕ್ಷ್ಯಕೊಡುತ್ತಿದ್ದರು" (ಅಪೊಸ್ತಲರ ಕೃತ್ಯಗಳು 8:9, 10).

ಮೊದಲನೆಯ ಮೃಗಕ್ಕೆ ನಮಸ್ಕರಿಸಬೇಕೆಂದು ಉತ್ತೇಜಿಸುವದರಲ್ಲಿ **ಅವರಿಗೆ - ಕತ್ತಿಯಿಂದ ಗಾಯಹೊಂದಿ ಸಾಯದೆ ಬದುಕಿದ ಮೃಗದ ಘನಕ್ಕಾಗಿ ವಿಗ್ರಹವನ್ನು ಮಾಡಿಸಿಕೊಳ್ಳಬೇಕೆಂದು ಬೋಧಿಸುವದು** ಸೇರಿತ್ತು. "ವಿಗ್ರಹ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು εἰκών (*eikōn*) ಎಂಬ ಪದದ ರೂಪವಾಗಿದ್ದು, ಆ ಪದದಿಂದಲೇ "ಪ್ರತಿಮೆ" ಎಂಬ ಪದವು ಬರುತ್ತದೆ. ಎರಡನೆಯ ಮೃಗವು ಮೊದಲನೆಯ ಮೃಗವನ್ನು ನಮಸ್ಕರಿಸುವಂತೆ ಮನುಷ್ಯರನ್ನು ನಡಿಸಿತು (ವ. 12) ಮತ್ತು "ಮೃಗದ ವಿಗ್ರಹಕ್ಕೆ ನಮಸ್ಕರಿಸುವಂತೆ" ಸಹ ಮಾಡುವದು (ವ. 15).

**ವಚನ 15.** ಸುಳ್ಳು ಪ್ರವಾದಿಯ ಎರಡನೆಯ ನಿರ್ದಿಷ್ಟವಾದ ಸೂಚನೆ ಎಂದರೆ **ಇದಲ್ಲದೆ ಆ ಮೃಗದ ವಿಗ್ರಹಕ್ಕೆ ಜೀವಕೊಡುವ ಸಾಮರ್ಥ್ಯವು ಇದಕ್ಕೆ ದೊರೆಯಿತು. ಆ ಮೃಗದ ವಿಗ್ರಹವು ಮಾತಾಡುವದು**. ನಿರ್ಜೀವವಾದದ್ದರಲ್ಲಿ ಜೀವಶ್ವಾಸವನ್ನು ಊದುವದು ದೇವರ ವಿಶೇಷತೆಗಳಲ್ಲೊಂದಾಗಿದೆ (ಆದಿಕಾಂಡ 2:7); ಹೀಗಿರುವದರಿಂದ ಸುಳ್ಳು ಪ್ರವಾದಿಯು "ದೇವರಂತೆ ನಟಿಸುವದು," ವಿಗ್ರಹಕ್ಕೆ ಜೀವ ಬಂದಿದೆ ಮತ್ತು ಮಾತಾಡಬಲ್ಲದು ಎಂದು ಜನರು ನಂಬುವಂತೆ ಮಾಡಿತ್ತು (ವ. 14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಸುಳ್ಳು ಪ್ರವಾದಿಗೆ ವಿಗ್ರಹಕ್ಕೆ **ನಮಸ್ಕರಿಸದವರೆಲ್ಲರಿಗೂ ಮರಣದಂಡನೆ ಆಗುವಂತೆ ಮಾಡುವ** ಅಧಿಕಾರವಿತ್ತು. 15ನೇ ವಚನವು ನೆಬೂಕದ್ನೆಚ್ಚರನ ವಿಗ್ರಹಕ್ಕೆ ಅಡ್ಡಬೀಳಲು ನಿರಾಕಸಿದರ ಕಾರಣ ಉರಿಯುವ ಬೆಂಕಿಗೆ ತಳ್ಳಲ್ಪಟ್ಟ ಮೂವರು ಇಬ್ರಿಯ ಯುವಕರನ್ನು ನಮ್ಮ ಜ್ಞಾಪಕಕ್ಕೆ ತರುತ್ತದೆ (ದಾನಿಯೇಲ 3). ಚಕ್ರವರ್ತಿಯ ವಿಗ್ರಹಕ್ಕೆ ನಮಸ್ಕರಿಸಲು ನಿರಾಕರಿಸಿದ ಯಾವದೆ ಕ್ರೈಸ್ತನಿಗೆ ಮರಣದಂಡನೆಯನ್ನು ನೀಡಿರ*ಬಹುದಾಗಿದೆ.* ಹೇಗೂ, ಇತಿಹಾಸವು ತಿಳಿಯಪಡಿಸುವದೇನೆಂದರೆ - ಯಾವಾಗಲೂ ಕಟ್ಟಳೆಗಳ ವಿಷಯದಲ್ಲಿ ನಡೆಯುವ ಪ್ರಕಾರವೇ - ಈ ಕಟ್ಟಳೆಯು ಕೆಲವು ಸ್ಥಳಗಳಲ್ಲಿ ಕಟ್ಟುನಿಟ್ಟಿನಿಂದ ಜಾರಿಗೆ ತಂದ ಪ್ರಕಾರ ಬೇರೆ ಕೆಲವು ಸ್ಥಳಗಳಲ್ಲಿ ತಂದಿರಲಿಲ್ಲ. ಹೀಗೆ ನಂಬಿಗಸ್ತರ ಕ್ರೈಸ್ತರೆಲ್ಲರೂ ಸಾಯಲಿಲ್ಲ, ಆದಾಗ್ಯೂ ಅವರು ಹೆಚ್ಚುಕಡಿಮೆ ಯಾವ ವಿನಾಯತಿಯಿಲ್ಲದೆ ಬಾಧೆಯನ್ನಂತೂ ಅನುಭವಿಸಿದರು.

**ವಚನ 16.** ಈ ವಚನವು ವಿವಾದಿತವಾದ ಮೃಗದ ಗುರುತು ಕುರಿತು ಪರಿಚಯಿಸುತ್ತದೆ. **ಈ ಎರಡನೆಯ ಮೃಗವು - ದೊಡ್ಡವರು ಚಿಕ್ಕವರು ಐಶ್ವರ್ಯವಂತರು ಬಡವರು ಸ್ವತಂತ್ರರು ದಾಸರು ಎಲ್ಲರೂ ತಮ್ಮ ತಮ್ಮ ಬಲಗೈಯ ಮೇಲಾಗಲಿ ಹಣೆಯ ಮೇಲಾಗಲಿ ಗುರುತು ಹೊಂದಬೇಕೆಂತಲೂ** ಆಜ್ಞೆ ಮಾಡುತ್ತದೆ ಎಂಬುದರೊಂದಿಗೆ ವಿಭಾಗವು ಆರಂಭಗೊಳ್ಳುತ್ತದೆ. ಆ ದಿನಗಳಲ್ಲಿ, ಗುಲಾಮರು ಮತ್ತು ಕೆಲವು ಸಾರಿ ಬೇರೆಯವರು ತಮ್ಮ ಕೈಗಳಲ್ಲಿ ಅಥವಾ ಹಣೆಗಳ ಮೇಲೆ ನಿಜವಾದ ಮುದ್ರೆಗಳನ್ನು ಹಾಕಿಸಿಕೊಳ್ಳುತ್ತಿದ್ದರು. ಅವಿಧೇಯ ಗುಲಾಮರಿಗೆ ಮತ್ತು ಸೋಲಿಸಲ್ಪಟ್ಟ ಸೈನಿಕರಿಗೆ ಬರೆಗಳು ಹಾಕಲ್ಪಡುತ್ತಿದ್ದವು ಎಂಬುದನ್ನು ಪ್ರಾಚೀನ ದಾಖಲೆಗಳ ನಿರ್ದಿಷ್ಟವಾಗಿ ಪ್ರಸ್ತಾಪಿಸುತ್ತವೆ.

ಪ್ರಕಟನೆ ಪುಸ್ತಕವು ಬರೆಯಲ್ಪಡುವ ದಿನಗಳಲ್ಲಿ ನೀವು ಒಂದು ರೋಮನ್ ನಗರದ ಪ್ರಮುಖ ಬೀದಿಯಲ್ಲಿ ನಡೆದಾಡಿದ್ದರೆ, ನಿಮ್ಮ ಮುಂದೆ ತನ್ನ ಹಣೆಯ ಮೇಲೆ ಅಥವಾ ಆತನ ಅಂಗೈಯ ಮೇಲೆ ಬರೆಯಿಂದ ಮುದ್ರೆ ಹಾಕಿಸಿಕೊಂಡ ವ್ಯಕ್ತಿಯೊಬ್ಬನು ಬರಬಹುದಿತ್ತು. ಆತನ ಚರ್ಮದ ಮೇಲೆ ಬರೆ ಹಾಕಲಾಗಿರುವ ಅಕ್ಷರಗಳು ಅಥವಾ ಅಂಕಿಗಳು ಆತನನ್ನು ಯಾರ ಹೆಸರನ್ನು ಬರೆ ಹಾಕಿಸಿಕೊಂಡಿದ್ದಾನೋ ಆ ಮನುಷ್ಯನ ಗುಲಾಮನು ಅಥವಾ ದೇವರ ಭಕ್ತನು ಎಂದು ಗುರುತಿಸುವದಾಗಿತ್ತು.[27]

ಪೌಲನು "ನನ್ನ ದೇಹದಲ್ಲಿ ಯೇಸುವಿನ ಮುದ್ರೆಗಳು ಹಾಕಿರುತ್ತವಲ್ಲಾ" ಎಂದು ಮಾತಾಡಿದ ವೇಳೆ ಈ ಆಚರಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದಾಗಿದೆ (ಗಲಾತ್ಯ 6:17) - ತಾನು ಯಜಮಾನನಿಗೆ ಸೇವೆಯನ್ನು ಮಾಡುವ ವೇಳೆ ಪಡೆದುಕೊಂಡು ಗಾಯದ ಗುರುತುಗಳನ್ನು ಸೂಚಿಸಿ ಹೇಳಿದನು (2 ಕೊರಿಂಥ 11:23-25). ಇನ್ನೊಂದು ಕಡೆಯಲ್ಲಿ, "ಗುರುತಿನ" ಹಿನ್ನಲೆಯು ಗುಲಾಮರಿಗೆ ಬರೆ ಹಾಕುವದಾಗಿರಲಿಲ್ಲ, ಆದರೆ ನಾಣ್ಯಗಳ ಮೇಲಿನ ಪ್ರತಿಮೆಗಳು ಅಥವಾ ದಸ್ತಾವೇಜುಗಳ ಮೇಲಿನ ಮುದ್ರೆಗಳು ಆಗಿದ್ದವು.

ಇತ್ತೀಚಿನ ವರ್ಷಗಳಲ್ಲಿ, 13:16, 17ರಲ್ಲಿನ "ಗುರುತು" ಕುರಿತಾಗಿ ವಿವಿಧ ಅರ್ಥನಿರೂಪಣೆಗಳು ಕೊಡಲ್ಪಟ್ಟಿರುತ್ತವೆ. ಕೆಲವರು ಅದನ್ನು ಒಂದು ಅಕ್ಷರಶಃ ಗುರುತು ಹಾಕುವಿಕೆಯೆಂದು, ಮೃಗದ ಹಿಂಬಾಲಕರ ಹಣೆಗಳ ಮೇಲೆ "666" ಅಂಕಿಯನ್ನು ಶಾಶ್ವತವಾಗಿ ಬಣ್ಣದಿಂದ ಬರೆಯಲಾಗುವದು ಅಥವಾ ಹಚ್ಚೆ ಗುರುತು ಹಾಕಲ್ಪಡುತ್ತದೆಂದು ಯೋಚಿಸುತ್ತಾರೆ. "ಗುರುತು" ಕ್ರಯ ವಿಕ್ರಯಗಳಿಗೆ ಸಂಬಂಧಿಸಿದ್ದಾಗಿರುವದರಿಂದ (ವ. 17), ಕೆಲವರು "ಗುರುತ"ನ್ನು ವಾಣಿಜ್ಯ ಜೀವನದಲ್ಲಿ ಬಳಸಲ್ಪಡುವ ಒಂದು ಸಂಕೇತ ಎಂದು ಗುರುತಿಸುತ್ತಾರೆ: ಬ್ಯಾಂಕ್ ಸಂಖ್ಯೆಗಳು, ಸೂಪರ್ ಮಾರ್ಕೆಟಗಳಲ್ಲಿನ ಬಾರ್ ಕೋಡಗಳು, ಸಮಾಜಿಕ ಭದ್ರತೆಯ ಸಂಖ್ಯೆಗಳು, ಮತ್ತು ಅಂಥವುಗಳು. ಎರಡನೆಯ ವಿಶ್ವಯುದ್ಧದ ವೇಳೆಯಲ್ಲಿ, ಅಮೆರಿಕದಲ್ಲಿರುವ ಕೆಲವರು ಪಡಿತರ ಚೀಟಿಗಳನ್ನೇ "ಮೃಗದ ಗುರುತು" ಎಂದು ಮನವರಿಕೆಗೊಂಡಿದ್ದರು.

ಆಧುನಿಕ ಕಾಲದ ಈ ಯಾವದೇ ಅರ್ಥನಿರೂಪಣೆಗಳು ಆದಿ ಕ್ರೈಸ್ತರಿಗೆ ಯಾವ ಅರ್ಥವನ್ನೂ ಹೊಂದಿರುತ್ತಿರಲಿಲ್ಲ. ಸನ್ನಿವೇಶದಲ್ಲಿ, ಮೃಗದ "ಗುರುತು" 7ನೇ ಅಧ್ಯಾಯದಲ್ಲಿ ಅಧ್ಯಯನ ಮಾಡಲಾದ ದೇವರ "ಮುದ್ರೆ"ಯ ಪಡಿರೂಪ - ಅಥವಾ ಖೋಟಾ ಪ್ರತಿ - ಆಗಿರುತ್ತದೆ. ಈ ಕೆಳಗಿನ ಪುರಾವೆಗಳನ್ನು ಆಪೋಚಿಸಿರಿ: (1) ದೇವರ ಮುದ್ರೆಯು 144,000 ಜನರಿಗೆ ಒತ್ತಲಾಯಿತು, "*ಎಲ್ಲಾ* ನಂಬಿಗಸ್ತರನ್ನು" ಸೂಚಿಸುವ ಒಂದು ಸಾಂಕೇತಿಕ ಸಂಖ್ಯೆಯಾಗಿದೆ; ಒಬ್ಬನೇ ಒಬ್ಬನನ್ನು ಸಹ ಮರೆತು ಹೋಗಲಿಲ್ಲ. ಅದೇ ರೀತಿಯಲ್ಲಿಯೇ, ಮೃಗದ ಗುರುತು **ದೊಡ್ಡವರು ಚಿಕ್ಕವರು ಐಶ್ವರ್ಯವಂತರು ಬಡವರು ಸ್ವತಂತ್ರರು ದಾಸರು ಎಲ್ಲರ** ಮೇಲೂ ಹಾಕಲಾಯಿತು; ಭೂನಿವಾಸಿಗಳಲ್ಲಿ ಒಬ್ಬನನ್ನೂ ಬಿಟ್ಟು ಬಿಡಲಿಲ್ಲ. (2) 144,000 ಜನರಿಗೆ ಅವರ "ಹಣೆಗಳ ಮೇಲೆ" ಮುದ್ರೆ ಒತ್ತಲಾಯಿತು (7:3), ಮತ್ತು ಮೃಗದ ಹಿಂಬಾಲಕರಿಗೆ ಅವರ **ಬಲಗೈ ಮೇಲಾಗಲಿ ಹಣೆಯ ಮೇಲಾಗಲಿ** ಗುರುತು ಹಾಕಲಾಯಿತು. (3) ಮುದ್ರೆಯು ರಕ್ಷಿಸಲ್ಪಟ್ಟವರು ದೇವರಿಗೆ ಸ್ವಂತವಾದವರೆಂಬುದನ್ನು ಸೂಚಿಸುವದಾಗಿತ್ತು, ಅವರು ದೇವರಿಂದ ಕಾಪಾಡಲ್ಪಟ್ಟರು, ಮತ್ತು ಅವರು ದೇವರ ದೃಷ್ಟಿಕೋನವನ್ನು - ವಿಶೇಷವಾಗಿ ಬಾಧೆಯ ಕುರಿತಾದ ಆತನ ಮನೋಭಾವವನ್ನು - ಅಳವಡಿಸಿಕೊಳ್ಳುತ್ತಿದ್ದರು (7:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಗುರುತು ಭೂನಿವಾಸಿಗಳನ್ನು ಮೃಗದ ಸ್ವತ್ತು ಎಂಬದಾಗಿ ಮುದ್ರೆ ಹಾಕುವದಾಗಿತ್ತು, ಆತನ ಆಶ್ರಯದಲ್ಲಿರುವವರು, ಮತ್ತು ಆತನ

ಗುಣಸ್ವಭಾವವನ್ನು ರಕ್ತಗತ ಮಾಡಿಕೊಳ್ಳುತ್ತಿರುವವರು. ಹಣೆಯ ಮೇಲೆ ಗುರುತು ಹಾಕಿಸಿಕೊಳ್ಳುವದೆಂದರೆ ಅವರ *ಆಲೋಚನೆಗಳ* ಮೇಲೆ ಪರಿಣಾಮವುಂಟಾಗಿತ್ತೆಂಬುದನ್ನು ಸೂಚಿಸುತ್ತದೆ; ಕೈ ಮೇಲೆ ಗುರುತು ಹಾಕಿಸಿಕೊಳ್ಳುವದೆಂದರೆ ಅವರ *ಕ್ರಿಯೆಗಳ* ಮೇಲೆ ಪರಿಣಾಮ ಬೀರಲ್ಪಟ್ಟಿತೆಂಬುದನ್ನು ಸೂಚಿಸುತ್ತದೆ. ಈ ಮುಂಚೆ ಮುದ್ರೆಯು ಅಕ್ಷರಶಃ ಆಗಿರಲಿಲ್ಲ ಎಂಬುದನ್ನು ಒತ್ತಿ ಹೇಳಲಾಗಿರುತ್ತದೆ; ಈಗ ಗುರುತಾಗಲಿ ಸಹ ಅಕ್ಷರಶಃ ಅಲ್ಲ ಎಂಬುದನ್ನು ನೀವು ಗಮನಿಸುವಿರಿ.

ಬೈಬಲ್ ಕಾಲಗಳಲ್ಲಿ ಮುದ್ರೆಗಳಿಗೆ ಅನೇಕ ಉದ್ದೇಶಗಳಿರುತ್ತಿದ್ದವು, ಆದರೆ 7ನೇ ಅಧ್ಯಾಯದಲ್ಲಿ ಒತ್ತಿ ಹೇಳಲ್ಪಟ್ಟ ಉದ್ದೇಶವು *ಕಾಪಾಡುವಿಕೆ* ಆಗಿತ್ತು. ಅದೇ ರೀತಿಯಲ್ಲಿಯೇ, ಮನುಷ್ಯರು ಮೃಗದ ಗುರುತನ್ನು ಹಾಕಿಸಿಕೊಳ್ಳುವಾಗ, ಮೃಗವು ಅವರಿಗೆ ಒದಗಿಸುವನು ಮತ್ತು ಅವರನ್ನು ಕಾಪಾಡುವನು ಎಂಬುದನ್ನು ಸೂಚಿಸುವದಾಗಿತ್ತು. ಹೇಗೂ, ಸೈತಾನನು ತಾನು ಯಾವದನ್ನು ಮಾಡುವದಕ್ಕೆ ಸಾಧ್ಯವಿಲ್ಲವೋ ಅದನ್ನೇ ಯಾವಾಗಲೂ ವಾಗ್ದಾನ ಮಾಡುವವನಾಗಿದ್ದಾನೆ.

**ವಚನ 17.** ಆದಾಗ್ಯೂ, ಆರಂಭದಲ್ಲಿ ಮೃಗವು ತನ್ನ ವಾಗ್ದಾನಗಳಂತೆ ಮಾಡುವನೆಂಬಂತೆ ಕಾಣಿಸುತ್ತದೆ. ಉದಾಹರಣೆಗೆ, ಗುರುತನ್ನು ಹೊಂದಿದವರಿಗೆ ಕ್ರಯ ವಿಕ್ರಯ ಮಾಡುವದಕ್ಕೆ ಅನುಮತಿ ಕೊಡಲ್ಪಟ್ಟರೆ, ಗುರುತು ಇಲ್ಲದವರಿಗೆ ಅನುಮತಿಯಿರಲಿಲ್ಲ. **ಆ ಗುರುತು ಯಾರಿಗಿಲ್ಲವೋ ಅವರು ಕ್ರಯ ವಿಕ್ರಯಗಳನ್ನು ನಡಿಸಕೂಡದೆಂತಲೂ** ಭೂಮಿಯಿಂದ ಬಂದ ಮೃಗವು **ಆಜ್ಞೆಮಾಡುತ್ತದೆ. ಆ ಗುರುತು ಯಾವದಂದರೆ ಮೊದಲನೆಯ** ಸಮುದ್ರ **ಮೃಗದ ಹೆಸರು ಅಥವಾ ಅದರ ಹೆಸರನ್ನು ಸೂಚಿಸುವ ಅಂಕೆ.** ಮೃಗಕ್ಕೆ ಮತ್ತು ಆತನ ವಿಗ್ರಹಕ್ಕೆ ನಮಸ್ಕರಿಸಲು ನಿರಾಕರಿಸಿದ ಯಾರನ್ನೇ ಆಗಲಿ ದಂಡಿಸಿದ ಒಂದು ರೀತಿಯೆಂದರೆ ಅವರ ಮೇಲೆ ಆರ್ಥಿಕ ಒತ್ತಡವನ್ನುಂಟು ಮಾಡುವದೇ. "ವ್ಯಕ್ತಿಗಳನ್ನು ಕ್ರಯ ವಿಕ್ರಯ ಮಾಡದಂತೆ ನಿಷೇಧಿಸಿ [ದ್ದಾಗಿದ್ದರೆ], ಅವರು ತಿರಸ್ಕರಿಸಲ್ಪಟ್ಟವರು [ಆದರು], ಸಮಾಜದ ಜೀವನದಲ್ಲಿ ಭಾಗಿಗಳಾಗಲು ಅಶಕ್ತರಾದರು."[28] ಮೃಗದ ನಾಯಕತ್ವವನ್ನು ಅನುಸರಿಸುವದಕ್ಕೆ ನಿರಾಕರಿಸಿದವರು ಅನೇಕ ಸಾರಿ ಗುಲಾಮತನಕ್ಕೆ ಒಳಗಾಗುವ ಅಥವಾ ಹಸಿವೆಯಿಂದ ಬಳಲುವ ಸ್ಥಿತಿಗೆ ತರಲ್ಪಡುತ್ತಿದ್ದರು (6:5, 6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

17ನೇ ವಚನದಲ್ಲಿ, **ಗುರುತು ಮೊದಲನೆಯ ಮೃಗದ ಹೆಸರು ಅಥವಾ ಅದರ ಹೆಸರನ್ನು ಸೂಚಿಸುವ ಅಂಕೆ** ಎಂದು ಗುರುತಿಸಲ್ಪಟ್ಟಿದೆ. ಆ ದಿನದಲ್ಲಿ, ಒಬ್ಬನ **ಹೆಸರು** ಆತನ ಸಂಪೂರ್ಣ ವ್ಯಕ್ತಿತ್ವವನ್ನು ಪ್ರತಿನಿಧಿಸುವದಾಗಿತ್ತು. ಮೃಗದ ಹೆಸರಿನ ಗುರುತು ಹಾಕಿಸಿಕೊಳ್ಳುವದೆಂದರೆ ಆ ಮೃಗದ *ರೀತಿಯಲ್ಲಿ* ಮಾರ್ಪಡುವದೇ ಆಗಿತ್ತು. (ಮೃಗದ ಹೆಸರನ್ನು ಸೂಚಿಸುವ **ಅಂಕೆ**ಯ ವಿಷಯವಾಗಿ, ವ. 18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.)

"ಗುರುತು" ಇಲ್ಲದೆ ಕ್ರಯ ವಿಕ್ರಯ ಮಾಡುವದಕ್ಕೆ ಅಶಕ್ತರಾಗುವ ವಿಷಯವಾಗಿ, ಕೆಲವರು ವಹಿವಾಟುಗಳನ್ನು ಮಾಡುವದಕ್ಕೆ ನಾಗರಿಕರಿಗೆ ಕೆಲವೊಂದು ಕಾನೂನಾತ್ಮ ದಸ್ತಾವೇಜುಗಳ ಅಗತ್ಯವಿರಬಹುದೆಂಬುದನ್ನು ಸೂಚಿಸುತ್ತದೆಂದು ಯೋಚಿಸುತ್ತಾರೆ. ಉತ್ಖನನ ಶಾಸ್ತ್ರವು "ಚಕ್ರವರ್ತಿಗೆ ಆರಾಧನೆಯನ್ನು ಸಲ್ಲಿಸಿದ್ದಕ್ಕೆ ಪುರಾವೆಯಾಗಿ ಪಡೆದುಕೊಂಡ ಪ್ರಮಾಣಪತ್ರಗಳ [ವಿಗ್ರಹದ ಆರಾಧಕರು] ಅವಶೇಷಗಳನ್ನು ಬೆಳಕಿಗೆ ತಂದಿರುತ್ತದೆ."[29] Merrill Tenneyನು ಇನ್ನೊಂದು ಸಾಧ್ಯತೆಯಿರಬಹುದೆಂಬ ಅಭಿಪ್ರಾಯ ಪಡುತ್ತಾನೆ:

> Tiberiusನಿಂದ ಮೊದಲ್ಗೊಂಡು, ವಿವಿಧ ಚಕ್ರವರ್ತಿಗಳ ಆಳ್ವಿಕೆಯ ಅಡಿಯಲ್ಲಿ ಎಲ್ಲಾ ವ್ಯಾಪಾರದ ದಸ್ತಾವೇಜುಗಳಿಗೆ ಸರ್ಕಾರದ ಮುದ್ರೆ ಹಾಕಲ್ಪಡಬೇಕಿತ್ತು, ಅದು ಇಲ್ಲದೆ

ವ್ಯವಹಾರವು ಅಸಿಂಧುವಾಗುತ್ತಿತ್ತು. ಸ್ಥಳೀಯ ಅಧಿಕಾರಿಗಳಿಂದ, ಕೆಲವು ಸಾರಿ ಅಧಿಕಾರದಲ್ಲಿರುವ ಕೈಸರನ ವಿಗ್ರಹ ಆರಾಧನೆಯನ್ನು ಉತ್ತೇಜಿಸುವವರಾದ ಯಾಜಕರಿಂದ ನಿರ್ಬಂಧಗಳು ಹೇರಲ್ಪಡುತ್ತಿದ್ದವು.[30]

ಇನ್ನು ಕೆಲವು ಪಂಡಿತರು ಬಹಿಷ್ಕಾರವು ಅಧಿಕವಾಗಿ ಸಾಮಾನ್ಯ ಸ್ವಭಾವದ್ದಾಗಿತ್ತು ಎಂದು ಯೋಚಿಸುತ್ತಾರೆ: ಬಹುಶಃ, ಒಬ್ಬ ಕ್ರೈಸ್ತನು ವಿಗ್ರಹಕ್ಕೆ ನಮಸ್ಕರಿಸದಿರುವಾಗ, ಆ ಸುದ್ದಿಯು ಸಮುದಾಯದಲ್ಲಿ ಹರಡುತ್ತಿತ್ತು, ಮತ್ತು ವ್ಯಾಪಾರಿಗಳು ಅವನೊಂದಿಗೆ ವ್ಯವಹಾರ ಮಾಡುವದಕ್ಕೆ ನಿರಾಕರಿಸುತ್ತಿದ್ದರೆಂದು ತೋರುತ್ತದೆ. ಬಹುಶಃ ಆತ್ಮಸಾಕ್ಷಿಯಂತೆ ನಡೆಯುವ ಕ್ರೈಸ್ತರು ಅನ್ಯಧರ್ಮಿಯ ದೇವರುಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ವ್ಯಾಪಾರದ ಒಕ್ಕೂಟಗಳಿಂದ ತಮ್ಮನ್ನು ದೂರವಿಟ್ಟುಕೊಂಡರೆಂದು ಕಾಣಿಸುತ್ತದೆ. ಯಾವದೋ ವಿಧದಲ್ಲಿ, ಹೇಗೋ, ಆರ್ಥಿಕ ಬಹಿಷ್ಕಾರವನ್ನು ಜಾರಿಗೆ ತರಲಾಗುತ್ತಿತ್ತು. ಇನ್ನು ಕೆಲವು ಲೇಖಕರು ಯೋಚಿಸುವದೇನೆಂದರೆ ಆಗ ಚಲಾವಣೆಯಿದ್ದ ನಾಣ್ಯಗಳಲ್ಲಿ ಚಕ್ರವರ್ತಿಯ ದೈವಿಕ ಬಿರುದುಗಳು ಮುದ್ರಿಸಲ್ಪಟ್ಟಿದ್ದ ಕಾರಣ ಅವುಗಳನ್ನು ಬಳಸುವದಕ್ಕೆ ಮನಸ್ಸಿಲ್ಲದವರಾಗಿದ್ದಿರಬಹುದು. ಇದು ಸಹ ಅವರಿಗೆ ಆರ್ಥಿಕವಾಗಿ ಪರಿಣಾಮವನ್ನುಂಟು ಮಾಡಿರಬಹುದಾಗಿದೆ. 17ನೇ ವಚನವು ಕ್ರೈಸ್ತರಿಗೂ ಅವರ ಕುಟುಂಬದವರಿಗೂ ಒಂದು ಕರಾಳವಾದ ಆರ್ಥಿಕ ಭವಿಷ್ಯಕಾಲವನ್ನು ಚಿತ್ರಿಸುತ್ತದೆ.

**ವಚನ 18.** ಪ್ರತಿಯೊಂದು ಮೃಗವು ಪರಿಚಯಿಸಲ್ಪಟ್ಟ ಬಳಿಕ, ಪವಿತ್ರಾತ್ಮನು ಒಂದು ಕ್ಲುಪ್ತ ಪ್ರೋತ್ಸಾಹದ ಮಾತನ್ನು ನೀಡುತ್ತಾನೆ. ಸಮುದ್ರದಿಂದ ಬಂದ ಮೃಗದ ಪರಿಚಯದ ಬಳಿಕ ನೀಡಲಾದ ಪುನರಾಶ್ವಾಸನೆಯ ನುಡಿಯು 9 ಮತ್ತು 10 ವಚನಗಳಲ್ಲಿ ಸಿಕ್ಕುತ್ತದೆ, ಅದೇ ವೇಳೆಯಲ್ಲಿ ಭೂಮಿಯೊಳಗಿಂದ ಬಂದ ಮೃಗದ ಪರಿಚಯದ ಬಳಿಕ ನೀಡುವ ಪ್ರೋತ್ಸಾಹದ ಸಂದೇಶವು 18ನೇ ವಚನದಲ್ಲಿ ಸಿಕ್ಕುತ್ತದೆ: **ಇದರಲ್ಲಿ ಜ್ಞಾನವು ಅಡಕವಾಗಿದೆ. ಬುದ್ಧಿವಂತನು ಆ ಮೃಗದ ಅಂಕೆಯನ್ನು ಎಣಿಸಲಿ; ಅದು ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆಯಾಗಿದೆ; ಅದರ ಅಂಕೆಯು ಆರುನೂರ ಅರುವತ್ತಾರು.**

ಈ ಪ್ರಬೋಧನೆಯು **ಇದರಲ್ಲಿ ಜ್ಞಾನವು ಅಡಕವಾಗಿದೆ** ಎಂದು ತಿಳಿಸುವ ಮೂಲಕ ಆರಂಭಗೊಳ್ಳುತ್ತದೆ. NIVಯಲ್ಲಿ "ಇದಕ್ಕೆ ಜ್ಞಾನದ ಅಗತ್ಯವಿರುತ್ತದೆ" ಎಂದು ಇರುತ್ತದೆ. ಈಗ ಮುಂದೆ ಕೊಡಲ್ಪಡಲಿದ್ದ ಮಾಹಿತಿಯನ್ನು ಅರ್ಥಮಾಡಿಕೊಳ್ಳುವಷ್ಟು ಜ್ಞಾನವಿರುವವರಿಗೆ ಅದು ಕೊಡಲ್ಪಡುವದಾಗಿತ್ತು – ಅದು ವಿಷಯಗಳ ಕುರಿತು ಒಂದು ವ್ಯತ್ಯಾಸವಾದ ದೃಷ್ಟಿಕೋನವನ್ನು ಒದಗಿಸುವ ಮಾಹಿತಿಯಾಗಿತ್ತು. ಬೈಬಲಾಧಾರಿತ ಜ್ಞಾನದ ಒಂದು ಅರ್ಥನಿರೂಪಣೆಯೆಂದರೆ ಅದು "ಸಂಗತಿಗಳನ್ನು ದೇವರು ನೋಡುವ ರೀತಿಯಲ್ಲಿಯೇ ನೋಡುವವರಾಗುವದೇ" ಆಗಿದೆ.

18ನೇ ವಚನವು ಪ್ರಕಟನೆ ಪುಸ್ತಕದಲ್ಲಿಯೇ, ಇಡೀ ಬೈಬಲಿನಲ್ಲಿ ಸಹ ಅತ್ಯಂಥ ಒಗಟಿನಿಂದ ಕೂಡಿದ ವಚನವೆಂದು ಪರಿಗಣಿಸಲ್ಪಟ್ಟಿದೆ. William Barclayನ ಪ್ರಕಾರವಾಗಿ, "ಶಾಸ್ತ್ರಗಳಲ್ಲಿನ ಬೇರೆ ಯಾವದೇ ವಚನಕ್ಕಿಂತಲೂ ಅಧಿಕವಾಗಿ ಈ ವಚನದ ಮೇಲೆ ಅತಿ ಚಾತುರ್ಯತೆಯನ್ನು ತೋರಲಾಗಿರುತ್ತದೆ."[31] Robert Mulhollandನು ಹೀಗೆ ಹೇಳಿದನು, "ಒಬ್ಬನು ಈ ಒಗಟಿನ ಅಂಕೆಗೆ 666ಕ್ಕಿಂತ ಹೆಚ್ಚು ಪರಿಹಾರೋಪಾಯಗಳಿರುತ್ತವೆಂದು ಸಂಶಯಿಸುತ್ತಾನೆ, ಕೆಲವು ಅತಿ ಚಾತುರ್ಯದವುಗಳು, ಇನ್ನು ಕೆಲವು ಚಾಣಕ್ಯ, ಮತ್ತು ಬಹಳಷ್ಟು ನಂಬಲಿಕ್ಕಾಗದಂಥವುಗಳಾಗಿರುತ್ತವೆ."[32] ಸಮಸ್ಯೆಯನ್ನು ಮತ್ತಷ್ಟು ಗೊಂದಲಪಡಿಸುವ ರೀತಿಯಲ್ಲಿ, ಕೆಲವು ಹಸ್ತಪ್ರತಿಗಳಲ್ಲಿ ಬೇರೆ ಬೇರೆಯಾದ ರೀತಿಯಲ್ಲಿ ಈ ವಚನವು ಬರೆಯಲ್ಪಟ್ಟಿರುತ್ತದೆ: 616. 666 ಅಥವಾ 616 ಅಂಕೆಯ ಮಹತ್ವವು ಏನಾಗಿರುತ್ತದೆ?

ಅನೇಕ ಅರ್ಥನಿರೂಪಣೆಗಳಿರುತ್ತವೆ. ಉದಾಹರಣೆಗೆ, ಪ್ರಕಟನೆ ಪುಸ್ತಕವನ್ನು ಮುಂದುವರೆದ-ಐತಿಹಾಸಿಕ ಅರ್ಥೈಸುವ ದಾರಿಯನ್ನು ಅನುಸರಿಸುವ ವ್ಯಾಖ್ಯಾನಕಾರರು ಈ ಅಂಕೆಯನ್ನು ಕಾಲದಲ್ಲಿ ಒಂದು ಅವಧಿ ಎಂಬದಾಗಿ ಅರ್ಥೈಸುವದಕ್ಕೆ ಪ್ರಯತ್ನಿಸಿರುತ್ತಾರೆ: ಅದೊಂದು ಗಮನಾರ್ಹವಾದ ಕಾಲಾವಧಿಯಾಗಿದ್ದು ಸರಿಯಾಗಿ 666 ವರ್ಷಗಳ ವರೆಗೆ ಇತ್ತು ಎಂಬದೆ. ಈ ಮಧ್ಯಂತರ ಕಾಲದ ಕುರಿತಾದ ಅವರ ಅರ್ಥನಿರೂಪಣೆಯಲ್ಲಿ ಅನ್ಯಧರ್ಮಿಯತೆ, ಕ್ಯಾಥೋಲಿಕತ್ವ, ಮತ್ತು ಮಹಮ್ಮದಿಕತ್ವ ಸೇರಿರುತ್ತವೆ. ಈ ಅಭಿಪ್ರಾಯಕ್ಕೆ ತೋರಲಾಗಿರುವ ಅನೇಕ ಆಕ್ಷೇಪಣೆಗಳೊಳಗಿನ ವಾಸ್ತವಾಂಶವೇನೆಂದರೆ ಜನರು ಈ ಒಂದೊಂದು ನಂಬಿಕೆಯ ವ್ಯವಸ್ಥೆಯನ್ನು ಜನರು 666 ವರ್ಷಗಳಿಗೂ ಅಧಿಕ ಕಾಲದಿಂದ ಅಂಟಿಕೊಂಡಿರುತ್ತಾರೆ ಎಂಬದೆ.

ಬಹುಪಾಲು ಸಹಸ್ರವರ್ಷಪೂರ್ವಾಡಳಿತ ವಾದಿಗಳು ಮೃಗವನ್ನು ಭವಿಷ್ಯದಲ್ಲಿ ಕಾಣಿಸಿಕೊಳ್ಳಲಿರುವ ಒಂದು ಅತಿಮಾನುಷ-ಜೀವಿ ಎಂಬುದಾಗಿ ನಂಬುತ್ತಾರೆ. ಒಂದು ವಿಶಿಷ್ಟ ಸಹಸ್ರವರ್ಷಪೂರ್ವಾಡಳಿತ ಅರ್ಥೈಸುವ ದಾರಿಯೆಂದರೆ "ಈ ವಚನದ ಅರ್ಥವು ಏನಾಗಿರುತ್ತದೆಂಬುದು ಯಾರಿಗೂ ತಿಳಿಯದು - ಆದರೆ ಮೃಗವು ಕಾಣಿಸಿಕೊಳ್ಳುವಾಗ ಅದು ಸ್ಪಷ್ಟವಾಗುವದು." ಈ ಅರ್ಥೈಸುವ ದಾರಿಯನ್ನು ಪ್ರಕಟನೆ ಪುಸ್ತಕದ ಇಡೀ ಯೋಜನೆ ಹಾಗೂ ಉದ್ದೇಶಕ್ಕೆ ತದ್ವಿರುದ್ಧವೆಂಬುದಾಗಿ ತಿರಸ್ಕರಿಸತಕ್ಕದ್ದು.

ಅತ್ಯಂಥ ಜನಪ್ರಿಯ ಅರ್ಥನಿರೂಪಣೆಗಳಲ್ಲೊಂದೆಂದರೆ - 666 ಅಂಕೆಯು ಯಾವದೋ ಒಬ್ಬ ವ್ಯಕ್ತಿಯ ಹೆಸರು ಅಥವಾ ಬಿರುದನ್ನು ಪ್ರತಿನಿಧಿಸುತ್ತದೆ ಎಂಬದೆ. ಈ ಅರ್ಥೈಸುವ ದಾರಿಯನ್ನು ಬಳಸುವವರು ವಾದಿಸುವದೇನೆಂದರೆ "ಈ ಹೆಸರಿನ ಅಂಕೆ" ಮತ್ತು "ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆ" (ವಚನಗಳು 17, 18) ಎಂಬ ಎರಡು ಪದಗುಚ್ಛಗಳು ಪವಿತ್ರಾತ್ಮನ ಮನಸ್ಸಿನಲ್ಲಿ ಒಬ್ಬ ನಿರ್ದಿಷ್ಟವಾದ ಮನುಷ್ಯನಿದ್ದನೆಂಬುದಕ್ಕೆ ಯಾವ ಸಂಶಯವನ್ನೂ ಉಳಿಸುವದಿಲ್ಲ ಎಂಬುದೆ. ಕೆಲವರು **ಎಣಿಸಲಿ** ಎಂಬ ಪದದ ಕಡೆಗೆ ಸಹ ಗಮನ ಸೆಳೆಯುತ್ತಾರೆ, ಅದು "ಒಂದು ಲೆಕ್ಕದ ಪ್ರಕ್ರಿಯೆಯನ್ನು ಕಾರ್ಯರೂಪಕ್ಕೆ ತರುವದು" ಎಂದರ್ಥವನ್ನು ಕೊಡುತ್ತದೆ. ಈ ಪದವು ಅತ್ಯಂಥ ಪರಿಣಿತವಾದ ಲೆಕ್ಕದ ಪ್ರಕ್ರಿಯೆಯನ್ನು ಸೂಚಿಸುವದಾಗಿದ್ದು ಅದರಲ್ಲಿ ವ್ಯಕ್ತಿಯ ಹೆಸರಿನ ಅಕ್ಷರಗಳಿಗೆ ಸಮಾನವಾದ ಅಂಕೆಗಳನ್ನು ಕೂಡಿಸುವದು ಸೇರಿರುತ್ತದೆಂಬ ಮುಕ್ತಾಯಕ್ಕೆ ಬರುತ್ತಾರೆ.

ಅನೇಕ ವ್ಯಾಖ್ಯಾನಕಾರರು ನಂಬುವದೇನೆಂದರೆ 18ನೇ ವಚನವು ಯೋಹಾನನಿಂದ ಮುಂದಿಡಲ್ಪಟ್ಟಿರುವ ಒಗಟು ಎಂಬದೆ. 666 ಅಂಕೆಯನ್ನು *gematria* ಎಂಬ ಪ್ರಾಚೀನ ಸಂಖ್ಯಾಶಾಸ್ತ್ರದ ಅನ್ವಯಿಕೆಯ ಮೂಲಕ ಯಾವದಾದರೂ ವ್ಯಕ್ತಿಯ ಹೆಸರನ್ನು ಸೂಚಿಸುವಂತೆ ಮಾಡಬಹುದಾಗಿದೆ ಎಂದು ಅವರು ಹೇಳುತ್ತಾರೆ: "ಅಕ್ಷರಗಳನ್ನು ಬಳಸಿ ಅವುಗಳ ಒಟ್ಟಾರೆ ಕೂಡಿಸಿದ ಸಂಖ್ಯಾ ಮೌಲ್ಯದ ಮೂಲಕವಾಗಿ ಒಂದು ಹೆಸರು, ಅಥವಾ ಸ್ವಾರಸ್ಯಕರ ಸಂಬಂಧಿತ ವಿಚರಗಳನ್ನು ವ್ಯಕ್ತಪಡಿಸಬಹುದಾಗಿದೆ."[33]

ಯೋಹಾನನ ದಿನದಲ್ಲಿ, ಜನರು ಅರಬಿಕ್ ಸಂಖ್ಯೆಗಳನ್ನು (1, 2, 3 ...) ಬಳಸುತ್ತಿರಲಿಲ್ಲ. ರೋಮನ್ನರು ರೋಮನ್ ಸಂಖ್ಯೆಗಳನ್ನು ಬಳಸಿದರೆ, ಗ್ರೀಕರು ಮತ್ತು ಇಬ್ರಿಯರು ತಮ್ಮ ತಮ್ಮ ಅಕ್ಷರಮಾಲೆಯಲ್ಲಿನ ಪ್ರತಿಯೊಂದು ಅಕ್ಷರಕ್ಕೆ ಒಂದು ನಿಶ್ಚಿತವಾದ ಸಂಖ್ಯಾ ಮೌಲ್ಯವನ್ನು ಕೊಡುತ್ತಿದ್ದರು. ಗ್ರೀಕ್ ಅಕ್ಷರಮಾಲೆಯಲ್ಲಿ, "ಅಲ್ಫಾ" ಅಕ್ಷರವು 1 ಸಂಖ್ಯೆಯನ್ನು, "ಬೆಟಾ" 2 ಸಂಖ್ಯೆಯನ್ನು, "ಗಮ್ಮಾ" 3, ಮತ್ತು ಹೀಗೆ ಪ್ರತಿಯೊಂದು ಅಕ್ಷರ ಒಂದೊಂದು ಸಂಖ್ಯೆಯನ್ನು ಪ್ರತಿನಿಧಿಸಬಹುದಾಗಿದೆ. ಮೂಲಭೂತವಾಗಿ, "ಅಲ್ಫಾ" ($\alpha$) ದಿಂದ "ಆಯೋಟಾ" ($\iota$) ವರೆಗೆ ಅಕ್ಷರಗಳು 1ರಿಂದ 10 ಸಂಖ್ಯೆಗಳನ್ನು ಸೂಚಿಸುತ್ತವೆ, ಬಳಿಕ "ಕಾಪ್ಪಾ" ($\kappa$) 20

ಸಂಖ್ಯೆಯಾಗಿತ್ತು, "ಲಂಬ್ಡಾ" (λ) 30, "ಮು" (μ) 40 ಮತ್ತು ಹೀಗೆ ಮುಂದುವರೆಯುತ್ತದೆ. "ಹೋರ್" (ρ) 100, "ಸಿಗ್ಮಾ" (σ) (ಒಂದು ಪದದ ಮಧ್ಯದಲ್ಲಿ "s"ನ ಒಂದು ರೂಪ) 200 ಅಂಕೆಯಾಗಿತ್ತು, "ಟಾವು" (τ) 300, ಮತ್ತು ಹೀಗೆ ಮುಂದುವರೆಯುತ್ತದೆ. ಈ ವ್ಯವಸ್ಥೆಗೆ ಹೊರತಾದದ್ದೆಂದರೆ ಪದಗಳು ಅಂತ್ಯದಲ್ಲಿ ಬಳಸಲ್ಪಡುವ "ಸಿಗ್ಮಾ"ದ ರೂಪವನ್ನು (ς) 6 ಸಂಖ್ಯೆ ಬರವಂತೆ ಪಟ್ಟಿಯೊಳಗೆ ಸೇರ್ಪಡೆಗೊಳಿಸಲಾಗುತ್ತಿತ್ತು ಮತ್ತು 90 ಹಾಗೂ 900 ಅಂಕೆಗಳಿಗೆ ವಿಶೇಷ ಸಂಕೇತಗಳನ್ನು ಬಳಸಲಾಗುತ್ತಿತ್ತು. ಈ ಸಂಖ್ಯಾ ವಿಧಾನವು ಕೆಲವರಿಗೆ ವಿಚಿತ್ರವೆಂದು ತೋರಬಹುದು, ಆದರೆ ಬಹಳಷ್ಟು ಜನರು ರೋಮನ್ ಸಂಖ್ಯೆಗಳನ್ನು ಬಳಸಿರುತ್ತಾರೆ, ಅದರಲ್ಲಿ ಅಕ್ಷರಗಳು ಸಂಖ್ಯೆಗಳನ್ನು ಪ್ರತಿನಿಧಿಸುತ್ತವೆ: "I" ಸಂಖ್ಯೆ 1 ಕ್ಕೆ ಸಮಾನ, "V" ಸಂಖ್ಯೆ 5 ಕ್ಕೆ, "X" ಸಂಖ್ಯೆ 10ಕ್ಕೆ ಸಮಾನ, ಹೀಗೆ ಮುಂದುವರೆಯುತ್ತದೆ. ಈ ದಿನ ಸಹ ದಿನಾಂಕಗಳನ್ನು ಆಗಾಗ ರೋಮನ್ ಅಂಕೆಗಳಿಂದ ಬರೆಯಲಾಗುತ್ತದೆ, ಮತ್ತು ಕೆಲವು ಗಡಿಯಾರಗಳು ರೋಮನ್ ಅಂಕೆಗಳನ್ನು ತೋರಿಸುತ್ತವೆ.

ಗ್ರೀಕರು ಕೆಲವು ಸಾರಿ *gematria*ನ್ನು ಒಂದು ಆಟವಾಗಿ ಬಳಸುತ್ತಿದ್ದರು. ಒಬ್ಬ ಆಟಗಾರನು ಒಂದು ಹೆಸರನ್ನು ಅಂಕೆಯಾಗಿ ಬದಲಾಯಿಸಿ ಅದನ್ನು ಉಳಿದ ಆಟಗಾರರಿಗೆ ನೀಡುತ್ತಿದ್ದನು, ಮತ್ತು ಅದರ ಮೂಲ ಹೆಸರು ಏನಾಗಿತ್ತೆಂದು ಹೇಳುವಂತೆ ಸವಾಲು ಹಾಕುವನು. ಅನೇಕ ವ್ಯಾಖ್ಯಾನಕಾರರಿಂದ ಪ್ರಸ್ತಾಪಿಸಲ್ಪಡುವ ಒಂದು ಉದಾಹರಣೆಯೆಂದರೆ Pompeii ಅವಶೇಷಗಳ ಒಂದು ಗೋಡೆಯ ಮೇಲೆ ಗೀಚಲಾಗಿರುವ ಬರಹವಾಗಿದೆ, ಅದು ಹೀಗಿದೆ, "545 ಸಂಖ್ಯೆಯವಳಾದ ಆಕೆಯನ್ನು ನಾನು ಪ್ರೀತಿಸುತ್ತೇನೆ." ಹೀಗೆ ಅದನ್ನು ಬರೆದವನು ಒಬ್ಬ ವ್ಯಕ್ತಿಯ ಕಡೆಗೆ ತನಗಿರುವ ಪ್ರೀತಿಯನ್ನು ಪ್ರಕಟಪಡಿಸಿದನು, ಅದೇ ವೇಳೆಯಲ್ಲಿ ಆಕೆಯು ಯಾರೆಂದು ಗೊತ್ತಿಲ್ಲದವರಿಗೆ ಆಕೆಯ ಗುರುತು ಸಿಕ್ಕದಂತೆ ಗೌಪ್ಯವಾಗಿಯೂ ಇಟ್ಟನು.

ಒಂದು *gematria* ಆಟದಲ್ಲಿ ಮುಂದಿಡಲಾಗುವ ಯಾವದೇ ಅಂಕೆಗೆ ಅಸಂಖ್ಯಾತ "ಸರಿ ಉತ್ತರಗಳು" ಇದ್ದಿರಬಹುದಾದ್ದರಿಂದ, ಅದರಲ್ಲಿ ಭಾಗಿಯಾಗಿರುವವನು ತಾನು "ಗೆದ್ದೆನು" ಎಂದು ತಿಳಿದುಕೊಳ್ಳುವದಕ್ಕಿದ್ದ ಒಂದೇ ದಾರಿಯು ಒಗಟನ್ನು ರಚಿಸಿದವನು "ಸರಿ" ಎಂದು ಹೇಳುವಾಗಲೇ ಆಗಿತ್ತು! ಪ್ರಕಟನೆ ಪುಸ್ತಕದ ವಾಚಕರು ಈ ಆಟವನ್ನು ಆಡುವ ಉದ್ದೇಶವನ್ನು ಹೊಂದಿರುವದಾದಲ್ಲಿ, ಮೂಲ ಹೆಸರು ಯಾವದೆಂಬುದನ್ನು ಖಚಿತವಾಗಿ ತಿಳಿಯುವದಕ್ಕೆ ಏಕೈಕ ದಾರಿಯೆಂದರೆ, ಅಂತ್ಯದಲ್ಲಿ ಅಪೊಸ್ತಲನು ಸರಿ ಉತ್ತರವು ಏನೆಂಬ ಕುರಿತು ಒಂದು ಟಿಪ್ಪಣಿಯನ್ನು ಸೇರ್ಪಡೆಗೊಳಿಸುವ ಮೂಲಕವೇ ಆಗಿತ್ತು. ಹಾಗಿದ್ದರೂ, ಯೋಹಾನನು ಇಲ್ಲಿ *gematria*ನ್ನು ಬಳಸುತ್ತಿದ್ದಾನೆಂದು - ಆತನು ತನ್ನ ವಾಚಕರಿಗೆ ಒಂದು ಒಗಟನ್ನು ಮುಂದಿಡುತ್ತಿದ್ದಾನೆಂದು - ಅನೇಕ ವ್ಯಾಖ್ಯಾನಕಾರರು ನಂಬುತ್ತಾರೆ.

ಪಂಡಿತರ ಬಳಿಯಲ್ಲಿ ಪ್ರಕಟನೆ 13:18ಕ್ಕೆ ಸಂಬಂಧಿಸಿದ *gematria* ಕುರಿತಾಗಿ ಇರುವ ಮೊದಲ ದಾಖಲೆಯೆಂದರೆ ಅದು ಕ್ರಿ.ಶ. 185ರ ಹೊತ್ತಿನಲ್ಲಿದ್ದ Irenaeusನ ಬರಹಗಳಲ್ಲಿಯೇ ಆಗಿದೆ. Irenaeusನು (c. ಕ್ರಿ.ಶ. 140-202) Polycarpನ ಶಿಷ್ಯನಾಗಿದ್ದು ಸ್ಮುರ್ನದಲ್ಲಿ ಬೆಳೆದನು (2:8, 11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ) ಮತ್ತು ಅನಂತರದಲ್ಲಿ Lyonsನಲ್ಲಿರುವ ಸಭೆಗೆ ನಾಯಕನಾದನು. Irenaeusನು "666" ಅಂಕೆಯ ಕುರಿತು ಮಾಡಿದ ಉಲ್ಲೇಖನಗಳು ಆತನ *Against Heresies* ಎಂಬ ಕೃತಿಯಲ್ಲಿರುತ್ತವೆ. ಈ ಕೃತಿಯು ಗ್ನಾಸ್ಟಿಕ್ ಪಂಥಗಳ ವಿವರಣೆ, ಮತ್ತು ಉತ್ತರ ಆಗಿರುತ್ತದೆ (2:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). Irenaeusನು ಒಟ್ಟು 666 ಸಂಖ್ಯೆಯಾಗುವ ಮೂರು ಹೆಸರುಗಳನ್ನು ಅಥವಾ ಬಿರುದುಗಳನ್ನು

ಪ್ರಸ್ತಾಪಿಸಿದನು. ಆ ವಿವರಣೆಗಳನ್ನು ಸರಳಗೊಳಿಸುವದಕ್ಕಾಗಿ, ಈ ಹಂತದಿಂದ ಮೊದಲ್ಗೊಂಡು, ಗ್ರೀಕ್ ಅಥವಾ ಇಬ್ರಿಯ ಅಕ್ಷರಗಳಿಗೆ ಸಮವಾಗಿರುವ ಆಂಗ್ಲ ಅಕ್ಷರಗಳನ್ನು ಕೊಡಲಾಗುವದು.

Irenaeusನು ಸೂಚಿಸಿದ ಸಲಹೆಗಳಲ್ಲಿ ಒಂದು ಗ್ರೀಕ್ ಪದವಾಗಿದ್ದು ಈಗ ಅದು ಕ್ರೈಸ್ತರಿಗೆ ಯಾವ ಅರ್ಥವನ್ನೂ ಹೊಂದಿರುವದಿಲ್ಲ: *Euanthas*. ಬಹುಶಃ ಇದು ಆತನ ದಿನದಲ್ಲಿ ಅತಿ ಪರಿಚಿತನಾಗಿದ್ದ ವ್ಯಕ್ತಿಯೊಬ್ಬನ ಹೆಸರಾಗಿರಬಹುದು.

ಇನ್ನೊಂದು ಗ್ರೀಕ್ ಪದವು *Lateinos*, ಅದು "ಲ್ಯಾಟಿನ್ ಮನುಷ್ಯ" ಅಥವಾ "ಲ್ಯಾಟಿನ್ ಸಂಗತಿ" ಎಂದು ಅರ್ಥವನ್ನು ಕೊಡಬಲ್ಲದು - ಕೆಲವು ಸಾರಿ "ಲ್ಯಾಟಿನ್ ರಾಜ್ಯ" ಅಥವಾ "ಲ್ಯಾಟಿನ್ ಸಾಮ್ರಾಜ್ಯ" ಎಂಬ ಅರ್ಥ ಬರುವಂತೆ ವ್ಯಾಖ್ಯಾನಿಸಲಾಗಿರುತ್ತದೆ. ಕೆಲವರು ಇದನ್ನು ರೋಮನ್ ಸಾಮ್ರಾಜ್ಯವೆಂದು ಅರ್ಥ ಕೊಡುತ್ತದೆಂದು ಭಾವಿಸುತ್ತಾರೆ, ಯಾಕೆಂದರೆ ರೋಮನ್ನರು ಲ್ಯಾಟಿನ್ ಭಾಷೆಯನ್ನಾಡುತ್ತಿದ್ದರು. ಇನ್ನು ಕೆಲವರು ಇದನ್ನು ರೋಮನ್ ಸಾಮ್ರಾಜ್ಯದ ಚಕ್ರವರ್ತಿಯ ಬದಲಾಗಿ ಒಬ್ಬ ಆರಂಭಿಕ ಅರಸನಾದ Latiumನನ್ನು ಸೂಚಿಸುತ್ತದೆಂದು ನಂಬುತ್ತಾರೆ. Irenaeusನಿಗೆ ಅಂಥ ಒಂದು ಅರ್ಥವು ತೋಚಿರಲಾರದು ಎಂಬ ವಾಸ್ತವಾಂಶದ ಹೊರತಾಗಿಯೂ, ಕೆಲವರು ಇದನ್ನು ಕ್ಯಾಥೋಲಿಕತ್ವಕ್ಕೆ ಅನ್ವಯಿಸುತ್ತಾರೆ.

| | | |
|---|---|---|
| L | = | 30 |
| a | = | 1 |
| t | = | 300 |
| e | = | 5 |
| i | = | 10 |
| n | = | 50 |
| o | = | 70 |
| s | = | 200 |
| ಒಟ್ಟು | = | 666 |

ಮೂರನೆಯ ಉದಾಹರಣೆಯು *Teitan*, ಇದು "Titus" (ತೀತನು) ಎಂಬುದಕ್ಕೆ ಇರುವ ಪರ್ಯಾಯ ಪದವಾಗಿರಬಹುದು, ಈತನು ರೋಮನ್ ಚಕ್ರವರ್ತಿಗಳಲ್ಲೊಬ್ಬನಾಗಿದ್ದನು. Titusನು ಸ್ವತಃ ಯೆಹೂದ್ಯರನ್ನು ಹಿಂಸಿಸಿದನು, ಆದರೆ ಆತನ ಸಹೋದರನಾದ Domitianನು ಕ್ರೈಸ್ತರನ್ನು ಹಿಂಸಿಸಿದನು. ಕೆಲವರು "Titus" ಎಂಬುದು ಕುಟುಂಬ ಹೆಸರಾಗಿರಬಹುದೆಂದು ಯೋಚಿಸುತ್ತಾರೆ.

| | | |
|---|---|---|
| T | = | 300 |
| e | = | 5 |
| i | = | 10 |
| t | = | 300 |
| a | = | 1 |
| n | = | 50 |
| ಒಟ್ಟು | = | 666 |

Irenaeusನು ಈ ಮೂರರ ನಡುವೆ ನಿರ್ಧರಿಸಲು ನಿರಾಕರಿಸುತ್ತಾ ಹೀಗೆ ಹೇಳಿದನು, "... ಈ ಹೆಸರು ಈಗಿನ ಕಾಲದಲ್ಲಿ ಪ್ರತ್ಯೇಕವಾಗಿ ಪ್ರಕಟಪಡಿಸಲ್ಪಡುವದು ಅವಶ್ಯಕವಾಗಿದ್ದರೆ, ಅಂತ್ಯಕಾಲಿಕ ದರ್ಶನವನ್ನು ಕಂಡವನೇ ಅದನ್ನು ಘೋಷಣೆ ಮಾಡಿರುತ್ತಿದ್ದನು."[34]

ಇತರ ಕೆಲವು ಸಾಧ್ಯತೆಗಳು ತಿಳಿಸಲ್ಪಟ್ಟಿವೆ, ಆದರೆ ಇತ್ತೀಚಿನ ವರ್ಷಗಳಲ್ಲಿ, ಈ "ಗೂಢಲಿಪಿ"ಗಾಗಿ ಹೆಚ್ಚು ಖ್ಯಾತಿಯುಳ್ಳ ಅಭ್ಯರ್ಥಿ ಎಂದರೆ ಕುಖ್ಯಾತ ನೀರೋ ಚಕ್ರವರ್ತಿ. ಸ್ವಲ್ಪ ಅಧಿಕವಾದ ವ್ಯಾಖ್ಯಾನಕಾರರು ಈ 666 ನಿರೋ ಚಕ್ರವರ್ತಿಯನ್ನು ಸೂಚಿಸುತ್ತದೆಂದು ಹೇಳುತ್ತಾರೆ. ನಿರೋ ಹೆಸರನ್ನು 666ಕ್ಕೆ ಸಮಗೊಳಿಸಲು, ಆತನಿಗಿದ್ದ "Caesar" ಎಂಬ ಬಿರುದನ್ನು ಸೇರ್ಪಡೆಗೊಳಿಸುವದು ಅವಶ್ಯಕವಾಗಿರುತ್ತದೆ, ಆತನ ಹೆಸರಿನ ಬೇರೆ ಬೇರೆ ರೂಪಗಳನ್ನ ಬಳಸಿ, ಬಳಿಕ ಆತನ ಹೆಸರನ್ನು ಮತ್ತು ಬಿರುದನ್ನು ಇಬ್ರಿಯ ಭಾಷೆಗೆ ಪರಿವರ್ತಿಸಬೇಕು. ಅದರ ಫಲಿತಾಂಶ ಇಲ್ಲಿದೆ:

| | | | |
|---|---|---|---|
| N | ("nun") | = | 50 |
| e | ("resh") | = | 0 |
| r | | = | 200 |
| o | ("waw") | = | 6 |
| n | ("nun") | = | 50 |
| k | ("kaph") | = | 100 |
| a | | = | 0 |
| i | ("samekh") | = | 0 |
| s | | = | 60 |
| e | ("resh") | = | 0 |
| r | | = | 200 |
| | ಒಟ್ಟು | = | 666 |

ಇಬ್ರಿಯ ಅಕ್ಷರಮಾಲೆಯು ಸ್ವರಾಕ್ಷರಗಳನ್ನು ಹೊಂದಿರುವದಿಲ್ಲ. ಹೀಗೆ ಬಹಳಷ್ಟು ಸ್ವರಾಕ್ಷರಗಳು ಸೊನ್ನೆಗೆ ಸಮಾನವೆಂದು ಪ್ರತಿನಿಧಿಸಲ್ಪಡುವವು. "o" ಒಂದು ವಿನಾಯಿತಿಯುಳ್ಳದ್ದು ಯಾಕೆಂದರೆ ಅದು 6ಕ್ಕೆ ಸಮಾನವಾದ "waw" ಮೇಲೆ ಒಂದು ಗುರುತು ಹಾಕುವ ಮೂಲಕ ರಚಿಸಲ್ಪಡುತ್ತದೆ.

ಈ ಅಭಿಪ್ರಾಯವನ್ನು ಅನುಸರಿಸುವವರು ನಂಬುವದೇನೆಂದರೆ, ಕಡೇ "n" ("nun") "Neron" ನಲ್ಲಿ ಕೈ ಬಿಡಲ್ಪಡುವದೇ ನಿರ್ಣಾಯಕ ಅಂಶವು ಎಂಬದೆ, ಅಕ್ಷರಗಳು ಬಳಿಕ 616ರ ಮೊತ್ತವನ್ನು ತಲುಪುತ್ತವೆ, ಇದು 616ರ ಪರ್ಯಾಯ ಪದವಾಗಿದೆ. ಅವರ ಮಾತುಗಳಲ್ಲಿನ ಅಚ್ಚರಿಯು "ಬೇರೆ ಇನ್ನಾವ ಹೆಸರುಗಳ ಒಟ್ಟು ಮೊತ್ತವು 666 ಅಥವಾ 616 ಆಗುತ್ತದೆ?" ಎಂದು ಕೇಳುವದರಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

ಆ ಮುಕ್ತಾಯಕ್ಕೆ ಬರುವದು ವಾಕ್ಯಭಾಗಕ್ಕೆ ಯಾವ ನಷ್ಟವನ್ನೂ ಉಂಟು ಮಾಡುವದಿಲ್ಲ, ಬೇರೆ ವಾಕ್ಯಭಾಗಗಳಿಗೆ ತದ್ವಿರುದ್ಧವಾಗುವದಿಲ್ಲ, ಮತ್ತು ಸನ್ನಿವೇಶದೊಂದಿಗೆ ಉತ್ತಮವಾಗಿ ಸರಿಹೊಂದುತ್ತದೆ. ವ್ಯಾಖ್ಯಾನವು ಮೊದಲ ಮೃಗವು "ನಿರೋನ ಮರುಜೀವ," ಅಂದರೆ Domitianನು ಎಂಬ ವಿಚಾರದೊಂದಿಗೆ ಜೋಡಿಸಲ್ಪಡಬಲ್ಲದು. ಹಾಗಿದ್ದರೂ, ಒಟ್ಟಾರೆ *gematria* ಕುರಿತಾಗಿ ಇರುವ ಅಭಿಪ್ರಾಯ ತೋರದಿರುವಿಕೆಗಳ ಹೊರತಾಗಿಯೂ, ನಿರೋ ಕುರಿತಾದ ಈ ಲೆಕ್ಕಿಸುವ ವಿಷಯದಲ್ಲಿ ನಿರ್ದಿಷ್ಟವಾದ ಸಮಸ್ಯೆಗಳಿರುತ್ತವೆ: (1) ಪದಗಳ

ಉಚ್ಚಾರಗಳನ್ನು ಬದಲಾಯಿಸುವದು, ಬಿರುದುಗಳನ್ನು ಸೇರ್ಪಡೆಗೊಳಿಸುವದು ಅಥವಾ ಬೇರೆ ತಿದ್ದುಪಡಿಗಳನ್ನು ಮಾಡುವ ಅಗತ್ಯವು ಏಕೆ? (2) ಗ್ರೀಕ್ ಬದಲಾಗಿ ಇಬ್ರಿಯವನ್ನು ಬಳಸುವದು ಏಕೆ? ರೋಮನ್ ಅಧಿಕಾರಿಗಳಿಗೆ ಗ್ರೀಕ್ ಗೊತ್ತಿತ್ತು, ಆದರೆ ಇಬ್ರಿಯ ತಿಳಿದಿರಲಿಲ್ಲವಾದ್ದರಿಂದ ಅವರಿಗೆ ಅರ್ಥವನ್ನು ಕಂಡುಹಿಡಿಯುವದಕ್ಕೆ ಇದು ಕಠಿಣಗೊಳಿಸಿರಬೇಕು ಎಂದು ತೋರಿಸುವ ಮೂಲಕ ಕೆಲವರು ಈ ಪ್ರಶ್ನೆಗೆ ಉತ್ತರಿಸುತ್ತಾರೆ. ಹೇಗೂ, G. B. Cairdನು ಹೀಗೆ ಬರೆದನು, "ಯೋಹಾನನು ಗ್ರೀಕ್ ಭಾಷೆಯಲ್ಲಿ ಬರೆಯುತ್ತಿದ್ದನು ಮತ್ತು ತನ್ನ ವಾಚಕರಲ್ಲಿ ಇಬ್ರಿಯ ಅಕ್ಷರಮಾಲೆಯ ತಿಳುವಳಿಕೆ ಇರಬಲ್ಲದೆಂದು ಭರವಸ ಹೊಂದಿರಲು ಸಾಧ್ಯವಿರಲಿಲ್ಲ."[35] ಹೆಚ್ಚು ಮಹತ್ವಪೂರ್ಣವಾಗಿ, ಈ ಅರ್ಥನಿರೂಪಣೆಯು ಕೆಲವು ಪಂಡಿತರು ಯೋಚಿಸುವಂತೆ ತೋರುವ ಪ್ರಕಾರ ಅಷ್ಟೊಂದು ಸ್ಪಷ್ಟವಾದದ್ದಾಗಿದ್ದರೆ, ಪ್ರಕಟನೆ ಪುಸ್ತಕದ ಪ್ರಾಚೀನ ವ್ಯಾಖ್ಯಾನಕಾರರು ಏಕೆ ಈ ಪರಿಹಾರವನ್ನು ಗುರುತಿಸಲಿಲ್ಲ? "ಉದಾಹರಣೆಗೆ, Irenaeusನು ... 666 ಅಂಕೆಯ ಅರ್ಥವು ಏನಾಗಿರಬಹುದೆಂದು ಹಲವಾರು ಅಭಿಪ್ರಾಯಗಳನ್ನು ಮುಂದಿಟ್ಟನು, ಆದರೆ ಆತನು ಸಾಧ್ಯತೆಗಳೊಳಗೆ ನಿರೋನನ್ನು ಸೇರ್ಪಡೆ ಸಹ ಮಾಡಲಿಲ್ಲ - ಇನ್ನು ಅವನನ್ನು ಸಂಭಾವ್ಯ ಅಭ್ಯರ್ಥಿ ಎಂದು ನೋಡುವ ಪ್ರಶ್ನೆಯಂತೂ ಇಲ್ಲವೇ ಇಲ್ಲ."[36]

ಈ ಒಗಟಿಗೆ ಇತರ ಪರಿಹಾರಗಳಿರುತ್ತವೆ: ಒಬ್ಬ ಲೇಖಕನು Julius Caesar ನಿಂದ ಮೊದಲ್ಗೊಂಡು Vespasian ವರೆಗಿನ ಸಕಲ ಚಕ್ರವರ್ತಿಗಳ ಗ್ರೀಕ್ ಹೆಸರುಗಳೆಲ್ಲವನ್ನು 666 ಮೊತ್ತಕ್ಕೆ ಬರುವಂತೆ ಮಾಡಿದ್ದನು. ಲೇಖಕನು Galbaನ್ನು ಸೇರ್ಪಡೆಗೊಳಿಸುವ, ಆದರೆ Otho ಮತ್ತು Vitelliusರನ್ನು ಕೈ ಬಿಡುವ ಮೂಲಕ ಇದನ್ನು ಸಾಧಿಸಿದನು - ಪಟ್ಟಿಯನ್ನು "ಸರಿಹೊಂದುವಂತೆ" ಮಾಡುವದೇ ಹೊರತು ಬೇರೆ ಇನ್ನಾವ ಕಾರಣವು ಇರುವಂತೆ ತೋರುವದಿಲ್ಲ. ಮತ್ತೊಬ್ಬನು ವಾದಿಸಿದ್ದೇನೆಂದರೆ ಯೋಹಾನನು Domitianನ ನಾಣ್ಯಗಳಲ್ಲಿದ್ದ ಪ್ರಸ್ತುತಕಾಲದ ರಾಜವಂಶಸ್ಥ ಬಿರುದುಗಳ ಅಂಕೆಯ ಮೌಲ್ಯವನ್ನು ಲೆಕ್ಕಿಸುತ್ತಿದ್ದಾನೆ ಎಂಬುದೆ. ಲೇಕಕನು Domitianನ ಪೂರ್ಣ ಬಿರುದನ್ನು ತೆಗೆದುಕೊಂಡು, ಅದನ್ನು ಗ್ರೀಕ್ ಭಾಷೆಗೆ ಪರಿವರ್ತಿಸಿ, ಬಳಿಕ ಪದಗಳಲ್ಲಿ ಐದು ಸಂಕ್ಷೇಪಗಳನ್ನು ಮಾಡುವ ಮೂಲಕ ಇದನ್ನು ಸಾಧಿಸಿದನು - ಈ ವಿಧವಾದ ಬಿರುದುಗಳು ಒಂದೇ ಒಂದು ನಾಣ್ಯದ ಮೇಲೆಯೂ ಕಾಣಿಸಿಕೊಳ್ಳಲಿಲ್ಲ ಎಂಬ ವಾಸ್ತವಾಂಶದ ಹೊರತಾಗಿಯೂ ಹೀಗೆ ಮಾಡಿರುತ್ತಾನೆ.

ಪ್ರಕಟನೆ ಪುಸ್ತಕದ ಒಂದು ಪ್ರಮುಖ ಉದ್ದೇಶವು ಮತಭ್ರಷ್ಟತೆಯನ್ನು ಮುಂತಿಳಿಸುವದೆಂದು ನಂಬುವವರು ಪೋಪ್ ಪ್ರಭುತ್ವದ ರೋಮ್ ಕಡೆಗೆ ಬೆರಳು ತೋರಿಸುವ ಪರಿಹಾರಗಳ ಕಡೆಗೆ ವಾಲಿಕೊಳ್ಳುತ್ತಾರೆ. ಈ ಪೋಪ್ ಸ್ಥಾನದಲ್ಲಿದ್ದವರು "ಲ್ಯಾಟಿನ್ ಮನುಷ್ಯ" ಎಂಬಂತಹ ಪದಗಳನ್ನು ಪೋಪ್ ಪ್ರಭುತ್ವದ ಕುರಿತ ಪ್ರವಾದನೆಯೆಂದು ಅರ್ಥಮಾಡಿಕೊಳ್ಳುತ್ತಾರೆ. ವರದಿಯಾಗಿರುವಂತೆ, *vicarius filii dei* ("ದೇವಕುಮಾರನ ಸ್ಥಾನದಲ್ಲಿ") ಎಂಬ ಮಾತುಗಳು ಪಟ್ಟಾಭಿಷೇಕದ ವೇಲೆ ಬಳಸಲ್ಪಡುವ ಪೋಪಾಧಿಪತ್ಯದ ಕಿರೀಟದಲ್ಲಿ ಅಮೂಲ್ಯ ರತ್ನಗಳ ಅಕ್ಷರಗಳಿಂದ ಬರೆಯಲ್ಪಟ್ಟಿದೆ. ಈ ಪದಗುಚ್ಛದಲ್ಲಿರುವ ಪದಗಳನ್ನು ರೋಮನ್ ಸಂಖ್ಯೆಗಳೆಂದು ಎಣಿಸಿಕೊಳ್ಳುವಾಗ, ಅವುಗಳ ಒಟ್ಟು ಮೊತ್ತವು 666 ಆಗುತ್ತದೆ. ರೋಮನ್ ಸಂಖ್ಯೆಗೆ ಸಮಾನತೆಯಿಲ್ಲದ ಪದಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಲಾಗುವದಿಲ್ಲ "u" ಅಕ್ಷರವನ್ನು "v" ಎಂದು ಪರಿಗಣಿಸಲಾಗುತ್ತದೆ. ಗ್ರೀಕ್ ಅಕ್ಷರಮಾಲೆಯನ್ನು ಬಳಸಿ *theos eimi epi gēs* ("ಭೂಮಿಯ ಮೇಲೆ ನಾನು ದೇವರು") ಎಂಬ ಪದಗುಚ್ಛದೊಂದಿಗೆ ಅದೇ ರೀತಿಯ ಆಟವನ್ನು ಆಡಲಾಗುತ್ತದೆ.

ಇಷ್ಟೋತ್ತಿಗೆ, ಸ್ವಲ್ಪ ಕಲ್ಪನಾ ಚಾತುರ್ಯತೆಯಿದ್ದರೆ, ಅಂಕೆಗಳನ್ನು ಹೆಚ್ಚುಕಡಿಮೆ ಯಾವ ವ್ಯಕ್ತಿಗಾದರೂ ಮತ್ತು ಯಾವ ಸಂಗತಿಗಾದರೂ ಸರಿಹೊಂದುವಂತೆ ರಚಿಸಬಹುದೆಂಬುದು ಸ್ಪಷ್ಟವಾಗಿರುತ್ತದೆ. Frank Packನು "666" ಬಿರುದನ್ನು ಕೊಡುವದಕ್ಕೆ ನಮ್ಮ ಸ್ವಂತ ಅಭ್ಯರ್ಥಿಗಳನ್ನು ಸೂಚಿಸುವದಕ್ಕೆ ನಾಲ್ಕು ಅರೆ-ಹಾಸ್ಯದ "ನಿಯಮಗಳನ್ನು" ಹಂಚಿಕೊಳ್ಳುತ್ತಾನೆ:

1. ಅಂಕಿತನಾಮದ ಮೊತ್ತವು ಸರಿ ಹೊಂದಲಿಲ್ಲವೆಂದರೆ, ಅದಕ್ಕೊಂದು ಬಿರುದು ಸೇರ್ಪಡೆಗೊಳಿಸಿರಿ.
2. ಗ್ರಿಕ್ ಭಾಷೆಯಲ್ಲಿ ಒಟ್ಟು ಮೊತ್ತವು ಬರಲಿಲ್ಲವಾದರೆ, ಇಬ್ರಿಯ, ಲ್ಯಾಟಿನ್ ಭಾಷೆಗಳಲ್ಲಿ ಪ್ರಯತ್ನಿಸಿರಿ.
3. ಉಚ್ಚಾರಣೆ ಕುರಿತು ನಿರ್ದಿಷ್ಟತೆಯನ್ನು ಪಾಲಿಸದಿರಿ - ಅಥವಾ ಎಲ್ಲಾ ಅಕ್ಷರಗಳನ್ನೂ ಬಳಸಬೇಕೆಂದಿಲ್ಲ.
4. ನಿಮಗೆ ಬಹಳ ಕಷ್ಟಕರವೇನಿಸಿದರೆ, ಒಂದು ಹೆಸರನ್ನು ಆವಿಷ್ಕರಿಸಿರಿ.[37]

ಸುದೀರ್ಘವಾದ ತರ್ಕವನ್ನು ಮುಂದುವರೆಸುವಿಕೆಯು *reductio ad absurdum* ಎಂಬ ಲ್ಯಾಟಿನ್ ಪದದಿಂದ ಪರಿಚಿತವಾಗಿರುತ್ತದೆ: ಒಂದು ಪ್ರತಿಪಾದನೆಯನ್ನು ಅಸ್ಪಷ್ಟಗೊಳಿಸುವ ಮೂಲಕ ಅದಕ್ಕೆ ಅಸಮ್ಮತಿಯನ್ನು ತೋರುವದು. ಅದಕ್ಕೆ ಸಂಬಂಧಿಸಿರುವ ಒಂದು ತತ್ವವೆಂದರೆ ಅದು ಗಾದೆ "ವಿಪರೀತವಾಗಿ ಸಾಭಿತುಪಡಿಸುವಂಥದ್ದು ಏನನ್ನೂ ಸಾಭಿತುಗೊಳಿಸುವದಿಲ್ಲ." William Hendriksenನು ಹೀಗೆ ಬರೆದದ್ದು ಸರಿಯಾಗಿಯೇ, "[ಒಂದು] ಹೆಸರಿಗೆ ಸಂಖ್ಯಾ ಮೌಲ್ಯವನ್ನು ಸೇರ್ಪಡೆಗೊಳಿಸುವ ಮೂಲಕ ಒಂದು ವ್ಯಾಖ್ಯಾನವನ್ನು ತಲುಪಲು ಮಾಡುವ ಪ್ರಯತ್ನಗಳು *ಎಲ್ಲಿಗೂ* ನಡಿಸುವದಿಲ್ಲ ಯಾಕೆಂದರೆ ಅವುಗಳು *ಎಲ್ಲದಕ್ಕೂ* ನಡಿಸುತ್ತವೆಂಬುದೇ ಕಾರಣವಾಗಿದೆ."[38] Alan Johnsonನು ಹೀಗೆ ಬರೆದನು,

> ಇಷ್ಟು ವರ್ಷಗಳಿಂದ gematria ವಿಧಾನದಿಂದ ಸೃಷ್ಟಿಸಲ್ಪಟ್ಟಿರುವ ಬರೀ ಭಿನ್ನಾಭಿಪ್ರಾಯ ಹಾಗೂ ಗೊಂದಲವೇ ಬಹಳ ಕಾಲದ ಹಿಂದೆ ಸಭೆಯು ತಪ್ಪಾದ ದಾರಿಯಲ್ಲಿರುತ್ತದೆಂಬುದನ್ನು ಎಚ್ಚರಿಸಿರಬೇಕಾಗಿತ್ತು ... ವಿಶ್ವಾಸಿಗಳು ಮೃಗದ ಮೋಸತನವನ್ನು ಅರಿತುಕೊಳ್ಳುವದು ಮಾತ್ರವಲ್ಲದೆ ಮೃಗವನ್ನು ಮತ್ತು ಅದರ ಹಿಂಬಾಲಕರನ್ನು ಕುರಿಯಾದಾನು ಹಾಗೂ ಆತನ ಹಿಂಬಾಲಕರೊಂದಿಗೆ ವಿರುದ್ಧ ಹೋಲಿಕೆ ಮಾಡಬೇಕು (14:1ರಿಂದ ನಂತರ ವಚನಗಳು) ಎಂಬುದು ಯೋಹಾನನ ಬಯಕೆಯಾಗಿದ್ದಲ್ಲಿ, ಆತನು ವಿಫಲನಾಗಿದ್ದಾನೆಂಬುದು ಸ್ಪಷ್ಟವಾಗುತ್ತದೆ - ಅಂದರೆ, ನಾವು gematria ಆಟವನ್ನು ಆಡಬೇಕೆಂಬುದು ಆತನ ಉದ್ದೇಶವಾಗಿದ್ದಲ್ಲಿ ಆತನು ವಿಫಲನಾಗಿದ್ದಾನೆ.[39]

Martin Franzmannನು ಹೇಳಿದ್ದೇನೆಂದರೆ ಯೋಹಾನನು ಒಂದು ಒಗಟನ್ನು ಮುಂದಿಟ್ಟಿದ್ದಾದಲ್ಲಿ, "ಗೂಢಲಿಪಿಯನ್ನು ಬಿಡಿಸುವದಕ್ಕೆ ಮಾಡಿದ ಆಧುನಿಕ ಪ್ರಯತ್ನಗಳಲ್ಲಿ ಯಾವದೊಂದೂ ಮನವರಿಕೆಯುಂಟು ಮಾಡುವದಾಗಿರುವದಿಲ್ಲ."[40] ಈ ಆಲೋಚನೆಗಳನ್ನು ಪರಿಗಣಿಸಿರಿ:

1. *International Standard Bible Encyclopedia*ದಲ್ಲಿ *gematria*ದ ಕುರಿತ ಚರ್ಚೆಯಲ್ಲಿ, William Smithನು ಹೀಗೆ ಬರೆದನು, "ವಾಕ್ಯಭಾಗದಲ್ಲಿ ಒಂದೇ

ಒಂದು ಸ್ಪಷ್ಟವಾದ ಉದಾಹರಣೆಯು ಇರುತ್ತದೆ, ಅದು ಮೃಗದ ಅಂಕೆಯೇ ಮನುಷ್ಯನ ಅಂಕೆಯಾಗಿದೆ, ಅದು ಆರನೂರ ಅರವತ್ತಾರು [ಪ್ರಕಟನೆ 13:18]."[41] Smith ಮತ್ತು ಇನ್ನು ಅನೇಕರು ಪ್ರಕಟನೆ 13:18ರ ಮುಂಚಿನ ಅಂಕೆಗಳನ್ನು ಸಾಂಕೇತಿಕವಾಗಿ ಅರ್ಥನಿರೂಪಣೆ ಮಾಡತಕ್ಕದ್ದು, ಮತ್ತು ಪ್ರಕಟನೆ 13:18ರ ನಂತರದ ಅಂಕೆಗಳನ್ನು ಸಾಂಕೇತಿಕವಾಗಿ ಅರ್ಥನಿರೂಪಣೆ ಮಾಡಬೇಕು, ಆದರೆ ಅದರಲ್ಲಿ ಪವಿತ್ರಾತ್ಮನು ಒಂದು *gematria* ಆಟವನ್ನು ಆಡುತ್ತಾನೆ ಎಂದು ಹೇಳಿರುವದು ವಿಚಿತ್ರವೆಂದು ಅನ್ನಿಸುವದಿಲ್ಲವೋ? Baldingerನು ಗಮನಕ್ಕೆ ತರುವದೇನೆಂದರೆ "ಅಂತ್ಯಕಾಲಿಕ ಪುಸ್ತಕದಲ್ಲಿ ಬೇರೆ ಎಲ್ಲಿಯೂ ಲೇಖಕನು ಅಂಥ ಗಣಿತದ ಪ್ರಕ್ರಿಯೆಯ ಮೂಲಕ ಅರ್ಥವನ್ನು ಕಂಡುಕೊಳ್ಳುವದಕ್ಕೆ ಒಂದು ಸಾದೃಶ್ಯ ಅರ್ಥವನ್ನು ಕೊಡುವದಿಲ್ಲ; ಬೇರೆ ಎಲ್ಲೆಡೆಯೂ ಅಂಕೆಗಳನ್ನು ಸಾಂಕೇತಿಕವಾಗಿಯೇ ತೆಗೆದುಕೊಳ್ಳಬೇಕಾಗಿರುತ್ತದೆ."[42] ಸ್ಪಷ್ಟವಾಗಿರುವ ಪ್ರಶ್ನೆಯು ಏನೆಂದರೆ: ಸಾಮಂಜಸ್ಯತೆಯನ್ನು ಕಾಪಾಡಿಕೊಳ್ಳಲು "666" ಅಂಕೆಯು ಸಹ ಸಾಂಕೇತಿಕವಾಗಿ ತೆಗೆದುಕೊಳ್ಳಕೂಡದೋ? ಪ್ರಕಟನೆ ಪುಸ್ತಕದಲ್ಲಿ ಬೇರೆ ಎಲ್ಲಿಯೂ ಅಂಕೆಗಳನ್ನು ಒಗಟಿನಂತೆ ಕಾಣುವದಿಲ್ಲ. ಹಾಗಾದರೆ, "666" ಅಂಕೆಯನ್ನು ಮಾತ್ರವೇ ಏಕೆ ಇಲ್ಲಿ ಆ ವಿಧದಲ್ಲಿ ಅರ್ಥೈಸಬೇಕು? "ಅಂತ್ಯಕಾಲಿಕ ಪುಸ್ತಕವು ಸಂಕೇತಗಳಿಂದ ಕೂಡಿದ ಪುಸ್ತಕವಾಗಿದೆ; ಅದೊಂದು ಒಗಟಿನ ಪುಸ್ತಕವನ್ನ!"[43]

2. ಪ್ರಕಟನೆ ಪುಸ್ತಕದ ಒಟ್ಟಾರೆ ಉದ್ದೇಶವು ಸಾಂತ್ವನ ನೀಡುವದಾಗಿತ್ತು, ಆದರೆ ಒಂದು ಒಗಟನ್ನು ಮುಂದಿಡುವದರಿಂದ, ಆ ಒಗಟನ್ನು ಬಿಡಿಸುವದರಿಂದ ಒಬ್ಬನ ಹೆಸರು ಹೊರಬರುವದಾಗಿದ್ದರೂ ಸಹ ಅದರಿಂದ ಯಾವ ರೀತಿಯ ಸಾಂತ್ವನವು ಸಿಕ್ಕುವದಕ್ಕೆ ಸಾಧ್ಯವಿತ್ತು? ಯೋಹಾನನು ಆಟಗಳನ್ನು ಆಡುತ್ತಿಲ್ಲ. ಆತನ ಉದ್ದೇಶವು ಗೊಂದಲವನ್ನುಂಟು ಮಾಡುವದಾಗಿರಲಿಲ್ಲ, ಆದರೆ ಆದರಣೆಯನ್ನುಂಟು ಮಾಡುವದೇ ಆಗಿತ್ತು; ಒಂದು ಬಿಡಿಸಲಾಗದ ಕಗ್ಗಂಟನ್ನು ಮುಂದಿಡುವದಲ್ಲ, ಆದರೆ ಪ್ರೋತ್ಸಾಹವನ್ನು ನೀಡುವದೇ ಆಗಿತ್ತು.

18ನೇ ವಚನದ ಉದ್ದೇಶವು ಕ್ರೈಸ್ತರಿಗೆ ಪ್ರೋತ್ಸಾಹ ನೀಡುವದೇ ಆಗಿತ್ತೆಂಬುದನ್ನು ಎರಡು ಸುಳಿವುಗಳನ್ನು ಸನ್ನಿವೇಶವು ಕೊಡುತ್ತದೆ. ಮೊದಲನೆಯ ಸುಳಿವು ಏನೆಂದರೆ **ಅದು ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆಯಾಗಿದೆ.** ಅದು ಮೃಗದ ಅಂಕೆಯಲ್ಲ; ಅದು ಬಿಗಿಯಾಗಿರುವ ಕೆಂಪು ಉಡುಪು ಧರಿಸಿ ಕೊಂಬುಗಳನ್ನು ಮತ್ತು ಬಾಲವನ್ನು ಹೊಂದಿರುವ ಒಂದು ದೆವ್ವದ ಅಂಕೆಯಲ್ಲ; ಅದು ಒಬ್ಬ ಅತಿಮಾನುಷನೊಬ್ಬನ ಅಂಕೆ ಸಹ ಆಗಿರುವದಿಲ್ಲ; ಬದಲಾಗಿ, ಅದು "ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆ." ಗ್ರೀಕ್ ವಾಕ್ಯದಲ್ಲಿ ಯಾವದೇ ನಿರ್ದಿಷ್ಟ ಗುಣವಾಚಿ ಇರುವದಿಲ್ಲವಾದ್ದರಿಂದ, ಆ ವಾಕ್ಯವು ಹೀಗಿರಬಲ್ಲದು "ಅಂಕೆಯು ಒಬ್ಬ ಮನುಷ್ಯನದ್ದು" ಅಥವಾ "ಮಾನವಜನಾಂಗದ್ದು." NIVಯಲ್ಲಿ "ಅದು ಮನುಷ್ಯನ ಸಂಖ್ಯೆ" ಎಂದಿರುತ್ತದೆ. RSVಯಲ್ಲಿ "ಅದೊಂದು ಮನುಷ್ಯ ಅಂಕೆಯಾಗಿದೆ" ಎಂದಿರುತ್ತದೆ. ಪ್ರಕಟನೆ ಪುಸ್ತಕದೊಳಗೆ ಬೇರೊಂದು ಕಡೆಯಲ್ಲಿ, ಅದೇ ಮಾತು "ಮನುಷ್ಯನ" ಎಂದು ಅನುವಾದಿಸಲ್ಪಟ್ಟಿರುತ್ತದೆ (21:17). ಈ ಪದಗುಚ್ಛವು ಗಲಾತ್ಯ 1:11; 3:15 ಮತ್ತು ಇತರ ವಾಕ್ಯಭಾಗಗಳಲ್ಲಿ "ಒಟ್ಟಾರೆ ಮಾನವಜನಾಂಗ" ಸೂಚಿಸಲು ಬಳಸಲ್ಪಟ್ಟಿರುತ್ತದೆ. ಯೋಹಾನನು "ಇದೊಂದು ನಿರ್ದಿಷ್ಟವಾದ ಮನುಷ್ಯನನ್ನು ಸೂಚಿಸುವ ಅಂಕೆ" ಎಂಬ ಅರ್ಥದಲ್ಲಿ ಹೇಳಲಿಲ್ಲ; ಆತನ ಅರ್ಥವು, "ಅದು ಮನುಷ್ಯನನ್ನು ಸರಿಯಾಗಿ ಸೂಚಿಸುವ ಅಂಕೆಯಾಗಿದೆ" ಎಂದಾಗಿತ್ತು."[44] ಸರಳವಾಗಿ ಹೇಳುವದಾದರೆ, ಮೃಗದ ಅಂಕೆಯು ಒಂದು ದೇವರ ಅಥವಾ ಒಬ್ಬ ಅತಿಮಾನುಷ ವ್ಯಕ್ತಿಯ ಅಂಕೆ ಸಹ ಆಗಿರಲಿಲ್ಲ. ಅದು ಕೇವಲ ಒಬ್ಬ *ಮನುಷ್ಯನ* ಅಂಕೆಯಾಗಿತ್ತು. ಯಾವ ಏಕ ವ್ಯಕ್ತಿ ಅಥವಾ

ಮನುಷ್ಯರ ಗುಂಪು ಸಹ, ಅವರು ಎಷ್ಟೇ ಶಕ್ತಿಶಾಲಿಗಳಾಗಿದ್ದರೂ ಸರಿಯೇ, ಸರ್ವಶಕ್ತ ದೇವರ ಮುಂದೆ ನಿಲ್ಲಲು ಸಾಧ್ಯವಿಲ್ಲ (ನೋಡಿರಿ 2 ಪೂರ್ವಕಾಲವೃತ್ತಾಂತ 20:6)!

ಎರಡನೆಯ ಸುಳಿವು ಮೃಗಕ್ಕೆ ಕೊಡಲ್ಪಟ್ಟಿರುವ ಅಂಕೆ: “666.” 13:18ರಲ್ಲಿ “ಎಣಿಸಲಿ” ಎಂಬುದು ಗಣಿತದ ಪ್ರಕ್ರಿಯೆಯನ್ನು ಸೂಚಿಸುತ್ತದೆಂಬದು ನಿಜವೇ, ಆದರೆ ಅದು ಆ ಅರ್ಥವನ್ನೇ ಹೊಂದಿರಬೇಕೆಂಬ ಅವಶ್ಯಕತೆಯಿಲ್ಲ. “ಎಣಿಸಲಿ” ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು ψηφίζω (*psēphizō*). ಈ ಕ್ರಿಯಾಪದವು ψῆφος (*psēphos*) ಎಂಬ ನಾಮಪದಕ್ಕೆ ಸಂಬಂಧಿಸಿದ್ದಾಗಿದೆ, ಇದು ಸಣ್ಣ ಸಮೆಕಲ್ಲು ಅಥವಾ ಚಿಕ್ಕ ಬಂಡೆ ಎಂದರ್ಥವನ್ನು ಕೊಡುವ ಪದವಾಗಿದೆ (ನೋಡಿರಿ ಪ್ರಕಟನೆ 2:17). *Psēphizō* ಎಂಬ ಪದವು ಲೆಕ್ಕ ಮಾಡುವದಕ್ಕೆ ಸಹಾಯವಾಗಿ ಚಿಕ್ಕ ಕಲ್ಲುಗಳನ್ನು ಬಳಸುತ್ತಿದ್ದ ಪ್ರಾಚೀನ ಪದ್ಧತಿಯಿಂದ ಬಂದದ್ದಾಗಿದೆ. ಲೂಕ 14:28ರಲ್ಲಿ ಬಳಸಲ್ಪಟ್ಟಿರುವ ಪದವು ಒಬ್ಬ ಕಟ್ಟುವವನು ತಾನು ಕಟ್ಟಡದ ಕೆಲಸವನ್ನು ಆರಂಭಿಸುವದಕ್ಕೆ ಮುನ್ನ ಬೇಕಾಗುವ ಸಂಪನ್ಮೂಲಗಳನ್ನು ಹೊಂದಿರುವದನ್ನು ಖಾತ್ರಿಪಡಿಸಿಕೊಳ್ಳುವ ರೀತಿಯನ್ನು ಸೂಚಿಸುತ್ತದೆ. ಆಂಗ್ಲದ “ಎಣಿಸು” ಎಂಬ ಪದದ ರೀತಿಯಲ್ಲಿಯೇ, *psēphizō* ಎಂಬ ಪದವು ಸಹ “ಪರಿಗಣಿಸಿಕೋ”[45] ಅಥವಾ “ನಿರ್ಧರಿಸಿಕೋ”[46] ಎಂದು ಸಹ ಅರ್ಥವಾಗಬಲ್ಲದು. ನಾವು ಅಧ್ಯಯನ ಮಾಡುತ್ತಿರುವ ವಚನಗಳೊಳಗೆ, ಅನೇಕ ತರ್ಜುಮೆಗಳು “ಎಣಿಸು” ಎಂಬ ಪದವನ್ನು ಹೊಂದಿರುತ್ತವೆ (NASB, NIV, NKJV), ಆದರೆ RSVಯು “ಪರಿಗಣಿಸು” ಎಂಬ ಪದವನ್ನ ಬಳಸಿರುತ್ತದೆ. NEBಯಲ್ಲಿ “ಸಾಧಿಸಿಕೊಳ್ಳಿರಿ” ಎಂದಿದ್ದರೆ NCVಯಲ್ಲಿ “ಇದರ ಅರ್ಥವನ್ನು ಕಂಡು ಹಿಡಿಯಿರಿ” ಎಂದಿರುತ್ತದೆ. *Psēphizō* ಎಂಬದರಲ್ಲಿರುವ ಯಾವದೂ ಅಥವಾ 13:18ರಲ್ಲಿರುವ ಸನ್ನಿವೇಶವಾಗಲಿ ಸಹ ಜಾಗರೂಕತೆಯಿಂದ ಆಲೋಚಿಸಿ ಒಂದು ನಿರ್ಧಾರಕ್ಕೆ ಬರಬೇಕೆಂಬ ವಿಚಾರವನ್ನು ಆ ವಚನವು ಒಳಗೊಂಡಿರುತ್ತದೆಂಬ ಪ್ರತಿರೋಧಿಸುವದಿಲ್ಲ.

ಗೂಢಲಿಪಿಯಾದ 666ರ ವಿಷಯದಲ್ಲಿ ಯಾವ ನಿರ್ಧಾರಕ್ಕೆ ಬರತಕ್ಕದ್ದು? ಆದಿ ಕ್ರೈಸ್ತರಿಗೆ ಈ ಸಂಖ್ಯೆಯಲ್ಲಿ ಯಾವ ಆದರಣೆಯು ಸಿಕ್ಕಿರುವದಕ್ಕೆ ಸಾಧ್ಯವಿರುತ್ತದೆ? “ಆರು” ಅಂಕೆಯ ಮೂಲಭೂತವಾದ ಸಾಂಕೇತಿಕ ಅರ್ಥದೊಂದಿಗೆ ಆರಂಭಿಸಿರಿ. “ಆರು” ಒಂದು ಕಡಿಮೆ ಏಳು ಆಗಿರುವದರಿಂದ ಮತ್ತು “ಏಳು” ಪರಿಪೂರ್ಣತೆಯನ್ನು ಸೂಚಿಸುತ್ತದಾದ್ದರಿಂದ, “ಆರು” ದೋಷವುಳ್ಳದ್ದನ್ನು ಅಥವಾ ಕೆಟ್ಟದ್ದನ್ನು ಸೂಚಿಸುವದಾಗಿದೆ. ಪುನಃ, ಆರು ಹೆಚ್ಚುಕಡಿಮೆ ಏಳು ಆಗಿರುವದರಿಂದ, “ಆರು” ಎಂದು ಹೇಳಿದರೆ ಅದು ಮೋಸತನವನ್ನು ಸೂಚಿಸುತ್ತದೆ. ಅಂತಿಮವಾಗಿ, “ಆರು” ಅಂಕೆಯು ಸೋಲನ್ನು ಮುಂತಿಳಿಸುವಿಕೆಗಾಗಿ ಬಳಸಲ್ಪಟ್ಟಿರುತ್ತದೆ - ಯಾಕೆಂದರೆ, ಅದಿ “ಏಳು” ಆಗಬೇಕೆಂದು ಎಷ್ಟೇ ಆಶೆ ಪಟ್ಟಾಗ್ಯೂ, “ಆರು” ಯಾವಾಗಲೂ “ಆರು” ಮಾತ್ರವೇ ಆಗಿರುವದು.

ಆ ಭಾವಗಳನ್ನು ಪುನರಾವರ್ತಿಸುವ ಮೂಲಕ ತೀಕ್ಷ್ಣಗೊಳಿಸುವವರಾಗಿ, ನಾವು “666”ರ ಕಡೆಗೆ ಬಂದು ತಲುಪುತ್ತೇವೆ. ಬೈಬಲಾಧಾರಿತವಾಗಿ, ಒಂದು ಸಂಗತಿಯನ್ನು ಮೂರು ಸಾರಿ ಪುನರಾವರ್ತಿಸಿದರೆ ಅದನ್ನು ಅದರ ಅತ್ಯಂಥ ಎತ್ತರದ ಶಕ್ತಿಗೆ ಏರಿಸಿದಂತಾಗುತ್ತದೆ. Mulholland observedನು ಗಮನಕ್ಕೆ ತಂದದ್ದೇನೆಂದರೆ, “ದರ್ಶನದಲ್ಲಿ ಮೂರು ಮೂಕ್ಕೂಟಗಳಿರುತ್ತವೆ: ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು (4:8); ಅಯ್ಯೋ, ಅಯ್ಯೋ, ಅಯ್ಯೋ (8:13); ಮತ್ತು ಆರು, ಆರು, ಆರು (13:18) ... ಆದದರಿಂದ ಮೃಗದ ಸ್ವಭಾವವು ‘ಪರಿಪೂರ್ಣ’ (ಮುಪ್ಪಟ್ಟು) ಅಪರಿಪೂರ್ಣವಾದದ್ದು (ಆರುಗಳು).”[47] Baldingerನು ಇದನ್ನು ಸಂಕ್ಷೇಪವಾಗಿ ತಿಳಿಸುತ್ತಾನೆ: “ಆರು! ಆರು! ಆರು! ಇದು ಭಯ ಹುಟ್ಟಿಸುವ ವಿನಾಶದ ಒಂದು

ಘನಗಾಂಭೀರ್ಯವಾದ ತೀರ್ಪು ಘೋಷಿಸುವಿಕೆ ರೀತಿ ಅನ್ವಿಸುತ್ತದೆ."[48] ಮೂರು "ಆರುಗಳು" ಕೆಟ್ಟತನ ಹಾಗೂ ಮೋಸತನದ ಸಾರವನ್ನು ಪ್ರತಿನಿಧಿಸುತ್ತದೆ, ಆದರೆ "ಇರದಲ್ಲಿ ಜ್ಞಾನವು ಅಡಕವಾಗಿದೆ": ಅದು *ಸೋಲಿನ* ಸಾರ ಸಹ ಆಗಿರುತ್ತದೆ! ಅಂತ್ಯದಲ್ಲಿ, "666" "ಸೋಲಿನ ಮೇಲೆ ಸೋಲಿನ ಮೇಲೆ ಸೋಲು" ಎಂಬುದನ್ನು ಪ್ರತಿನಿಧಿಸುತ್ತದೆ.[49]

ಇದೆಲ್ಲವೂ ಆದಿ ಕ್ರೈಸ್ತರಿಗೆ ಯಾವ ಅರ್ಥವನ್ನು ಹೊಂದಿತ್ತು? ರೋಮನ್ ಸಾಮ್ರಾಜ್ಯವು ಅಷ್ಟೊಂದು ಭಯಾನಕವಾದದ್ದಾಗಿದ್ದು, ಚಕ್ರವರ್ತಿಯ ಆರಾಧನೆಯನ್ನು ಜಾರಿಗೆ ತಂದ ಅಧಿಕಾರಿಗಳು *ಸೋಲಿಗಾಗಿ*ಯೇ ನೇಮಿಸಲ್ಪಟ್ಟಿದ್ದ ವ್ಯವಸ್ಥೆಯೊಂದನ್ನು ಪ್ರತಿನಿಧಿಸುತ್ತಿದ್ದರು. ಇಂದು ಅದೇ ಅನ್ವಯಿಸುವಿಕೆಯನ್ನು ಮಾಡಬಹುದಾಗಿದೆ: ಕರ್ತನನ್ನು ವಿರೋಧಿಸುವ ಯಾವ ವ್ಯಕ್ತಿಯಾಗಲಿ ಅಥವಾ ಸಂಗತಿಯಾಗಲಿ ಅಂತಿಮವಾಗಿ ಸೋಲು ಅನುಭವಿಸುವದು. ದೇವರು ಅದನ್ನು ಖಾತ್ರಿಪಡಿಸಿದ್ದಾನೆ, ಒಂದು ಸಾರಿ ಅಲ್ಲ, ಆದರೆ ಮೂರು ಸಾರಿ! ಹೀಗಿರುವದರಿಂದ Homer Haileyನು ಹೀಗೆ ಬರೆದನು,

> ... ಮೃಗದ ಅಂಕೆಯಾದ, ಆರು-ಆರು-ಆರು, ದೇವರಿಗೆ ಮತ್ತು ಆತನ ಕ್ರಿಸ್ತನಿಗೆ ವಿರುದ್ಧವಾಗಿರುವ ಸಕಲ ಮಾನವ ವ್ಯವಸ್ಥೆಗಳು ಹಾಗೂ ಪ್ರಯತ್ನಗಳ ಸಂಪೂರ್ಣ ಸೋಲನ್ನು ಪ್ರತಿನಿಧಿಸುತ್ತದೆ - ಎಲ್ಲರೂ ಅಂತಿಮ ಮತ್ತು ಸಂಪೂರ್ಣವಾದ ಸೋಲು ಹಾಗೂ ವಿಫಲತೆಯನ್ನು ಹೊಂದುವರು ಖಚಿತವಾಗಿರುತ್ತದೆ. ಈ ವಿವರಣೆಯು ಪ್ರಕಟನೆ ಪುಸ್ತಕದ ಚರ್ಚೆಯಾಂಶ ಹಾಗೂ ಉದ್ದೇಶದೊಂದಿಗೆ ಸಾಮರಸ್ಯದಿಂದಿರುತ್ತದೆ.[50]

666 ಅಂಕೆಯು ತಾನು ಏನನ್ನು ನೆರವೇರಿಸುವದಕ್ಕೆ ಸಾಧ್ಯವಿಲ್ಲವೋ ಅದನ್ನೇ ಸೈತಾನನು ವಾಗ್ದಾನ ಮಾಡುತ್ತಾನೆಂಬುದನ್ನು ಸ್ಪಷ್ಟವಾಗಿ ಸಾರುವದಾಗಿದೆ. ಸುಳ್ಳು ಪ್ರವಾದಿಯು ನೋಡುವದಕ್ಕೆ ಕುರಿಯಂತೆ ಕಾಣಿಸಬಹುದು, ಮತ್ತು ಕುರಿಯಾದಾತನು ತನ್ನ ಮುದ್ರೆಯನ್ನು ಅನುಗ್ರಹಿಸಿದ ಪ್ರಕಾರವೇ ಈತನು ತನ್ನ ಗುರುತನ್ನು ವಿತರಿಸಬಹುದು. ಹೇಗೂ, ಅಂತ್ಯದಲ್ಲಿ, ಆತನಂತೂ ಕುರಿಯಾದಾತನು ಅಲ್ಲವೇ *ಅಲ್ಲ.* ಅಂತ್ಯದಲ್ಲಿ, ಆತನ ಗುರುತು ಕೇವಲ ಒಂದು ಗುರುತು ಅಷ್ಟೇ. ಅಂತ್ಯದಲ್ಲಿ, ಆತನನ್ನು ಹಿಂಬಾಲಿಸುವವರು ಭದ್ರತೆಯಿಲ್ಲದವರಾಗಿ ನಿತ್ಯತ್ವದೊಳಗೆ ಸಾಗುವರು.

ಇದರಲ್ಲಿ ಆದರಣೆ ಉಂಟು; ಇದರಲ್ಲಿ ಬಲವು ಅಡಕವಾಗಿದೆ; "ಇದರಲ್ಲಿ ಜ್ಞಾನವು ಅಡಕವಾಗಿದೆ" (13:18).

# ಅನ್ವಯಿಸುವಿಕೆ

## ಸೈತಾನನು ತನ್ನ ಕೆಲಸವನ್ನು ಮುಂದುವರೆಸಿರುತ್ತಾನೆ (ಅಧ್ಯಾಯ 13)

ರೋಮನ್ ಸಾಮ್ರಾಜ್ಯವು ಗತಿಸಿ ಹೋಗಿ ಬಹಳ ಕಾಲವಾಗಿರುತ್ತದೆ. ಒಬ್ಬ ಪ್ರವಾಸಿಯು ಯೂರೋಪಿನ ಅನೇಕ ಭಾಗಗಳಲ್ಲಿ ಆ ಪ್ರಾಚೀನ ನಾಗರೀಕತೆಯ ಅವಶೇಷಗಳ ಮಧ್ಯದಲ್ಲಿ ನಡೆದಾಡಬಹುದು. ಆ ಸಾಮ್ರಾಜ್ಯದ ಮಹಿಮೆಯು ಮರೆಯಾಗಿ ಹೋಗಿದೆ; ಅದು ಈಗ ಇಲ್ಲವೇ ಇಲ್ಲ - ಆದರೆ ಅದರರ್ಥವು 13 ನೇ ಅಧ್ಯಾಯವು ಇಂದು ಕ್ರೈಸ್ತರಿಗೆ ಯಾವ ಅನ್ವಯಿಕೆಯನ್ನು ಹೊಂದಿಲ್ಲ ಎಂದಲ್ಲ. 9ನೇ ವಚನವು ಈ ವಾಕ್ಯಭಾಗವು "ಕಿವಿಯುಳ್ಳವನಿಗೆ [ಗೋಸ್ಕರ]" ಸಂಬೋಧಿಸಲ್ಪಟ್ಟಿದೆ ಎಂಬುದನ್ನು ನಮಗೆ ತಿಳಿಸುತ್ತದೆ. ಸೈತಾನನು ತನ್ನ ಉದ್ದೇಶವನ್ನು ಮುನ್ನಡೆಸಲು ಹೆದರಿಸುವಿಕೆಯನ್ನು ಬಳಸುವದು ಆತನು ರೋಮನ್ ಸಾಮ್ರಾಜ್ಯವನ್ನು ಕೈಚಳಕದಿಂದ ಬಳಸಿಕೊಳ್ಳುವದಕ್ಕೆ ಮಾತ್ರವೇ ಸೀಮಿತವಾಗಿರಲಿಲ್ಲ. 11ನೇ

ಅಧ್ಯಾಯದಲ್ಲಿ, "ಅಧೋಲೋಕದಿಂದ ಬರುವ" ಎಂಬ ಬಣ್ಣನೆಯ ಪದಗುಚ್ಛದಲ್ಲಿ ವರ್ತಮಾನಮಾಕ ರೂಪವು ಬಳಸಲ್ಪಟ್ಟಿದೆ - ಮೃಗವು *ನಿರಂತರವಾಗಿ* ಅಧೋಲೋಕದಿಂದ ಬರುತ್ತಲಿರುತ್ತದೆ ಎಂಬುದನ್ನು ಸೂಚಿಸುತ್ತದೆ (11:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮೃಗವು ಒಂದು ಪ್ರಸ್ತುತ ತೋರ್ಪಡಿಸಿಕೊಳ್ಳುವಿಕೆಯನ್ನು (ರೋಮನ್ ಸಾಮ್ರಾಜ್ಯ) ಹೊಂದಿದ್ದಾಗ್ಯೂ, ಅದು ಅದಕ್ಕಿಂತಲೂ ಅಧಿಕವಾದದ್ದನ್ನು ಒಳಗೊಂಡಿತ್ತು. 13:1ರಲ್ಲಿ ಸಹ ವರ್ತಮಾನಕಾಲರೂಪ ಪದವು ಬಳಸಲ್ಪಟ್ಟಿದ್ದು ಅಲ್ಲಿ "ಸಮುದ್ರದಿಂದ ಮೃಗವು ಏರಿಬರುವದನ್ನು" ಎಂದು ಬಣ್ಣಿಸಲಾಗಿದೆ. ಯಾವದಾದರೂ ಒಂದು ಶಕ್ತಿಯು ಸಭೆಯನ್ನು ತಡೆಗಟ್ಟುವದಕ್ಕೆ ಪ್ರಯತ್ನಿಸುತ್ತಲೇ ಇರುವಂತೆ ಯಾವಾಗಲೂ ಖಾತ್ರಿಪಡಿಸಿಕೊಳ್ಳುವನು. ಈ ದಿನ ಸಹ, ಕೆಲವರು ಧಾರ್ಮಿಕ ಸ್ವಾತಂತ್ರ್ಯವನ್ನು ಸರ್ಕಾರಗಳು ಹತ್ತಿಕ್ಕುವ ದೇಶಗಳಲ್ಲಿ ವಾಸಿಸುತ್ತಾರೆ. ಇನ್ನು ಕೆಲವರು ಅವರ ಮೋಸಕರವಾದ ವ್ಯಾಪಾರದೊಂದಿಗೆ ಹೊಂದಿಕೊಂಡು ಹೋಗದಿದ್ದರೆ ಕೆಲಸಗಳಿಂದ ಕಿತ್ತು ಹಾಕುವಂಥ ಅಪ್ರಾಮಾಣಿಕರಾದ ದಣಿಗಳನ್ನು ಹೊಂದಿದ್ದಾರೆ. ಇನ್ನು ಕೆಲವರಿಗೆ ತಾವು ಬೈಬಲಿನ ಕ್ರೈಸ್ತತ್ವವನ್ನು ಅಂಗೀಕರಿಸಿಕೊಂಡರೆ ತಮ್ಮರೆಂದು ತಿರಸ್ಕರಿಸುವದಾಗಿ ಬೆದರಿಸುವ ಕುಟುಂಬಗಳಿರುತ್ತವೆ. ಹೆದರಿಸುವಿಕೆಯು ಈಗಲೂ ಸೈತಾನನ ಬತ್ತಳಿಕೆಯಲ್ಲಿರುವ ಒಂದು ಪ್ರಾಮುಖ್ಯವಾದ ಆಯುಧವಾಗಿರುತ್ತದೆ. "ಕಿವಿಯುಳ್ಳವನು ಕೇಳಲಿ" (13:9).

## ಸಮುದ್ರದ ಮೃಗ (13:1-10)

ಸಮುದ್ರದ ಮೃಗದ ಕುರಿತು ಒಂದು ಸಂದೇಶವನ್ನು ಅಭಿವೃದ್ಧಿಪಡಿಸಿಕೊಳ್ಳುವದರಲ್ಲಿ (ವಚನಗಳು 1-10), ನೀವು Warren Wiersbeನು ಮಾಡಿದ ವಿಭಾಗಗಳನ್ನು ಬಳಸಿಕೊಳ್ಳಲು ಇಚ್ಛಿಸಬಹುದು: (1) ಅಚ್ಚರಿ (ವ. 3); (2) ಆರಾಧನೆ (ವ. 4); (3) ಮಾತುಗಳು (ವಚನಗಳು 5, 6); (4) ಯುದ್ಧ (ವಚನಗಳು 7-10).[51] Charles Ryrieನು ಈ ಮುಖ್ಯ ಪದಗಳನ್ನು ಬೇರೊಂದು ವಿಧದಲ್ಲಿ ಬಳಸುತ್ತಾನೆ: (1) ಚಹರೆ (ವಚನಗಳು 1, 2); (2) ಉದ್ಘೋಷ (ವಚನಗಳು 3, 4); (3) ಚಟುವಟಿಕೆ (ವಚನಗಳು 5-7); (4) ಅಧಿಕಾರ (ವಚನಗಳು 7-10).[52]

## ಸೈತಾನನ ಬೆದರಿಸುವಿಕೆ (13:1-10)

ಒತ್ತಡವನ್ನು ಎದುರಿಸುವದು ಕಷ್ಟಕರವಾಗಿರುತ್ತದೆ, ಇತರರು ನಿಮ್ಮೊಂದಿಗೆ ಬೆಂಬಲವಾಗಿ ನಿಂತಾಗ್ಯೂ ಅದು ಕಷ್ಟಕರ. ಜನಸಮೂಹವು ನಿಮಗೆ ವಿರುದ್ಧವಾಗಿ ನಿಂತಾಗಲಂತೂ ಅದು ಎರಡರಷ್ಟು ಕಷ್ಟಕರವಾಗಿರುತ್ತದೆ. ಯೇಸು ಒಮ್ಮೆ ಹೇಳಿದ್ದೇನೆಂದರೆ ಬಹುಜನರು "ನಾಶನಕ್ಕೆ ನಡಿಸುವ" "ಅಗಲವಾದ" ದಾರಿಯಲ್ಲಿದ್ದಾರೆ (ಮತ್ತಾಯ 7:13). ಆತನ ಹೇಳಿಕೆಯು ಎಷ್ಟು ನಿಖರವಾದದ್ದೆಂಬುದನ್ನು ಪ್ರಕಟನೆ 13ನೇ ಅಧ್ಯಾಯವು ದೃಢಪಡಿಸುತ್ತದೆ: "*ಭೂಲೋಕದವರೆಲ್ಲರು* ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು ... ಭೂನಿವಾಸಿಗಳೆಲ್ಲರೂ ಅದಕ್ಕೆ ನಮಸ್ಕಾರ ಮಾಡಿದರು" (ವಚನಗಳು 3, 8; ಒತ್ತಿ ಹೇಳಿದ್ದು ನನ್ನದು).

ಲೋಕದ ಮೇಲೆ ಪ್ರಭಾವವನ್ನು ಬೀರುವದಕ್ಕೆ ಸೈತಾನನು ಅನೇಕ ಆಯುಧಗಳನ್ನು ಬಳಸುತ್ತಾನೆ: ಬೆದರಿಸುವಿಕೆ (ವಚನಗಳು 1, 2); ಶಕ್ತಿ (ವಚನಗಳು 1, 2, 4, 7), ಮತ್ತು ಜೊತೆಯವರ ಒತ್ತಡ (ವಚನಗಳು 3, 4, 8). ಹೇಗೂ, ಸೈತಾನನು ಮಿತಿಯುಳ್ಳವನು (ವಚನಗಳು 5, 7) ಮತ್ತು ಅಂತ್ಯದಲ್ಲಿ ಆತನು ಸೋಲುವನು (ವಚನಗಳು 9, 10).

ಸೈತಾನನು ಈ ದಿನವೂ ಹೆದರಿಸುವಿಕೆ ಹಾಗೂ ಒತ್ತಡ ಆಯುಧಗಳನ್ನು ತನ್ನ ಉದ್ದೇಶಗಳಿಗೆ ಸರಿಹೊಂದುವಂತೆ ಬಳಸಿಕೊಳ್ಳುತ್ತಾನೆ. ಸೈತಾನನು ತನ್ನ ಚಿತ್ತಕ್ಕೆ ಒಳಪಡುವಂತೆ ನಿಮ್ಮನ್ನು ಒತ್ತಾಯಿಸುವದನ್ನು ಕಂಡರೆ ಆಶ್ಚರ್ಯಪಡಬೇಡಿರಿ. ಅಲ್ಲದೆ ಸೈತಾನನು ತನ್ನ ಚಿತ್ತದಂತೆ ನಮ್ಮನ್ನು ರೂಪಿಸುವದಕ್ಕೆ ನಮ್ಮ ಸಂಗಡಿಗರಿಂದ ಒತ್ತಡವನ್ನು ಹಾಕಿಸುತ್ತಾನೆ. ನಾವು ಈಗಲೂ "ಎಲ್ಲರೂ ಅದನ್ನು ಮಾಡುತ್ತಾರೆ!" ಎಂಬ ಸಂಘಟಿಸುವ ಕೂಗನ್ನು ಕೇಳಿಸಿಕೊಳ್ಳುತ್ತೇವೆ. ಕಾಲದಿಂದ ಕಾಲಕ್ಕೆ ಎರಡು ದಾರಿಗಳ ಕುರಿತಾಗಿ ನಮ್ಮನ್ನು ಜ್ಞಾಪಿಸಿಕೊಳ್ಳುವದು ಪ್ರಾಮುಖ್ಯವಾಗಿರುತ್ತದೆ - ಮತ್ತು ಜನರ ಗುಂಪು "ನಾಶನಕ್ಕೆ ನಡಿಸುವ" ಅಗಲವಾದ ದಾರಿಯಲ್ಲಿದ್ದರೆ, ಕೆಲವೇ ಕೆಲವರು "ಜೀವಕ್ಕೆ ನಡಿಸುವ" ದಾರಿಯಲ್ಲಿರುತ್ತಾರೆ ಎಂಬದೆ (ಮತ್ತಾಯ 7:13, 14). ವಿಮೋಚನಕಾಂಡ 23:2ನೇ ವಚನವು ಈ ದಿನವೂ ಅನ್ವಯವಾಗುತ್ತದೆ: "ದುಷ್ಕಾರ್ಯವನ್ನು ಮಾಡುವವರು ಬಹು ಮಂದಿ ಆದಾಗ್ಯೂ ಅವರ ಜೊತೆಯಲ್ಲಿ ಸೇರಬಾರದು."

ನಿಮ್ಮ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿರುವದಾದರೆ, ನೀವು ನಿಮಗೆ ಎದುರಾಗುವ ಘೋರವಾದ ದಿನಗಳಲ್ಲಿ ಯಶಸ್ವಿಯಾಗಿ ಹಾದು ಬರಬಲ್ಲಿರಿ. ಸೈತಾನ ಹಾಗೂ ಆತನ ಮಧ್ಯವರ್ತಿಗಳು ನಿಮ್ಮನ್ನು ಪೀಡಿಸಬಹುದು - ನಿಮ್ಮನ್ನು ಕೊಲ್ಲಲೂ ಬಹುದು - ಆದರೆ ನಿಮಗೊಂದು ಮಹಿಮೆಯ ನಿವಾಸ ಇರುತ್ತೆಂದು ಬಲ್ಲಿರಿ. ನಿಮ್ಮ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪ*ಟ್ಟಿಲ್ಲ*ದಾದರೆ, ನೀವು ಹೆಚ್ಚು ಎಂದರೆ ಕೆಲವು ಕ್ಷಣೀಕ ಸುಖಭೋಗದ ದಿನಗಳ ಬಳಿಕ ಒಂದು ನೋವು ಹಾಗೂ ಹತಾಶೆಯಿಂದ ಕೂಡಿದ ನಿತ್ಯತ್ವವೊಂದನ್ನು ಎದುರು ನೋಡಬಹುದು. ನಿಮ್ಮ ಆತ್ಮದ ಅಗತ್ಯತೆಗಳನ್ನು ಸಂಧಿಸುವದಕ್ಕೆ ಸಂಕೋಚ ಪಡಬೇಡಿರಿ.

## ಸೈತಾನನ ಮೋಸತನ (13:1-10)

ಸೈತಾನನು ಮೋಸತನದ ಮೂಲಕವಾಗಿ ಕ್ರೈಸ್ತರನ್ನು ನಾಶಗೊಳಿಸಲು ಪ್ರಯತ್ನಿಸುತ್ತಾನೆ. 12ನೇ ಅಧ್ಯಾಯದಲ್ಲಿ ಕೆಂಪಾದ ಘಟಸರ್ಪನು "ಭೂಲೋಕದವರನ್ನೆಲ್ಲಾ *ಮರುಳುಗೊಳಿಸುವ* ... ಸೈತಾನ" ಎಂದು ಗುರುತಿಸಲ್ಪಟ್ಟಿದ್ದಾನೆ (12:9; ಒತ್ತಿ ಹೇಳಿದ್ದು ನನ್ನದು; ನೋಡಿರಿ 20:10). ಏದೆನ್ ತೋಟದಲ್ಲಿ, ಸೈತಾನನು (ಸರ್ಪನು) ಹವ್ವಳನ್ನು ವಂಚಿಸಿದನು (ಆದಿಕಾಂಡ 3:13), ಮತ್ತು ಅಂದಿನಿಂದಲೂ ಆತನು ಮಾನವರನ್ನು ವಂಚಿಸುತ್ತಲೇ ಇದ್ದಾನೆ. ಪೌಲನು ಹೀಗೆ ಬರೆದನು, "ಆದರೆ ಹೇಗೆ ಹವ್ವಳು ಸರ್ಪದ ಕುಯುಕ್ತಿಗೆ ಒಳಬಿದ್ದು ಮೋಸಹೋದಳೋ ಹಾಗೆಯೇ ನಿಮ್ಮ ಮನಸ್ಸು ಕ್ರಿಸ್ತನ ವಿಷಯದಲ್ಲಿರಬೇಕಾದ ಯಥಾರ್ಥತ್ವವನ್ನೂ ಪಾತಿವ್ರತ್ಯವನ್ನೂ ಬಿಟ್ಟು ಕೆಟ್ಟುಹೋದೀತೆಂದು ನನಗೆ ಭಯವುಂಟು" (2 ಕೊರಿಂಥ 11:3). ಬೈಬಲ್ ನಿರಂತರವಾಗಿ ಕ್ರೈಸ್ತರನ್ನು ಎಚ್ಚರಿಸುತ್ತಲೇ ಇರುತ್ತದೆ, "ಮೋಸಹೋಗಬೇಡಿರಿ" (1 ಕೊರಿಂಥ 6:9; 15:33; ಗಲಾತ್ಯ 6:7; ಯಾಕೋಬ 1:16; ನೋಡಿರಿ ಧರ್ಮೋಪದೇಶಕಾಂಡ 11:16).

ನಿಶ್ಚಯವಾಗಿಯೂ, ಅಂಥ ವಂಚನೆಯು ಹಳೇ ದಿನಗಳಲ್ಲಿ ಮಾತ್ರವೇ ಇತ್ತು ಎಂದು ನೀವು ಹೇಳಬಹುದಾಗಿದೆ. ಈ "ಜ್ಞಾನೋದಯ" ದಿನಗಳಲ್ಲಿ, ಅಂಥ ಸ್ಪಷ್ಟವಾಗಿರುವ ತಂತ್ರಗಳಿಗೆ ಯಾವನೂ ಬಲಿಯಾಗುವದಿಲ್ಲ. ಇದು ಸತ್ಯವಾಗಿದ್ದರೆ ಎಷ್ಟು ಚೆನ್ನಾಗಿರುತ್ತೆಂದು ನಾವು ಹಾರೈಸುತ್ತೇವೆ, ಆದರೆ ಅದು ಸತ್ಯವಲ್ಲ. Phineas Taylor Barnum (1810-91), ಅಮೆರಿಕದ ಒಬ್ಬ ಅತ್ಯಾಡಂಬರದ ಸರ್ಕಸ್ ವ್ಯವಸ್ಥಾಪಕನಾಗಿದ್ದು, ಬಹುಶಃ Barnum ಮತ್ತು Bailey ಸರ್ಕಸ್ ಪಾತ್ರಕ್ಕೆ ಹೆಚ್ಚು ಖ್ಯಾತನಾಗಿರುವ ವ್ಯಕ್ತಿಯಾಗಿದ್ದು, ಆತನು ಸತ್ಯವನ್ನು

ನುಡಿಯುವವನಾಗಿ ಹೀಗೆ ಹೇಳಿದ್ದನು, "ಪ್ರತಿ ಕ್ಷಣಕ್ಕೂ ಒಬ್ಬ ಸುಲಭವಾಗಿ ಮೋಸಹೋಗುವವನು ಹುಟ್ಟಿಕೊಳ್ಳುತ್ತಾನೆ." ಬೇರೆಯವರು ಮೂರ್ಖತನವನ್ನು ಹೇಗೆ ಸತ್ಯವೆಂದು ಅಂಗೀಕರಿಸಿಕೊಳ್ಳುತ್ತಾರೆಂಬುದಕ್ಕೆ ನಾವು ಆಶ್ಚರ್ಯಪಡುವದನ್ನು ಎಂದಿಗೂ ನಿಲ್ಲಿಸುವದೇ ಇಲ್ಲ.

ಇಂದು ವಿಶೇಷ ಶಕ್ತಿಯೆಂದು ಹೇಳಿಕೊಳ್ಳುವವರಿಂದ ಜನರು ಹೇಗೆ ವಂಚನೆಗೊಳಗಾಗುತ್ತಾರೆಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಉದಾಹರಣೆಗೆ, ಅನೇಕರು ತಾವು ಈಗಷ್ಟೇ ಸಂಧಿಸಿದ ವ್ಯಕ್ತಿಗಳ ಖಾಸಗಿ ವಿವರಗಳನ್ನು ಬಲ್ಲೆವು ಎಂಬಂತೆ ಕಾಣಿಸುವ ಹಾಗೆ ನಟಿಸುವ ಮನೋಶಾಸ್ತ್ರಜ್ಞರಿಗೆ ಮತ್ತು ಇತರ "ಆತ್ಮೀಕ ಸಲಹೆಗಾರರ" ವಂಚನೆಗೆ ಬಲಿಯಾಗುತ್ತಾರೆ. ಅಲ್ಲದೆ ಯಕ್ಷಿಣಿ ಆಚರಣೆಗಳು ಮತ್ತು "ವಿವರಿಸಲ್ಪಡದ ಅತಿಮಾನುಷ" ಸಂಗತಿಗಳು ಸಹ ಇರುತ್ತವೆ.

ಕ್ರೈಸ್ತತ್ವದ ಹೆಸರಿನಲ್ಲಿ ತಂತ್ರಗಳನ್ನು ಬಳಸುವದು ವಿಶೇಷವಾಗಿ ಗಾಬರಿಗೊಳಿಸುವದಾಗಿದೆ. ಅನೇಕ ಸುಳ್ಳು ಬೋಧಕರು ಅದ್ಭುತಗಳನ್ನು ನಡಿಸುವ ಶಕ್ತಿಯಿದೆ, ವಿಶೇಷವಾಗಿ ಸ್ವಸ್ಥತೆಯ ಅದ್ಭುತ ಮಾಡುವ ಶಕ್ತಿಯಿದೆ ಎಂದು ಹೇಳಿಕೊಳ್ಳುತ್ತಾರೆ. ಈ ಹೇಳಿಕೆಯು ಇಂದು ಅದ್ಭುತ ಸ್ವಸ್ಥತೆಯಲ್ಲಿ ನಂಬಿಕೆಯಿರುವವರೆಲ್ಲಾ ಮೋಸಗಾರರು ಎಂಬುದಾಗಿ ಸೂಚಿಸುತ್ತದೆಂದು ಭಾವಿಸಿಕೊಳ್ಳಕೂಡದು. ಕರಿಸ್ಮಾಟಿಕ್ ಚಳುವಳಿಯಲ್ಲಿ ಕೆಲವರು ಸತ್ಯವಂತರು ಹಾಗೂ ಪ್ರಾಮಾಣಿಕರು ಇದ್ದಾರೆ - ಪ್ರಾಮಾಣಿಕವಾಗಿ ತಪ್ಪು ಗ್ರಹಿಕೆಯುಳ್ಳವರು, ಆದರೆ ಪ್ರಾಮಾಣಿಕರು. ಅದಕ್ಕೆ ತದ್ವಿರುದ್ಧವಾಗಿ, ದೊಡ್ಡ "ಸ್ವಸ್ಥತಾ ಪ್ರದರ್ಶನಗಳನ್ನು" ನಡಿಸುವವರು ವಂಚನೆಯಿಂದ ತುಂಬಿರುವವರು ಮೋಸಗಾರರು ಮತ್ತು ವಂಚಕರು ಆಗಿರದೆ ಬೇರೆ ಇನ್ನೇನು ಆಗಿರಲು ಸಾಧ್ಯ ಎಂಬುದನ್ನು ಒಬ್ಬನು ಅರಿತುಕೊಳ್ಳಲು ಸಾಧ್ಯವಿಲ್ಲ. "ಸ್ವಸ್ಥತೆಗಾರರು" ಒಂದು ಹಳೇ "ಮನಸ್ಸುಓದುವ" ತಂತ್ರವನ್ನು ಬಳಸಿ ಅಸ್ಪಷ್ಟವಾದ, ಸಾಮಾನ್ಯವಾಗಿ "ಇಲ್ಲಿ ಯಾರೋ ಒಬ್ಬರಿಗೆ ಪಿತ್ತಕೋಶದಲ್ಲಿ ಸಮಸ್ಯೆಯಿದೆ ಎಂದು ದೇವರು ನನಗೆ ಹೇಳುತ್ತಿದ್ದಾನೆ" ಎಂಬುದಾಗಿ ಹೇಳುವರು ಮತ್ತು ಆ ಹೆಸರು ಹೇಳದ ವ್ಯಕ್ತಿಯು ಗುಣವಾಗಿ ಬಿಟ್ಟಿದ್ದಾನೆಂದು ಘೋಷಿಸುವರು. ಒಂದು ಸರಳವಾದ ತಂತ್ರ ಬಳಸಿ ಸಮಾನವಿಲ್ಲದ ಕಾಲುಗಳನ್ನು ಸಮಾನಗೊಂಡಿರುವಂತೆ ಕಾಣಿಸುವ ಹಾಗೆ ಮಾಡಬಹುದಾಗಿದ್ದು, ಇನ್ನಷ್ಟು ವಿಸ್ತಾರವಾದ ವಂಚನೆಯ ವಿಧಾನಗಳಿಗೆ ಗೂಢಲಿಪಿಗಳು ಅಥವಾ ಮರೆಯಾಗಿಡಲಾಗಿರುವ ಎಲೆಕ್ಟ್ರಾನಿಕ್ ಸಾಧನಗಳ ಮೂಲಕ ಮಾಹಿತಿಯನ್ನು ರವಾನಿಸುವದು ಸೇರಿರುತ್ತದೆ.

Sebastian Brantನು ಹೀಗೆ ಬರೆದದ್ದು ಸರಿಯಾಗಿಯೇ ಇದೆ, "ಲೋಕವು ವಂಚಿಸಲ್ಪಡುವದನ್ನು *ಬಯಸುತ್ತದೆ*."[53] ಯೇಸುವಿನ ಶಿಲುಬೆಯ ಮರಣದ ಬಳಿಕ ದೇಹವು ಸಮಾಧಿಯಲ್ಲಿಡಲ್ಪಟ್ಟ ವೇಳೆ ಸುತ್ತಲಾಗಿದ್ದೆಂದು ಹೇಳಲಾಗುವ ಶವ ಸುತ್ತವ ಬಟ್ಟೆಯನ್ನು ನೋಡುವದಕ್ಕೆ ಜನರು ಗುಂಪಾಗು ಸೇರಿ ಬರುತ್ತಾರೆ. ಆ ಹೇಳಿಕೆಯು ಸರಿಯೆಂಬುದಕ್ಕೆ ಯಾವದೇ ಪುರಾವೆ ಇರುವದಿಲ್ಲ: (1) ಆ ಶವ ಸುತ್ತುವ ಬಟ್ಟೆಯ ಮೂಲವನ್ನು ತಿಳಿಸುವ ದಿನಾಂಕ ತಿಳಿಯಲು ಮಾಡಿದ ಪ್ರಯತ್ನದಿಂದ ಅದು ಹೊಸ ಒಡಂಬಡಿಕೆಯ ನಂತರ ಕಾಲಕ್ಕೆ ಸೇರಿದ್ದೆಂದು ಗೊತ್ತಾಗಿರುತ್ತದೆ. 1171ಕ್ಕೆ ಮುಂಚೆ Constantinopleನಲ್ಲಿ (ಈಗಿನ ಇಸ್ತಾಂಬುಲ್) ಅದರ ಇತಿಹಾಸವು ಅಪರಿಚಿತವಾಗಿರುತ್ತದೆ. (2) ಸುವಾರ್ತೆಯ ಕಥನಗಳ ಪ್ರಕಾರವಾಗಿ, ಯೇಸುವು ಈ ವಿಧವಾದ ಶವ ಸುತ್ತವ ಬಟ್ಟೆಯಿಂದ ಸುತ್ತಲ್ಪಟ್ಟಿರಲಿಲ್ಲ. (3) ಅದರಲ್ಲಿರುವ ಚಿತ್ರವು ಯೇಸುವಿನದ್ದೇ ಎಂಬುದನ್ನು ಸಾಭಿತುಪಡಿಸಲು ಯಾವ ದಾರಿಯೂ ಇರುವದಿಲ್ಲ. ಆ

ದಿನಗಳಲ್ಲಿ ಆ ರೀತಿಯಲ್ಲಿ ಕೆಟ್ಟದ್ದಾಗಿ ನಡಿಸಿಕೊಂಡವರಲ್ಲಿ ಆತನೊಬ್ಬನೇ ಆಗಿರಲಿಲ್ಲ. ಒಂದು ಪೂಜ್ಯನೀಯ ವಸ್ತುವಾಗಿ ಬಳಸಿಕೊಳ್ಳುವ ಸಾಧ್ಯತೆಯಿರುವಂಥ ಹುತಾತ್ಮರ ಅವಶೇಷವು ಸಂರಕ್ಷಿಸಲ್ಪಡುವದನ್ನು ದೇವರು ಅನುಮತಿಸಲಾರನು ಎಂಬುದನ್ನು ನಂಬುವದಕ್ಕೆ ಸಕಲ ಕಾರಣಗಳೂ ಇರುತ್ತವೆ.

ಒಂದು ವಿಗ್ರಹವು ಅಳುವಂತೆ ಅಥವಾ ರಕ್ತ ಸೋರಿಸುವಂತೆ ಕಾಣಿಸಿದಾಗ ಸಾವಿರಾರು ಜನರು "ವಿಗ್ರಹವನ್ನು ನೋಡಿ ಆಶ್ಚರ್ಯಪಡುತ್ತಾರೆ." ಈ ಕಾರ್ಯಗಳು ಸಂಭವಿಸುವಾಗ, ಇದಕ್ಕೆ ಹಲವಾರು ವಿವರಣೆಗಳ ಸಾಧ್ಯತೆಯಿದ್ದು, ಅವುಗಳಲ್ಲಿ ಸುತ್ತಲಿನ ಗಾಳಿಗಿಂತಲೂ ಅಧಿಕ ತಣ್ಣಗಿರುವ ವಸ್ತುವು ಸ್ವಾಭಾವಿಕವಾಗಿ ಬೆವರುವ ಸಾಧ್ಯತೆಯಿಂದ ಹಿಡಿದು ಸಂಪೂರ್ಣ ಮೋಸತನ ಸಹ ಆಗಿರಬಲ್ಲದು. ಭೂಮಿಯೊಳಗಿಂದ ಬಂದ ಮೃಗವು ಈಗಲೂ ತನ್ನ ತಂತ್ರಗಳ ಚೀಲದಲ್ಲಿ ಕೈ ಹಾಕುತ್ತಲೇ ಇರುತ್ತಾನೆ.

ಯೋಹಾನನ ಮಾತುಗಳನ್ನು ಬಳಸಿಕೊಂಡು ಹೇಳುವದಾದರೆ, ಇಂದು ಸೈತಾನನು ಮನುಷ್ಯರನ್ನು ವಂಚಿಸುವ ಎಲ್ಲಾ ದಾರಿಗಳ ಕುರಿತು "ಒಂದೊಂದಾಗಿ ಬರೆಯುವದಾದರೆ ಬರೆಯಬೇಕಾದ ಪುಸ್ತಕಗಳನ್ನು ಲೋಕವೇ ಹಿಡಿಸದೆ ಹೋದೀತೆಂದು ನಾನು ನೆನಸುತ್ತೇನೆ" (ನೋಡಿರಿ ಯೋಹಾನ 21:25). ಸೈತಾನನು ಮೋಸಗೊಳಿಸುವ ಸಕಲ ದಾರಿಗಳ ಸಂಗ್ರಹಪಟ್ಟಿಯನ್ನು ಮಾಡುವದಕ್ಕಿಂತ ಹೆಚ್ಚು ಪ್ರಾಮುಖ್ಯವಾದದ್ದೆಂದರೆ ಎಚ್ಚರವಾಗಿರುವಂತೆ, ಕೆಲವು ಸಾರಿ ಸಂದೇಹವುಳ್ಳವರಾಗಿ ಸಹ ಇರುವಂತೆ - ಮತ್ತು ದೇವರ ವಾಕ್ಯಕ್ಕೆ ವಿರುದ್ಧವಾಗಿರುವ ಯಾವದನ್ನೆ ಆಗಲಿ ಹಾಗೂ ಎಲ್ಲವನ್ನೂ ತಿರಸ್ಕರಿಸುವಂತೆ - ಪ್ರೋತ್ಸಾಹಿಸುವದೇ ಆಗಿದೆ.

ನಾವು ಸೈತಾನನ ಮೋಸತನವನ್ನು ಕುರಿತು ಆಲೋಚಿಸುವ ವೇಳೆ, ನಾವು ನಮ್ಮ ಜೀವಿತಗಳನ್ನು ಪರೀಕ್ಷಿಸಿಕೊಳ್ಳಬೇಕು. ಬೇರೆಯವರ ಕಡೆಗೆ ಬೆರಳು ತೋರಿಸುವದು ಮತ್ತು "ಅವರು ಹೇಗೆ ಅಷ್ಟೊಂದು ಸುಲಭವಾಗಿ ಮೋಸ ಹೋಗುವದಕ್ಕೆ ಸಾಧ್ಯ?" ಎಂದು ಆಶ್ಚರ್ಯದಿಂದ ಹೇಳುವದು ಸುಲಭವಾದದ್ದು. ನಾವು ಪ್ರಾಮಾಣಿಕರಾಗಿದ್ದಲ್ಲಿ, ಸೈತಾನನು ಧಾರ್ಮಿಕ ತಂತ್ರಗಾರಿಕೆಯಿಂದ ಮೋಸಗೊಳಿಸುವ ಪ್ರತಿಯೊಬ್ಬ ವ್ಯಕ್ತಿಗೆ ಸಮಾನವಾಗಿ, ಲೌಕಿಕ ಇಬ್ಬಗೆಯ ಮಾತಿನಿಂದ ನೂರಾರು ಜನರನ್ನು ವಂಚಿಸುತ್ತಾನೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು. ಅಲ್ಲದೆ ನಮ್ಮಲ್ಲಿ ಎಲ್ಲರೂ, ಒಂದಿಲ್ಲಾ ಒಂದು ಸಮಯದಲ್ಲಿ ಆತನ ಸುಳ್ಳುಗಳಿಗೆ ಬಲಿಯಾಗಿದ್ದೇವೆ. ಆತನು ಬಳಸುವ ಹೆಚ್ಚು ಯಶಸ್ವಿಕರವಾದ ವಂಚನೆಗಳು ಇಲ್ಲಿವೆ: "ನೀವು ದೇವರಿಲ್ಲದೆ ಉತ್ತಮವಾಗಿ ಜೀವನ ನಡಿಸಬಲ್ಲಿರಿ"; "*ಈ* ಜೀವನವೇ ಅತಿ ಮುಖ್ಯವಾದದ್ದು; ಮುಂದಿನ ಜೀವನಕ್ಕಾಗಿ ಚಿಂತೆ ಮಾಡಬೇಡ"; "ಸಾಧನೆ ಮತ್ತು ಸ್ವತ್ತುಗಳೇ ಪ್ರಾಮುಖ್ಯವಾದವುಗಳು." ಆತನ ಅತ್ಯಂಥ ಆತ್ಮ-ನಾಶನಕ್ಕೆ ನಡಿಸುವ ಸುಳ್ಳು ಎಂದರೆ "ದೇವರ ಬಳಿಗೆ ಹೋಗಲು ಯೇಸುವಲ್ಲದೆ ಬೇರೆ ದಾರಿಗಳಿರುತ್ತವೆ" ಎಂಬದೆ (ನೋಡಿರಿ ಯೋಹಾನ 14:6; ಅಪೊಸ್ತಲರ ಕೃತ್ಯಗಳು 4:12).

ಜನರು ವಂಚನೆಗೊಳಗಾಗುವದನ್ನು ನೋಡಿದರೆ ದುಃಖವೆನಿಸುತ್ತದೆ. ಪೌಲನು ಹೀಗೆ ಹೇಳಿದನು, "ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ" (2 ಥೆಸಲೋನಿಕ 2:3). ತಮ್ಮನ್ನು ತಾವೇ ಮೋಸಪಡಿಸಿಕೊಳ್ಳುವವರನ್ನು ನೋಡಿದರೆ ಇನ್ನಷ್ಟು ಅಧಿಕ ದುಃಖವಾಗುತ್ತದೆ. ಯಾಕೋಬ 1:26ನೇ ವಚನವು ತನ್ನ "ಹೃಯದವನ್ನು ಮೋಸಗೊಳಿಸುವವನ" ಕುರಿತು ಮಾತಾಡುತ್ತದೆ, ಅದೇ ವೇಳೆಯಲ್ಲಿ 1 ಯೋಹಾನ 1:8ನೇ ವಚನವು "ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ" ಎಂಬುದರ

ಬಗ್ಗೆ ಮಾತಾಡುತ್ತದೆ. ಜ್ಞಾನೋಕ್ತಿ 14:12 ಹೀಗೆ ಹೇಳುತ್ತದೆ, "ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ."

ತಾನು ಕ್ರೈಸ್ತನಾಗುವದಕ್ಕೆ ಮುನ್ನ, ಸೈತಾನನು ತನ್ನನ್ನು ಮೋಸಗೊಳಿಸುವದಕ್ಕೆ ಯಶಸ್ವಿಯಾಗಿದ್ದನೆಂದು ಪೌಲನು ಒಪ್ಪಿಕೊಳ್ಳುತ್ತಾನೆ:

> ನಾವು ಸಹ ಮೊದಲು ಅವಿವೇಕಿಗಳೂ ಅವಿಧೇಯರೂ *ಮೋಸಹೋದವರೂ* ನಾನಾ ವಿಧವಾದ ದುರಾಶೆಗಳಿಗೆ ಮತ್ತು ಭೋಗಗಳಿಗೆ ಅಧೀನರೂ ಕೆಟ್ಟತನ ಹೊಟ್ಟೇಕಿಚ್ಚುಗಳಲ್ಲಿ ಕಾಲಕಳೆಯುವವರೂ ಅಸಹ್ಯರೂ ಒಬ್ಬರನ್ನೊಬ್ಬರು ಹಗೆಮಾಡುವವರೂ ಆಗಿದ್ದೆವು. ಆದರೆ ನಮ್ಮ ರಕ್ಷಕನಾದ ದೇವರ ದಯೆಯೂ ಜನೋಪಕಾರವೂ ಪ್ರತ್ಯಕ್ಷವಾದಾಗ ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟುಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. ನಾವು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಕೃಪೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟು ನಿತ್ಯಜೀವದ ನಿರೀಕ್ಷೆಯನ್ನು ಪಡೆದು ಅದಕ್ಕೆ ಬಾಧ್ಯರಾಗುವಂತೆ ದೇವರು ಆತನ ಮೂಲಕ ಪವಿತ್ರಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು (ತೀತನಿಗೆ 3:3-6; ಒತ್ತಿ ಹೇಳಿದ್ದು ನನ್ನದು).

ನೀವು ಸೈತಾನನಿಂದ ಮೋಸಪಡಿಸಲ್ಪಟ್ಟಿದ್ದರೆ, ಇನ್ನು ಮೇಲೆ ಸೈತಾನನ ಸುಳ್ಳುಗಳನ್ನು ನುಂಗದಿರುದಕ್ಕೆ ದೃಢನಿರ್ಧಾರ ಮಾಡಿಕೊಳ್ಳುವ ಅಗತ್ಯವಿರುತ್ತದೆ. ನೀವು ನಿಮ್ಮ ಕಣ್ಣುಗಳನ್ನು ತೆರೆದು ನಿಮ್ಮ ಮನಸ್ಸುನ್ನು ಎಚ್ಚರಪಡಿಸಿಕೊಳ್ಳುವ ಅಗತ್ಯವಿರುತ್ತದೆ. ನೀವು ಪ್ರತಿಯೊಂದು ವಿಚಾರವನ್ನು ಮತ್ತು ಭಾವನೆಯನ್ನು ವಾಕ್ಯದಿಂದ ಪರೀಕ್ಷಿಸುವೆನೆಂದು ದೃಢತೀರ್ಮಾನ ಮಾಡಿಕೊಳ್ಳುವ ಅಗತ್ಯವಿದೆ. ನೀವು ಕರ್ತನಿಗೆ ವಿಧೇಯನಾಗುವೆನೆಂದು ನಿರ್ಧರಿಸಿಕೊಳ್ಳುವ ಅಗತ್ಯವಿದೆ - ಮತ್ತು ಅದನ್ನು ನೀವು *ಈಗಲೇ* ಮಾಡುವ ಅಗತ್ಯವಿದೆ.

ಸೈತಾನನು ನಿಮ್ಮನ್ನು ಸಂತೋಷಗೊಳಿಸಲು ಶಕ್ತಿಯಿದೆ, ನಿಮ್ಮ ಜೀವನವನ್ನು ಸಾರ್ಥಕಗೊಳಿಸುವ ಶಕ್ತಿಯಿದೆ, ನಿಮ್ಮ ಜೀವಿತವನ್ನು ಅರ್ಥಪೂರ್ಣಗೊಳಿಸುವ ಶಕ್ತಿಯದೆ ಎಂದು ಹೇಳಿಕೊಳ್ಳುತ್ತಾನೆ. ಆತನು ಸುಳ್ಳು ಹೇಳುತ್ತಿದ್ದಾನೆ! ಆತನಲ್ಲಿ ಅಂಥ ಶಕ್ತಿಯು ಇಲ್ಲ. ದೇವರಲ್ಲಿ ಮಾತ್ರವೇ ಆ ಶಕ್ತಿಯಿದೆ - ಮತ್ತು ಇವುಗಳು ಆತನ ಮೇಲೆಯೇ ತಮ್ಮ ಹೃದಯಗಳನ್ನು ಕೇಂದ್ರಿಕರಿಸಿದ್ದವರಿಗೆ ಆತನು ನೀಡಿದ ವರದಾನಗಳಾಗಿವೆ.

## ವಿಗ್ರಹಗಳನ್ನು ಆರಾಧಿಸುವದು (13:4)

13:4ರ ಪ್ರಕಾರವಾಗಿ, ಮೃಗವನ್ನು ಆರಾಧಿಸುವದು (ಚಕ್ರವರ್ತಿ) ಘಟಸರ್ಪನನ್ನು (ಸೈತಾನನ್ನು) ಆರಾಧಿಸಿದಂತೆಯೇ ಆಗಿತ್ತು. ಸುದ್ದಿ ಪತ್ರಿಕೆಗಳು ಕೆಲವು ಜನರ ಸಮುದಾಯಗಳಲ್ಲಿ "ಸೈತಾನನ ಆರಾಧನೆ" ಎಂಬುದಾಗಿ ವರದಿ ಮಾಡಿದರೆ ಅವರು ಬೇಸರಗೊಳ್ಳುತ್ತಾರೆ. ಅವರು ಗ್ರಹಿಸಿಕೊಳ್ಳದಿರುವದೇನೆಂದರೆ ಆ ವಿಧವಾದ ಅನ್ಯಧರ್ಮಿಯ ಪೂಜೆಗಳಲ್ಲಿ ಸಿಕ್ಕಿಕೊಳ್ಳುವ ಪ್ರತಿಯೊಬ್ಬ ವ್ಯಕ್ತಿಗೆ ಸಮವಾಗಿ, ಕರ್ತನಾದ ದೇವರನ್ನು ಸೇವಿಸುವದಕ್ಕಿಂತ ಬೇರೆ ಸಂಗತಿಗಳಿಗೆ ಆದ್ಯತೆಯನ್ನು ಕೊಡುವ ಮೂಲಕ ಸಾವಿರಾರು ಜನರು "ಸೈತಾನನನ್ನು ಆರಾಧಿಸುತ್ತಾರೆ" ಎಂಬುದೆ.

## ಸುಳ್ಳು ಪ್ರವಾದಿ (13:11-18)

13:11-18ರ ಮೇಲೆ "ಸುಳ್ಳು ಪ್ರವಾದಿ" ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಪ್ರಸಂಗವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. Merrill Tenneyನಿಂದ ತೆಗೆದುಕೊಳ್ಳಲಾಗಿರುವ ಈ ಕೆಳಗಿನ ಸಂಕ್ಷಿಪ್ತ ವಿವರಣೆಯನ್ನು ಬಳಸಬಹುದು: (1) ಆತನ ವ್ಯಕ್ತಿ, (2) ಆತನ ಶಕ್ತಿ, (3) ಆತನ ಪಾಲು.[54] ಇನ್ನೊಂದು ವಿಧ ಇಲ್ಲಿದೆ, ಇದನ್ನು Charles Ryrieನಿಂದ ತೆಗೆದುಕೊಳ್ಳಲಾಗಿದೆ: (1) ಆತನ ಚಹರೆ, (2) ಆತನ ಗುರಿ, (3) ಆತನ ಅಧಿಕಾರ, (4) ಆತನ ವೇದನೆ.[55]

## ಇಂದಿನ ಭೂಮಿಯಿಂದ ಬಂದ ಮೃಗ (13:11-18)

ಭೂಮಿಯಿಂದ ಮೃಗವನ್ನು ಚಕ್ರವರ್ತಿಯ ಆರಾಧನೆಯನ್ನು ಜಾರಿಗೆ ತರುವ ಸಂಸ್ಥೆಗಳೆಂಬುದಾಗಿ ಗುರುತಿಸಿದ ಬಳಿಕ, ಇಂದು 13:11-18 ನಮಗೆ ಯಾವದೇ ಅರ್ಥವನ್ನು ಹೊಂದಿರುವದಿಲ್ಲವೆಂದು ನಂಬುವೆವೋ? ನಮ್ಮಲ್ಲಿ ಬಹಳಷ್ಟು ಮಂದಿ ನಮ್ಮ ದೇಶಗಳ ನಾಯಕರ ವಿಗ್ರಹಗಳ ಮುಂದೆ ನಮಸ್ಕರಿಸುವ ಅಗತ್ಯವಿರುವದಿಲ್ಲ; ನಾವು "ನಮ್ಮ ನಾಯಕನೇ ನಮ್ಮ ದೇವರು" ಎಂದು ಹೇಳಲು ನಿರಾಕರಿಸಿದರೆ ನಮ್ಮನ್ನು ಮರಣಕ್ಕೇನೂ ಒಪ್ಪಿಸುವದಿಲ್ಲ! ಆದರೂ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದದ್ದೇನೆಂದರೆ, 9ನೇ ವಚನವು 13ನೇ ಅಧ್ಯಾಯದ ಸಂದೇಶಗಳು ಪ್ರತಿಯೊಂದು ಯುಗದಲ್ಲೂ ಅನ್ವಯವನ್ನು ಹೊಂದಿವೆ ಎಂಬುದೆ: "ಕಿವಿಯುಳ್ಳವನು ಕೇಳಲಿ."

ಒಂದು ಸ್ಪಷ್ಟವಾದ ಅನ್ವಯಿಸುವಿಕೆ ಇರುವಂತೆ ತೋರುವದು ಸಭೆ ಹಾಗೂ ಸರ್ಕಾರಗಳು ಒಂದಾಗಿ ಕೈಜೋಡಿಸಿ ಧಾರ್ಮಿಕ ಸ್ವಾತಂತ್ರ್ಯವನ್ನು ಹತ್ತಿಕ್ಕುವದಕ್ಕೆ ದುಡಿಯುವ ದೇಶಗಳಿಗೆ ಆಗಿರುತ್ತದೆ. Albert Baldingerನು ಪ್ರಸ್ತಾಪವಿಟ್ಟಿದ್ದೇನೆಂದರೆ, "ಯೋಹಾನನ ಭೂಮಿಯಿಂದ ಬಂದ ಮೃಗವು ಪ್ರಾಥಮಿಕವಾಗಿ ಕೈಸರನ ಆರಾಧನೆಯಾಗಿದ್ದು, ಅದು ರಾಜಕೀಯ ಉದ್ದೇಶಗಳಿಗಾಗಿ ಸರ್ಕಾರದಿಂದ ನಿಯಂತ್ರಿಸಲ್ಪಡುವ ಮತ್ತು ಜಾರತ್ವಮಾಡಿರುತ್ತದೋ ಅಂಥಹ ಯಾವದೇ ಧರ್ಮವನ್ನು ಸಹ ಅಷ್ಟೇ ಪ್ರತಿನಿಧಿಸುವದಾಗಿದೆ."[56] ಅನೇಕ ರಾಜಕೀಯ ನಾಯಕರು ಧರ್ಮವನ್ನು ನಾಶಗೊಳಿಸುವದಕ್ಕಿಂತಲೂ ಅದನ್ನು ತಮ್ಮ ಸ್ವಂತ ಉದ್ದೇಶಗಳಿಗಾಗಿ ಭ್ರಷ್ಟಗೊಳಿಸುವದು ಹೆಚ್ಚು ಲಾಭದಾಯಕವೆಂಬುದನ್ನು ಕಲಿತುಕೊಂಡಿರುತ್ತಾರೆ.

ಹೇಗೂ, ಈ ಅನ್ವಯಿಕೆಯು ಸಾಂಕೇತಿಕತೆಯ ಮಹತ್ವವನ್ನು ಇಲ್ಲದಂತಾಗಿಸುವದಿಲ್ಲ. ಭೂಮಿಯಿಂದ ಬಂದ ಮೃಗಕ್ಕಿದ್ದ ವಿಶೇಷ ವರವೆಂದರೆ - ಮತ್ತು ಇರುವ ವರವೆಂದರೆ - ಮನುಷ್ಯರನ್ನು ಮೋಸಗೊಳಿಸಿ, ಸುಳ್ಳು ಆರಾಧನೆಗೆ ನಡಿಸುವದಕ್ಕೆ ಅದಕ್ಕಿರುವ ಸಾಮರ್ಥ್ಯವೇ ಆಗಿದೆ. Homer Haileyನು ಹೇಳಿದ ಹಾಗೆ, ಭೂಮಿಯಿಂದ ಬಂದ ಮೃಗವು "ಅದಾದ ಬಳಿಕ ಬಂದ ಸಕಲ ಸುಳ್ಳು ಆರಾಧನೆಯ ವಿಧಗಳನ್ನು ಪ್ರತಿಬಿಂಬಿಸಿತ್ತು, ಅದರಲ್ಲಿ ಪೋಪ್ ಪ್ರಭುತ್ವ ಮತ್ತು ಇನ್ನು ಅನೇಕ ಸುಳ್ಳು ಧರ್ಮದ ವ್ಯವಸ್ಥೆಗಳು ಸೇರಿರುತ್ತವೆ."[57]

ತಪ್ಪಾದ ಬೋಧನೆಗಳನ್ನು ಮಾಡುವ ಉಪದೇಶಕರ ವಿಷಯವಾಗಿ ಹೊಸ ಒಡಂಬಡಿಕೆಯು ಬಹಳಷ್ಟನ್ನು ತಿಳಿಸುತ್ತದೆ. ಯೇಸುವು "ಬಹುಮಂದಿ ಸುಳ್ಳುಪ್ರವಾದಿಗಳು ಸಹ ಎದ್ದು ಅನೇಕರನ್ನು ಮೋಸಗೊಳಿಸುವರು" ಎಂದು ಹೇಳಿದನು (ಮತ್ತಾಯ 24:11; ನೋಡಿರಿ ಮತ್ತಾಯ 7:15; 24:24; ಮಾರ್ಕ 13:22). ಪೇತ್ರನು ಎಚ್ಚರಿಸಿದ್ದೇನೆಂದರೆ "ನಿಮ್ಮಲ್ಲಿಯೂ ಸುಳ್ಳುಬೋಧಕರು ಇರುವರು. ಅವರು ನಾಶಕರವಾದ ಮತಭೇದಗಳನ್ನು ಕಳ್ಳತನದಿಂದ ಹುಟ್ಟಿಸುವವರೂ ..." (2 ಪೇತ್ರ 2:1). ಯೋಹಾನನು "ನಿಮ್ಮನ್ನು ಸನ್ಮಾರ್ಗದಿಂದ

ತಪ್ಪಿಸಬೇಕೆಂದಿರುವವರ" ಬಗ್ಗೆ ಮಾತಾಡಿದನು (1 ಯೋಹಾನ 2:26). ಎರಡನೆಯ ಮೃಗದ ಆತ್ಮವು ಈಗಲೂ ಪ್ರಪಂಚದಾದ್ಯಂಥ ಲಕ್ಷಾಂತರ ಜನರನ್ನು ಮೋಸಗೊಳಿಸುತ್ತಿರುವ ಸುಳ್ಳು ಬೋಧಕರೊಳಗೆ ಜೀವಿಸುವದಾಗಿದೆ.

ತಪ್ಪಾದ ಬೋಧನೆಯನ್ನು ಮಾಡುವವರು ಸುಲಭವಾಗಿ ಗುರುತಿಸಲ್ಪಡಬಲ್ಲರೋ? ಇಲ್ಲ. ಸೈತಾನನ ಮಧ್ಯವರ್ತಿಗಳು ತಾವು ಏನಾಗಿರುವದಿಲ್ಲವೋ ಆ ವಿಧದಲ್ಲಿ ಕಾಣಿಸಿಕೊಳ್ಳುವವರಾಗಿದ್ದಾರೆಂಬುದು ಈಗಲೂ ಸತ್ಯವೇ ಆಗಿದೆ. ಪೌಲನು "ಕ್ರಿಸ್ತನ ಅಪೊಸ್ತಲರು" ಎಂದು ಹೇಳಿಕೊಂಡವರ ಕುರಿತಾಗಿ ಬರೆಯುವ ವೇಳೆ, ಅದಕ್ಕೆ ಆಶ್ಚರ್ಯಪಡಬೇಡಿರಿ ಎಂದು ತನ್ನ ವಾಚಕರಿಗೆ ತಿಳಿಸಿದನು, "ಸೈತಾನನು ತಾನೇ ಪ್ರಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕಿಕೊಳ್ಳುವಾಗ ಅವನ ಸೇವಕರು ಸಹ ನೀತಿಗೆ ಸೇವಕರಾಗಿ ಕಾಣಿಸುವದಕ್ಕೆ ವೇಷಹಾಕಿಕೊಳ್ಳುವದು ದೊಡ್ಡದಲ್ಲ" (2 ಕೊರಿಂಥ 11:14, 15).

ಸುಳ್ಳು ಬೋಧಕರು ಅನೇಕ ಸಾರಿ ಮೊದಲ ನೋಟದಲ್ಲಿ ಉತ್ತಮ ಅಭಿಪ್ರಾಯ ಮೂಡುವಂತೆ ಮಾಡುವರು. ಒಂದು ಧಾರ್ಮಿಕ ಗುಂಪು ಯೇಸುವಿನ ವಿಶಿಷ್ಟವಾದ ಪುತ್ರತ್ವವನ್ನು ನಿರಾಕರಿಸುತ್ತಾರಾದರೂ ತನ್ನನ್ನು "ಕ್ರೈಸ್ತರು" ಎಂದು ಕರೆದುಕೊಳ್ಳುತ್ತದೆ. ಇತ್ತೀಚಿನ ವರ್ಷಗಳಲ್ಲಿ, ಈ ಸಂಸ್ಥೆಯು ಕುಟುಂಬ-ಗುರಿಹೊಂದಿರುವದೆಂದು ಜಾಹಿರಾತುಪಡಿಸಿಕೊಳ್ಳಲು ಟವಿ ಜಾಹಿರಾತುಗಳಿಗಾಗಿ ಲಕ್ಷಾಂತರ ಡಾಲರ್ ಖರ್ಚು ಮಾಡಿರುತ್ತದೆ. ಈ ಜಾಹಿರಾತು ಕುಟುಂಬ ಒಡೆದು ಹೋಗುವ ಬಗ್ಗೆ ಕಾಳಜಿಯಿರುವವರ ಮನಸ್ಸಿನ ಮೇಲೆ ಉತ್ತಮ ಛಾಪು ಮೂಡಿಸುತ್ತದೆ.

ಸುಳ್ಳು ಪ್ರವಾದಿಗಳು ಭಕ್ತಿಯ ಮುಖವಾಡಗಳನ್ನು ಹಾಕಿಕೊಳ್ಳಲು ಶಕ್ತರಾದರೆ, ಅವರಿಂದ ಮೋಸಹೋಗದಂತೆ ನಮ್ಮನ್ನು ದೂರವಿಟ್ಟುಕೊಳ್ಳಲು ನಮ್ಮಿಂದ ಹೇಗೆ ಸಾಧ್ಯ? ಯೋಹಾನನು ಹೀಗೆ ಹೇಳಿದನು, "ಪ್ರಿಯರೇ, ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು" (1 ಯೋಹಾನ 4:1). ಅವರನ್ನು ಪರೀಕ್ಷಿಸುವದು ಹೇಗೆ? ದೇವರ ವಾಕ್ಯದಿಂದಲೇ. ಅವರ *ಉಪದೇಶ*ವನ್ನು ನಾವು ವಾಕ್ಯದಿಂದ ಪರೀಕ್ಷಿಸಬೇಕು - ಅವರೆಲ್ಲಾ ಉಪದೇಶವನ್ನು ಪರೀಕ್ಷಿಸಬೇಕು, ಹೊರತು ಕೇವಲ ಸಂದೇಹ ಬರದಂಥ ಉಪದೇಶಕ್ಕೆ ಹೋಗುವ ಮುನ್ನ ಮಾತಾಡುವ ಪ್ರಲೋಭನದ ಮಾತುಗಳನ್ನಷ್ಟೆ ಅಲ್ಲ. ಅಲ್ಲದೆ, ನಾವು ಅವರ *ಜೀವಿತಗಳನ್ನು* ವಾಕ್ಯದಿಂದ ಪರೀಕ್ಷಿಸಬೇಕು. ನಾವು "ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು" (ಎಫೆಸ 4:14). ಪೌಲನು ಹೀಗೆ ಹೇಳಿದನು,

> ... ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನೂ ವಿಘ್ನಗಳನ್ನೂ ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿಹೋಗಿರಿ ... ಅಂಥವರು ... ನಯದ ನುಡಿಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕಪಟಿಗಳ ಹೃದಯಗಳನ್ನು ಮೋಸಗೊಳಿಸುತ್ತಾರೆ" (ರೋಮಾ 16:17, 18).

ಬೆರೋಯದವರು ಪ್ರಶಂಸಿಸಲ್ಪಟ್ಟರು ಯಾಕೆಂದರೆ ಅವರು ಪೌಲನ ಬೋಧನೆಯನ್ನು ದೇವರ ವಾಕ್ಯದೊಂದಿಗೆ ಹೋಲಿಸಿ ನೋಡಿ ಪರೀಕ್ಷಿಸಿದರು (ಅಪೊಸ್ತಲರ ಕೃತ್ಯಗಳು 17:11).

ಸತ್ಯದ ಉಪದೇಶಕರು ಅಂಥಹ ಪರೀಕ್ಷಿಸುವಿಕೆಗಳಿಂದ ಅವಮಾನವನ್ನು ಅನುಭವಿಸುವದಿಲ್ಲ. ಎಲ್ಲಾ ಉಪದೇಶವನ್ನು ವಾಕ್ಯದೊಂದಿಗೆ ಪರೀಕ್ಷಿಸಬೇಕು.

---

## ಅಡಿಟಿಪ್ಪಣಿಗಳು

[1]Myer Pearlman, *Windows Into the Future: Devotional Studies in the Book of Revelation* (Springfield, Mo.: Gospel Publishing House, 1941), 111. [2]William Barclay, *The Revelation of John*, vol. 2, rev. ed., The Daily Study Bible Series (Philadelphia: Westminster Press, 1976), 89. [3]Hugo McCord, *The Royal Route of Revelation* (Nashville: 20th Century Christian, 1976), 39. [4]Eddie Cloer, Unpublished lecture notes on Revelation, n.d. [5]James M. Efird, *Revelation for Today* (Nashville: Abingdon Press, 1989), 89. [6]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 67. [7]Suetonius *The Twelve Caesars* 6.57; Tacitus *Histories* 1.2, 78; 2.8–9; Dio Cassius *Roman History* 66.19.3. [8]Dio Chrysostom *Discourse* 21.10. [9]Tertullian *Apology* 5. [10]Barclay, 94.

[11]Owen L. Crouch, *Expository Preaching and Teaching: Revelation* (Joplin, Mo.: College Press Publishing Co., 1985), 237. [12]Barclay, 97. [13]Eugene H. Peterson, *Reversed Thunder* (San Francisco: HarperCollins Publishers, 1988), 125. [14]M. Robert Mulholland, Jr., *Revelation: Holy Living in an Unholy World*, Francis Asbury Press Commentary, ed. M. Robert Mulholland, Jr. (Grand Rapids, Mich.: Francis Asbury Press, 1990), 227. [15]T. F. Glasson, *The Revelation of John*, The Cambridge Bible Commentary on the New English Bible, ed. P. R. Ackroyd, A. R. C. Leaney, and J. W. Packer (Cambridge: Cambridge University Press, 1965), 81. [16]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 75. [17]Ray Summers, *Worthy Is the Lamb* (Nashville: Broadman Press, 1951), 178. Full details on the various councils which promoted worship of both Caesar and the empire are given in W. M. Ramsay, *The Letters to the Seven Churches of Asia*, William M. Ramsay Library, vol. 10 (N.p., 1904; reprint, Grand Rapids, Mich.: Baker Book House, 1979). [18]Frank Pack, *Revelation*, Part 2 (Austin, Tex.: R. B. Sweet Co., 1965), 11. [19]Pliny *Letters to Trajan* 96. ಈ ಪತ್ರವು ಸುಮಾರು ಕ್ರಿಶ. 111-13ರ ವೇಳೆಯಲ್ಲಿ ಬರೆಯಲ್ಪಟ್ಟಿತು. [20]Baldinger, 68.

[21]Martin H. Franzmann, *The Revelation to John* (St. Louis: Concordia Publishing House, 1976), 96. [22]Barclay, 98. [23]Edward P. Myers, *After These Things I Saw: A Study of Revelation* (Joplin, Mo.: College Press Publishing Co., 1997), 241. [24]Adela Yarbro Collins, *The Apocalypse* (Wilmington, Del.: Michael Glazier, 1979), 96. [25]See Owen Olbricht, "Miracles & the Holy Spirit," *Truth for Today* 19 (January 1999): 31–36. [26]ನೋಡಿರಿ Steven J. Scherrer, "Signs and Wonders in the Imperial Cult: A New Look at a Roman Religious Institution in the Light of Rev. 13:13–15," *Journal of Biblical Literature* 103 (December 1984): 599–610. [27]Merrill C. Tenney, *The Book of Revelation,* Proclaiming the New Testament (Grand Rapids, Mich.: Baker Book House, 1963), 68. [28]Mulholland, 236. [29]Pack, 11. ಅಂತಹ ಒಂದು ಪ್ರಮಾಣಪತ್ರದ ಉದಾಹರಣೆಗಾಗಿ, ನೋಡಿರಿ W. B. West, Jr., *Revelation Through First Century Glasses*, ed. Bob Prichard (Nashville: Gospel Advocate Co., 1997), 95. [30]Tenney, 66.

[31]Barclay, 100. [32]Mulholland, 238. [33]William Taylor Smith, "Number," in *The International Standard Bible Encyclopedia*, ed. James Orr (Grand Rapids, Mich.: Wm. B. Eerdmans Publishing Co., 1960), 4:2162. [34]Irenaeus *Against Heresies* 5.30.3. [35]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 175. [36]Leon Morris, *Revelation*, rev. ed., The Tyndale New Testament Commentaries, ed. Leon Morris

(Grand Rapids, Mich.: Wm. B. Eerdmans Publishing Co., 1987), 38–39. [37]Frank Pack, Unpublished class notes, Spring 1956. [38]William Hendriksen, *More Than Conquerors* (Grand Rapids, Mich.: Baker Book House, 1954), 273. [39]Alan Johnson, *Revelation*, The Expositor's Bible Commentary, ed. Frank E. Gaebelein (Grand Rapids, Mich.: Zondervan Publishing House, 1981), 12:534. [40]Franzmann, 98.

[41]Smith, 2162. [42]Baldinger, 74. [43]Hendriksen, 273. [44]Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 205. [45]See William F. Ardnt and F. Wilbur Gingrich, *A Greek-English Lexicon of the New Testament and Other Early Christian Literature*, 4th ed. (Chicago: University of Chicago Press, 1957), 900. [46]See C. G. Wilke and Wilibald Grimm, *A Greek-English Lexicon of the New Testament,* trans. and rev. Joseph H. Thayer (Edinburgh: T. & T. Clark, 1901; reprint, Grand Rapids, Mich.: Regency Reference Library, n.d.), 676. [47]Mulholland, 239. [48]Baldinger, 75. [49]Hendriksen, 182. [50]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 299.

[51]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 605. [52]Charles Caldwell Ryrie, *Revelation* (Chicago: Moody Press, 1968), 82–84. [53]Sebastian Brant (c. 1458–1521), *The Ship of Fools* (1494); quoted in John Bartlett, *Bartlett's Familiar Quotations*, 16th ed., ed. Justin Kaplan (Boston: Little, Brown and Co., 1992), 135. [54]Tenney, 68–70. [55]Ryrie, 82–87. [56]Baldinger, 69. [57]Hailey, 293.